ಜನಶಕ್ತಿ


ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 07, ಸಂಚಿಕೆ 36
ಸೆಪ್ಟಂಬರ್ 8, 2013 ಪುಟ 16 ರೂ. 10/-



ಬಿಜೆಪಿ ಸೇಡಿಗೆ ಬಲಿಯಾದ ಜೆಡಿಎಸ್





ಮತ್ತೆ ಬರಲಿದೆ 'ಎಸ್ಮಾ'?

ಆಹಾರ ಹಕ್ಕಿನ ಕಾಯ್ದೆ ಬಂದಿದೆಯಲ್ಲಾ ! ಹಸಿದ ಹೊಟ್ಟೆಯಲಿ ಇನ್ನ್ಯಾರೂ ಮಲಗುವುದಿಲ್ಲ !!



ಸಿರಿಯಾ ಮೇಲೆ ಯುದ್ಧದ ಕಾರ್ಮೋಡಗಳು



ಪರ್ಯಾಯ ಧೋರಣೆಗಳಿಗಾಗಿ ಎಡಪಕ್ಷಗಳ ಸಮಾವೇಶ

ಬಂಡವಾಳಶಾಹಿ 'ಸುವರ್ಣಯುಗ'ದ ಬೆನ್ನಹಿಂದೆ

ಶ್ರೀಮಂತವಾಗಿದ್ದ ಯೂರೋಪಿನ ಜನಜೀವನ ಇಂದು ಮೊದಲಿನಂತಿಲ್ಲ. ಬಹಳಷ್ಟು ಬದಲಾಗಿದೆ. ಪ್ರತಿದಿನ ಬೆಳಿಗ್ಗೆ ವರ್ತಮಾನ ಪತ್ರಿಕೆಗಳು ಮನೆಬಾಗಿಲಿಗೆ ಬಂದು ಬಿದ್ದಾಗ "ಇವತ್ತೇನು ಇರಬಹುದು ಕೆಟ್ಟ ವಾರ್ತೆ" ಎಂದು ಆತಂಕದಿಂದಲೇ ಉದ್ಗರಿಸುವ ಪರಿಪಾಠ ಅತೀ ಸಾಮಾನ್ಯವಾಗಿ ಹೋಗಿರುವುದರ ಮಟ್ಟಿಗೆ ಅಲ್ಲಿನ ಪರಿಸ್ಥಿತಿ ಹದಗೆಟ್ಟಿದೆ.

ಮೊದಲಿಗೆ ಯುರೋಪಿಯನ್

ಯುರೋಪಿಯನ್ ಆರ್ಥಿಕತೆಯಲ್ಲಿ ಗಂಭೀರ ಬಿಕ್ಕಟ್ಟು –

ಬಂಡವಾಳಶಾಹಿ ಅಭಿವೃದ್ಧಿಯ 'ಸ್ವರ್ಗ'ವೆಂದು ಬಿಂಬಿಸಲಾಗುತ್ತಿದ್ದ ಯುರೋಪ್ ದೇಶಗಳ ಅಭಿವೃದ್ಧಿ ಮತ್ತು ಸುದೀರ್ಘ ಅವಧಿಯ 'ಸುವರ್ಣ ಯುಗ'ದ ಹಿಂದೆ ಜಗತ್ತಿನ ಕಾರ್ಮಿಕ ವರ್ಗ ನಡೆಸಿದ ವರ್ಗ ಹೋರಾಟ ಮತ್ತು ಅಸಮಾನ –ಶೋಷಕ ಬಂಡವಾಳಶಾಹಿ ವ್ಯವಸ್ಥೆಗೆ ಸವಾಲೆಸೆದು ನಿಂತು ಒಂದು ಉನ್ನತ ಮಾನವೀಯ ಸಾಮಾಜಿಕ ವ್ಯವಸ್ಥೆಯ ಕಣ್ಣೋಟವನ್ನು ಜಗತ್ತಿಗೆ ನೀಡಿದ 'ಸಮಾಜವಾದಿ ಶಕ್ತಿ'ಗಳ ಸಾಧನೆ ಇದೆ ಎಂಬುದನ್ನು ನಾವು ಮರೆಯುವಂತಿಲ್ಲ.



ಎಂ. ರತ್ನಾಕರ ಶೆಣೈ. ಭಾಗ-3

ಸಮುದಾಯದ ಬಗ್ಗೆ ಸ್ವಲ್ಪ ವಿವರಗಳು ಅಗತ್ಯ. ಯೂರೋಪ್ ಖಂಡದಲ್ಲಿ 47 ದೇಶಗಳಿವೆ.

1989 ರಲ್ಲಿ ಸೋವಿಯತ್ ಒಕ್ಕೂಟ ಪತನವಾಗುವುದಕ್ಕೆ ಮೊದಲು ಈ 47 ದೇಶಗಳಲ್ಲಿ, 21 ದೇಶಗಳು ಒಂದೋ ಆಗಿನ ಸೋವಿಯತ್ ಒಕ್ಕೂಟದ ಭಾಗವಾಗಿದ್ದವು, ಇಲ್ಲವೇ ಸ್ವತಂತ್ರ ಸಮಾಜವಾದೀ ರಾಷ್ಟ್ರಗಳಾಗಿದ್ದವು. ಆ ನಂತರ ಸೋವಿಯತ್ ಒಕ್ಕೂಟದಿಂದ ಸಿಡಿದು ಹಲವು ಹೊಸ ದೇಶಗಳು ಮೂಡಿ ಬಂದವು. ಸಾಮ್ರಾಜ್ಯಶಾಹಿಗಳ ಕುಮ್ಮಕ್ಕಿನಿಂದ ಹಾಗೂ ನೇರ ಮಧ್ಯ ಪ್ರವೇಶದ ಮೂಲಕ ನಡೆದ ತೀವ್ರ ಅಂತಃಕಲಹದ ಫಲವಾಗಿ ಆಗಿನ ಯೂಗೋಸ್ಲೇವಿಯಾ ನುಚ್ಚುನೂರಾಗಿ ಬೋಸ್ನಿಯಾ – ಹರ್ಜೆಗೋವಿನಾ, ಸರ್ಬಿಯಾ, ಕ್ರೋಷಿಯಾ, ಸ್ಲೊವೇಕಿಯಾ, ಮಸಡೊನಿಯಾ ಹಾಗೂ ಮಾಂಟೆನಿಗ್ರೊ ಎಂದು ಆರು ಸ್ವತಂತ್ರ ದೇಶಗಳಾಗಿ ಹಂಚಿಹೋಗಿದೆ. ಅಂತೆಯೇ ಅಲ್ಬೇನಿಯಾದ ಭಾಗವಾಗಿದ್ದ ಕೊಸೋವೊ ಪ್ರತ್ಯೇಕಗೊಂಡು ಸ್ವತಂತ್ರ ದೇಶವಾಗಿದೆ.

ಎರಡನೇ ಮಹಾಯುದ್ದದ ನಂತರದಲ್ಲಿ ಯೂರೋಪಿನ ಸಾಮಾಜಿಕ-ರಾಜಕೀಯ ಪರಿಸ್ಥಿತಿಯಲ್ಲಿ ಬಹಳಷ್ಟು ಏರು-ಪೇರುಗಳಾದವು. ಅದಾಗಲೇ ಪ್ರಬಲಶಕ್ತಿಯಾಗಿ ಬೆಳೆಯುತ್ತಿದ್ದ ಸೋವಿಯತ್ ಒಕ್ಕೂಟದ ಸಮಾಜವಾದೀ ಆರ್ಥಿಕ ಕಾರ್ಯಕ್ರಮಗಳು ಮತ್ತು ಸಾಧಿಸುತ್ತಿದ್ದ ಬೆಳವಣಿಗೆಗಳಿಂದ ಯೂರೋಪಿನ ದುಡಿಯುವ ಜನತೆ ಅತ್ಯಂತ ಪ್ರಭಾವಿತವಾಗಿತ್ತು. ದುಡಿಯುವ ಕೈಗಳಿಗೆ ಕೆಲಸ, ವಾಸಕ್ಕೆ ಮನೆ, ಉಚಿತ ಶಿಕ್ಷಣ ಮತ್ತು ಆರೋಗ್ಯದ ಸೇವೆಗಳು ಇವೆಲ್ಲವನ್ನು ವ್ಯವಸ್ಥೆಯೇ ಒದಗಿಸುವ ಪರಂಪರೆ ಅವರೆದುರು ಒಂದು ಹೊಸಲೋಕದ ಚಿತ್ರವನ್ನೇ ತೆರೆದಿಟ್ಟಿತ್ತು. ಅಂತಹ ಸಾಮಾಜಿಕ/ರಾಜಕೀಯ ಬದಲಾವಣೆಗಳಿಗಾಗಿ ಅವರಲ್ಲಿನ ತುಡಿತ ವ್ಯಾಪಕವಾಗಿತ್ತು. ಅಲ್ಲದೇ ಯುದ್ಧದಿಂದಾಗಿ ಯೂರೋಪಿನ ದೇಶಗಳು ಲಕ್ಷಾಂತರ ಸಂಖ್ಯೆಯ ಯುವ ಮತ್ತು ಪ್ರೌಢ ಜನವಿಭಾಗಗಳನ್ನು ಕಳೆದುಕೊಂಡಿದ್ದವು. ಯುದ್ಧದ ನಂತರದ ಕಾಲಘಟ್ಟದಲ್ಲಿ ದೇಶದೇಶಗಳನ್ನು ಪುನಃ ಕಟ್ಟುವ ಕಾಯಕ ಸಫಲವಾಗಲು ದುಡಿಮೆಯ ಕೈಗಳ ಅಗತ್ಯ ಅವುಗಳಿಗೆ ಬಹಳವಾಗಿತ್ತು.

ಅಲ್ಲದೇ ಸಮಾಜವಾದೀ ಸೈದ್ಧಾಂತಿಕ ತಿಳುವಳಿಕೆಗಳು ತಮ್ಮ ದೇಶಗಳಲ್ಲಿ ಇನ್ನಷ್ಟು ವ್ಯಾಪಿಸಿ ರಾಜಕೀಯ ಬದಲಾವಣೆಗೆ ದಾರಿ ಮಾಡಬಹುದು ಎಂಬ ಭೀತಿ ಆಳುವ ಜನರನ್ನು ಅತೀವವಾಗಿ ಕಾಡುತ್ತಿತ್ತು. ಆದುದರಿಂದಲೇ ಸುಭದ್ರ ಉದ್ಯೋಗದ ಜತೆಗೆ ಕೈತುಂಬಾ ಸಂಬಳ, ವಸತಿ, ಆರೋಗ್ಯ, ಶಿಕ್ಷಣ, ನಿವೃತ್ತಿಯ ನಂತರದ ಸೌಲಭ್ಯಗಳು ಇತ್ಯಾದಿಗಳನ್ನು ಧಾರಾಳವಾಗಿಯೇ ಆಳುವ ಜನ ದುಡಿಮೆಗಾರರಿಗೆ ಒದಗಿಸಿಕೊಟ್ಟರು. ಈ ಕಲ್ಯಾಣರಾಜ್ಯದ ಹತ್ತುಹಲವು ರೂಪಗಳು ಇಡೀ ಯೂರೋಪಿನಲ್ಲಿ ಕಂಡು ಬರುತ್ತಿದ್ದವು. ಈ ಹೊಸದಾದ ಪರಿಸರದಲ್ಲಿ ಯೂರೋಪ್ ಚೇತರಿಸಿಕೊಂಡಿದ್ದು ಮಾತ್ರವಲ್ಲ, ಅದ್ಭುತವಾದ ಪ್ರಗತಿ ಸಾಧಿಸಿತು. ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಾ ಬೃಹತ್ ಸಂಸ್ಥೆಗಳಾಗಿ ಬೆಳೆದು ಬಂದವು. 1950 ರಿಂದ ಸುಮಾರು 20–23 ವರ್ಷಗಳ ಕಾಲದ ಈ ಅವಧಿಯನ್ನು "ಬಂಡವಾಳಶಾಹಿಯ ಸುವರ್ಣಯುಗ" ಎಂದೇ ಕರೆಯಲಾಗುತ್ತಿದೆ.

ಆದರೆ 1973 ರಲ್ಲಿ ತೈಲಬೆಲೆಯಲ್ಲಿ ಆದ ವಿಪರೀತ ಹೆಚ್ಚಳ (ಸುಮಾರು 8 ಪಟ್ಟು) ಈ ಸಮೃದ್ಧ ಬೆಳವಣಿಗೆಯ ಪ್ರಕ್ರಿಯೆಗೆ ಕಡಿವಾಣ ಹಾಕಿದ್ದಲ್ಲದೆ, ಅದುವರೆಗೂ ಸುಲಲಿತ ಉತ್ಪಾದನೆಯಲ್ಲಿ ತೊಡಗಲು ಸಹಕಾರಿಯಾಗಿದ್ದ ಸಾಮಾಜಿಕ ಸಾಮರಸ್ಯದ ವಾತಾವರಣದ ಚೌಕಟ್ಟನ್ನು ಸಡಿಲಗೊಳಿಸಿತು. ಈ ಅಗಾಧವಾದ ಬೆಲೆ ಏರಿಕೆ-ಯ ಹೊರೆಯನ್ನು ಆಳುವ ಸರ್ಕಾರಗಳು ಜನತೆಯ ಮೇಲೆ ಹೊರಿಸಿದವು. ಇಂತಹ ಕ್ರಮಗಳು ತಮ್ಮದೇ ಆದ ತಲ್ಲಣಗಳನ್ನು ಸೃಷ್ಟಿಸಿದವು. ಆರ್ಥಿಕ/ರಾಜಕೀಯ/ಸಾಮಾಜಿಕ ಸ್ಥಿತಿಗಳು ವ್ಯಸ್ತವಾದವು. ಇದೆಲ್ಲದರ ಪರಿಣಾಮವಾಗಿ ಬಂಡವಾಳಶಾಹಿ ಹೊಸ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂತು. ಆ ಬಿಕ್ಕಟ್ಟಿನಿಂದ ಪಾರಾಗಲು ಬಂಡವಾಳಶಾಹಿ ನಡೆಸಿದ ಪ್ರಯತ್ನಗಳೇ ನವ ಉದಾರೀಕರಣದ ನೀತಿಗಳಿಗೆ ಇಂಬು ಕೊಟ್ಟಿದ್ದು. 1980ರ ದಶಕದಲ್ಲಿ ಬ್ರಿಟನ್ನಿನ ಪ್ರಧಾನಿಯಾಗಿ ಆಯ್ಕೆಯಾದ ಶ್ರೀಮತಿ ಮಾರ್ಗರೆಟ್ ಥ್ಯಾಚರ್‌ರ ಆಳ್ವಿಕೆಯಲ್ಲಿ ಈ ನೀತಿಗಳನ್ನು ಅತ್ಯಂತ ನಿರ್ದಯವಾಗಿ ಜ್ಯಾರಿಗೊಳಿಸಲಾಯಿತು. ಇಂದು ನಾವು ನೋಡುತ್ತಿರುವ ಖಾಸಗೀಕರಣ, ಕಾರ್ಮಿಕ ಸಂಘಗಳ ಮೇಲಿನ ಧಾಳಿಗಳು, ಉದ್ಯೋಗದ ಭದ್ರತೆಯ ನಿರಾಕರಣೆ, ಕಲ್ಯಾಣ ಯೋಜನೆಗಳ ರದ್ಧತಿ ಇತ್ಯಾದಿಗಳಿಗೆಲ್ಲಾ ಪ್ರಯೋಗ ಶಾಲೆಯಾಗಿದ್ದು ಆಗಿನ ಯೂರೋಪ್ ಮತ್ತು ಅದರಲ್ಲೂ ಪ್ರಮುಖವಾಗಿ ಬ್ರಿಟನ್ ದೇಶ. ಅದೇ ಸಮಯದಲ್ಲಿ ಕಾರ್ಮಿಕ ಸಂಘಟನೆಗಳ ಮೇಲೆ ಅವಿರತವಾಗಿ ಧಾಳಿ ನಡೆಸಿ ಅವುಗಳನ್ನು ಬಗ್ಗು ಬಡಿಯುವ ಮೂಲಕ ಆಳುವ ಜನ ತಮ್ಮ ನೀತಿಗಳಿಗೆ ಎಲ್ಲಿಂದಲೂ ವಿರೋಧ ಎದ್ದು ಬರದಂತೆ ತಡೆಯುವ ಸತತ ಪ್ರಯತ್ನಗಳನ್ನು ನಡೆಸಿದರು. ಇಂತಹ ಅವ್ಯಾಹತ ಧಾಳಿಗಳನ್ನು ಸಂಘಟಿತವಾಗಿ ಎದುರಿಸುವ ಬದಲಾಗಿ,



ಸುಧಾರಣಾವಾದಿಗಳ ನಾಯಕತ್ವದಲ್ಲಿದ್ದ ಬಹಳಷ್ಟು ಕಾರ್ಮಿಕ ಸಂಘಟನೆಗಳು ಸರ್ಕಾರಗಳಿಗೆ ಶರಣಾಗುವುದರ ಮೂಲಕ ಆಳುವ ಜನರಿಗೆ ಇನ್ನಷ್ಟು ಪುಷ್ಟಿಕೊಟ್ಟವು. ಈ ನೀತಿಗಳ ಮುಂದುವರಿದ ಭಾಗವಾಗಿಯೇ ಯುರೋಪಿನ ಆರ್ಥಿಕ, ರಾಜಕೀಯ ವಿದ್ಯಮಾನಗಳು ಬೆಳೆದು ಬಂದದ್ದು.

ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲು ಅಪಾರವಾದ ಸಂಪತ್ತನ್ನು ತಮ್ಮ ಬೊಕ್ಕಸಗಳಿಂದ ಸುರಿದ ಯುರೋಪಿನ ದೇಶಗಳು ಐಎಂಎಫ್, ವಿಶ್ವಬ್ಯಾಂಕ್ ಮತ್ತು ಯುರೋಪಿಯನ್ ಕೇಂದ್ರ ಬ್ಯಾಂಕುಗಳಿಂದ ದೊಡ್ಡಮೊತ್ತದ ಸಾಲವನ್ನು ಪಡೆದವು. ಮಾಮೂಲಿನಂತೆ, ಸಾಲದ ಜತೆಗೇ ಬರುವ ಶರತ್ತುಗಳನ್ನೂ ಒಪ್ಪಿಕೊಂಡವು. ಅತ್ಯಂತ ಜನ ವಿರೋಧಿ, ಕಾರ್ಮಿಕ ವಿರೋಧಿಯಾಗಿರುವ ಈ ಶರತ್ತುಗಳು ವೇತನ ಕಡಿತ, ಕಲ್ಯಾಣ ಯೋಜನೆಗಳ ರದ್ಧತಿ, ಸಿಬ್ಬಂದಿ ಕಡಿತ, ಸರ್ಕಾರೀ ಸಂಸ್ಥೆಗಳ ಖಾಸಗೀಕರಣ, ತೆರಿಗೆ ಹಾಗೂ ಸೇವಾ ಶುಲ್ಕಗಳಲ್ಲಿ ಹೆಚ್ಚಳ ಇತ್ಯಾದಿ ಅಂಶಗಳನ್ನು ಒಳಗೊಂಡಿವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. (ನಮ್ಮ ದೇಶದಲ್ಲೂ ಅದೇ ಚಾಳಿಯಲ್ಲವೆ?) ಸಾಲ ತೆಗೆದುಕೊಳ್ಳುವಾಗ "ಎಲ್ಲ ಸರಿ ಹೋಗುತ್ತದೆ. ಕಷ್ಟದ ದಿನಗಳು ಇನ್ನೇನು ದೂರವಾದವು" ಎಂಬ ಹುಸಿ ಭರವಸೆಯನ್ನು ಸಾಲ ತೆ-ಗೆದುಕೊಂಡ ಸರ್ಕಾರಗಳು ಮತ್ತು ಕೊಟ್ಟ ಸಂಸ್ಥೆಗಳು ಒಟ್ಟಾಗಿಯೇ ಕೊಡುತ್ತವೆ. ಕೆಲವೇ ದಿನಗಳಲ್ಲಿ ಬಿಕ್ಕಟ್ಟು ಇನ್ನಷ್ಟು ತೀವ್ರವಾಗಿ ಹೊಸ ಹೊಸ ರೂಪಗಳಲ್ಲಿ ಮೂಡಿಬರುತ್ತದೆ. ಪುನಃ ಸಾಲಕ್ಕಾಗಿ ದೌಡು. ಮತ್ತದೇ ಶರತ್ತುಗಳು. ಅದೇ ಸವಕಲು ಭರವಸೆಗಳು. ಇದು ಕಳೆದ ಐದು ವರ್ಷಗಳಿಂದ ನಡೆಯುತ್ತಲೇ ಇದೆ. ಜನತೆಯ ಸಂಕಟ ಹೆಚ್ಚಾಗುತ್ತಲೇ ಇದೆ. ನಿರುದ್ಯೋಗ ಬೆಳೆಯುತ್ತಲೇ ಇದೆ. ಆರ್ಥಿಕತೆ ಕುಸಿಯುತ್ತಲೇ ಇದೆ. ಸಾಲದ ಪ್ರಮಾಣವೂ ಏರುತ್ತಲೇ ಇದೆ.

ಎರಡನೇ ಮಹಾಯುದ್ದದ ನಂತರದಲ್ಲಿ ಜರ್ಝರಿತವಾಗಿದ್ದ ಯೂರೋಪಿನ ದೇಶಗಳು ಆರ್ಥಿಕ ಚೇತರಿಕೆಗೆ ಹರಸಾಹಸ ನಡೆಸುತ್ತಿದ್ದ ಕಾಲದಲ್ಲಿ, ಆಗಷ್ಟೇ ಚೇತರಿಸಿಕೊಳ್ಳಲಾರಂಭಿಸಿದ್ದ ಸೋವಿಯತ್ ಒಕ್ಕೂಟದ ರಾಜಕೀಯ ಸೈದ್ಧಾಂತಿಕ ಪ್ರಭಾವದಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ 1951 ರಲ್ಲಿ ಫ್ರಾನ್ಸ್, ಇಟಲಿ,

ಪುಟ 4 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಶತದಿನಗಳ ಸಂಭ್ರಮದಲ್ಲಿ ಸಿದ್ದು ಸರ್ಕಾರ !

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ನೂರು ದಿನಗಳು ಕಳೆದಿವೆ. ಎರಡು ಲೋಕಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಜಯಗಳಿಸಿದ ಬೆನ್ನಲ್ಲೇ ವಿಧಾನ ಪರಿಷತಿಗೆ ನಡೆದ ಮೂರು ಉಪ ಚುನಾವಣೆಗಳ ಪೈಕಿ ಎರಡು ಕ್ಷೇತ್ರಗಳಲ್ಲಿ ಲಭಿಸಿರುವ ಗೆಲುವು ಕಾಂಗ್ರೆಸ್ ಸಂಭ್ರಮವನ್ನು ಇಮ್ಮಡಿಸಿದೆ.

ಹೊಸ ಸರ್ಕಾರದ ಕಾರ್ಯವಿಧಾನದ ಬಗ್ಗೆ ಜನ ತೀರ್ಮಾನ ಕೈಗೊಳ್ಳಲು ನೂರು ದಿನಗಳ ಅವಧಿ ಸಾಕಾಗಲಿಕ್ಕಿಲ್ಲ. ಆದರೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ನೂರು ದಿನಗಳ ತಮ್ಮ ಸರ್ಕಾರದ ಸಾಧನೆಗಳನ್ನು ಪಟ್ಟಿಮಾಡುತ್ತಾ ಚುನಾವಣೆಯಲ್ಲಿ ನೀಡಲಾದ 160 ಭರವಸೆಗಳ ಪೈಕಿ 60 ಅನ್ನು ಬಜೆಟ್ ಮೂಲಕ ಜಾರಿಗೆ ತಂದಿದ್ದೇನೆ. ಉಳಿದ ಭರವಸೆಗಳನ್ನು ಮುಂದಿನ ದಿನಗಳಲ್ಲಿ ಈಡೇರಿಸುತ್ತೇನೆ ಎಂಬ ಆತ್ಮವಿಶ್ವಾಸದ ಮಾತುಗಳನ್ನು ಆಡಿದ್ದಾರೆ.

ರೂಪಾಯಿಗೆ ಕೆ.ಜಿ. ಅಕ್ಕಿ ವಿತರಿಸುವ ಅನ್ನಭಾಗ್ಯ ಯೋಜನೆ, 39 ಲಕ್ಷ ಅಂಗನವಾಡಿ ಮಕ್ಕಳಿಗೆ ಕ್ಷೀರ ಭಾಗ್ಯ ಯೋಜನೆ, ಪರಿಶಿಷ್ಟ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳ ಸಾಲ ಮನ್ನಾ, ಭಾಗ್ಯಜ್ಯೋತಿ ಬಾಕಿ ಮನ್ನಾ, ಆಶ್ರಯ ಮನೆಗಳ ಸಬ್ಸಿಡಿ ಹಣ 45 ಸಾವಿರ ರೂ. ಹೆಚ್ಚಳ, 40 ವರ್ಷಕ್ಕಿಂತ ಮೇಲ್ಪಟ್ಟ ಮದುವೆಯಾಗದ ಹೆಣ್ಣು ಮಕ್ಕಳಿಗೆ ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗೆ ಮಾಸಿಕ ಪಿಂಚಣಿ ಮೊದಲಾದ ಕಾರ್ಯಕ್ರಮಗಳು ಸಿದ್ದರಾಮಯ್ಯ ಸರ್ಕಾರದ ಸ್ವಾಗತಾರ್ಹ ಕ್ರಮಗಳಾಗಿವೆ. ಆದರೆ ಸರ್ಕಾರ ಮಾಡಲೇ ಬೇಕಾದ ಮತ್ತು ಮಾಡಬಾರದಾದ ಹಲವಾರು ಕ್ರಮಗಳಿವೆ. ಸರ್ಕಾರದ ಸತ್ವ ಪರೀಕ್ಷೆ ಆಗುವುದು ಇಲ್ಲಿಯೇ.

ರಾಜ್ಯದ 145 ಕ್ಕೂ ಹೆಚ್ಚು ಹೋಬಳಿಗಳಲ್ಲಿ ಭೀಕರ ಬರ ಆವರಿಸಿಕೊಂಡಿದೆ. ಬರ ಪೀಡಿತ ಜನಗಳ ನೆರವಿಗೆ ಧಾವಿಸುವುದು ಸರ್ಕಾರದ ಪ್ರಥಮ ಆದ್ಯತೆಯಾಗಬೇಕಾಗಿದೆ. ಕುಡಿಯುವ ನೀರಿನ ಕೊರತೆ ಅನುಭವಿಸುತ್ತಿರುವ ಗ್ರಾಮಗಳಿಗೆ ಮತ್ತು ಲಂಬಾಣಿ ತಾಂಡಾಗಳಿಗೆ ಸ್ವಚ್ಛ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಅತಿ ಹೆಚ್ಚು ಹಣವನ್ನು ಒದಗಿಸಬೇಕು. ಸರ್ಕಾರ ಬರ ಪೀಡಿತ ಹೋಬಳಿಗಳಿಗೆ 25 ಲಕ್ಷ ರೂ. ನಿಂದ 1 ಕೋಟಿ ರೂ. ವರೆಗೂ ಪರಿಹಾರ ನೀಡಲು ನಿರ್ಧರಿಸಿದ ಮೊತ್ತ ಏನೇನೂ ಸಾಲದು. ಹೋಬಳಿಗೆ 10 ಕೋಟಿ ರೂ. ಅಷ್ಟಾದರೂ ಒದಗಿಸಲು ಸಾಧ್ಯವಾಗಬೇಕು.

ರಾಜ್ಯದಲ್ಲಿ ರೈತರು ಸಾಲದ ಶೂಲಕ್ಕೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಮುಂದುವರೆದಿದೆ. ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆ ನಿಧರಿಸಲು 'ಕೃಷಿ ಬೆಲೆ ಆಯೋಗ' ರಚನೆ ಮಾಡುವುದು ಸ್ವಾಗತಾರ್ಹವಾಗಿದೆ. ಕನಿಷ್ಠ ಬೆಂಬಲ ಬೆಲೆ ಘೋಷಿಸಿದರೆ ಸಾಲದು. ಸರ್ಕಾರ ಸೂಕ್ತ ಸಮಯದಲ್ಲಿ ಮಾರುಕಟ್ಟೆಗೆ ಪ್ರವೇಶಿಸಿ ರೈತರ ಉತ್ಪನ್ನಗಳನ್ನು ಖರೀದಿಸಲು ವ್ಯವಸ್ಥಿತವಾದ ಕ್ರಮವನ್ನು ಕೈಗೊಳ್ಳಬೇಕು. ದುಬಾರಿ ಬಡ್ಡಿ ವಸೂಲಿ ಮಾಡುವ ಖಾಸಗಿ ಲೇವಾದೇವಿಗಾರರ ಹಾವಳಿಯನ್ನು ತಪ್ಪಿಸಲು ಸರ್ಕಾರ ರೈತರಿಗೆ ಮತ್ತು ಕೃಷಿ ಕೂಲಿಕಾರರಿಗೆ ತೀರಾ ಅಗ್ಗದ ಬಡ್ಡಿ ದರಗಳ ಬ್ಯಾಂಕ್ ಸಾಲವನ್ನು ಒದಗಿಸಲು ಮುಂದಾಗಬೇಕು.

ರಾಜ್ಯದಲ್ಲಿ ಸಂಪತ್ತನ್ನು ನಿರ್ಮಾಣ ಮಾಡುವುದರಲ್ಲಿ ಅಸಂಘಟಿತ ವಲಯದ ಕಾರ್ಮಿಕರು ಮತ್ತು ಕೃಷಿ ಕೂಲಿಕಾರರು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಅತ್ಯಂತ ಅನಿಶ್ಚಿತ ಮತ್ತು ಅತ್ಯಂತ ಕಡಿಮೆ ಆದಾಯ ಪಡೆಯುತ್ತಿರುವ ಇವರು ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದಾಗಿ ಅತಿ ಹೆಚ್ಚು ತೊಂದ-ರೆ ಅನುಭವಿಸುತ್ತಿರುತ್ತಾರೆ. ಇವರ ಹಾಗೆಯೇ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ವಿವಿಧ ಯೋಜನೆಗಳ ಜಾರಿಯಲ್ಲಿ ಗುತ್ತಿಗೆ, ದಿನಗೂಲಿ, ಅರೆಕಾಲಿಕ, ಸ್ಕೀಮ್ ವರ್ಕರ್ಸ್ ಮೊದಲಾದ ಹೆಸರಿನಲ್ಲಿ ದುಡಿಯುತ್ತಿರುವ ನೌಕರರಿದ್ದಾರೆ. ಸರ್ಕಾರವೇ ಅವರ ಶೋಷಣೆ ಮಾಡುತ್ತಿದೆ. ಈ ವಿಷಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮಧ್ಯ ಪ್ರವೇಶ ಅತ್ಯಾವಶ್ಯಕವಾಗಿದೆ. ಅವರಿಗೆ ಜೀವನಾವಶ್ಯಕ ಕನಿಷ್ಠ ವೇತನವನ್ನು ನಿಗದಿಪಡಿಸುವುದು, ಅದನ್ನು ಅನುಷ್ಠಾನಕ್ಕೆ ತರುವುದು, ಅವರಿಗಾಗಿ ಅಗತ್ಯ ಸೇವಾ ನಿಯಮಾವಳಿಗಳನ್ನು ರಚಿಸುವುದು ತುರ್ತಾಗಿ ಆಗಬೇಕಾದ ಕೆಲಸ.

ಸಿದ್ದರಾಮಯ್ಯ ಸರ್ಕಾರ 'ಅನ್ನಭಾಗ್ಯ' ಯೋಜನೆಯನ್ನು ಜಾರಿಗೆ ತಂದಿರುವ ಬಗ್ಗೆ ತುಂಬಾ ಹೆಮ್ಮೆ ಪಟ್ಟುಕೊಳ್ಳುತ್ತಿದೆ. ಆದರೆ ರಾಜ್ಯದಲ್ಲಿ ಲಕ್ಷಾಂತರ ಅರ್ಹ ಕುಟುಂಬಗಳಿಗೆ ಇನ್ನೂ ಬಿಪಿಎಲ್ ರೇಷನ್ ಕಾರ್ಡುಗಳು ಸಿಕ್ಕಿಲ್ಲ ಎಂಬುದನ್ನು ಸರ್ಕಾರ ಮರೆಮಾಚುತ್ತಿದೆ. ಇದರ ಜೊತೆಯಲ್ಲಿ 32 ಲಕ್ಷ ಎಪಿಎಲ್ ಕಾರ್ಡುಗಳನ್ನು ರದ್ದು ಪಡಿಸಲಾಗಿದೆ. ಅವರಿಗೆ ರಿಯಾಯ್ತಿ ದರಗಳಲ್ಲಿ ಸಿಗುತ್ತಿದ್ದ ಅಕ್ಕಿ ಮತ್ತು ಸೀಮೆಎಣ್ಣೆಯಿಂದ ಅವರು ವಂಚಿತರಾಗಲಿದ್ದಾರೆ. ಇದು ದೊಡ್ಡ ಅನ್ಯಾಯ. ಸರ್ಕಾರ ಇದರ ಮರುಪರಿಶೀಲನೆ ಮಾಡಲೇ ಬೇಕು.

ಹೊಸ ಸರ್ಕಾರದ ಮೇಲೆ ಜನರು ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಹಾಗಿರುವಾಗ, ಸರ್ಕಾರ ಯೋಚಿಸುತ್ತಿರುವ ಕೆಲವು ಜನವಿರೋಧಿ ಕ್ರಮಗಳನ್ನು ಅದು ಕೈಬಿಡಲೇ ಬೇಕು. ಹಿಂದಿನ ಸರ್ಕಾರ ಮಾಡಿದ, ಮಾಡಲು ಹೊರಟಿದ್ದ ತಪ್ಪುಗಳನ್ನು ಈ ಸರ್ಕಾರವೂ ಮಾಡಲು ಮುಂದಾದರೆ ಜನರ ನಿರೀಕ್ಷೆಗಳ ಪಾಡೇನು? ಉದಾಹರಣೆಗೆ, ಅವಶ್ಯಕ ಸೇವೆಗಳಲ್ಲಿ ಮುಷ್ಕರಗಳನ್ನು ತಡೆಯಲು 'ಎಸ್ಮಾ' ಜಾರಿಗೊಳಿಸಲು ಸರ್ಕಾರ ಯೋಚಿಸುತ್ತಿರುವುದು ಅದರ ಸರ್ವಾಧಿಕಾರಿ ಕರಾಳ ಸ್ವರೂಪವನ್ನು ಮತ್ತೆ ಜನತೆಯನ್ನು ಬೆದರಿಸಲು ಬಳಕೆಗೆ ತರುವುದಾಗಲಿದೆ. ಹಿಂದಿನ ಬಿಜೆಪಿ ಸರ್ಕಾರ ಕಾರ್ಪೊರೇಟ್ ಕಂಪೆನಿಗಳ ಅನುಕೂಲಕ್ಕಾಗಿ ಎ.ಪಿ.ಎಂ.ಸಿ. ಕಾಯ್ದೆ ತಿದ್ದುಪಡಿ ಮಾಡಿತು. ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿತ್ತು. ರಾಜ್ಯದಲ್ಲಿ ಕೃಷಿಯ ಕಂಪೆನೀಕರಣಕ್ಕೆ ಹಸಿರು ನಿಶಾನೆ ತೋರಿಸಿತ್ತು. ಕಾಂಗ್ರೆಸ್ ಸರ್ಕಾರ ಅದೇ ನೀತಿಗಳನ್ನು ಮುಂದುವರೆಸುವುದೆಂದರೆ ಜನರ ವಿಶ್ವಾಸಕ್ಕೆ ದ್ರೋಹ ಬಗೆದಂತೆ. ಜನಾದೇಶವನ್ನು ಉಲ್ಲಂಘಿಸಿದಂತೆ. ಅದೇ ರೀತಿಯಲ್ಲಿ ಲಕ್ಷಾಂತರ ಸಣ್ಣ ವ್ಯಾಪರಸ್ಥರನ್ನು ಬೀದಿಪಾಲು ಮಾಡಲಿರುವ ಚಿಲ್ಲರೆ ವ್ಯಾಪಾರದಲ್ಲಿ ನೇರ ಬಂಡವಾಳ ಹೂಡಿಕೆಗೆ ನೀಡಲಾದ ಒಪ್ಪಿಗೆಯನ್ನು ಸರ್ಕಾರ ಹಿಂತೆಗೆದುಕೊಳ್ಳಬೇಕು. ರಾಜ್ಯದಲ್ಲಿ ಕೋಮುವಾದಿಗಳ ಹುಟ್ಟಡಗಿಸಲು ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು.


'ಢುಂಢಿ' ಲೇಖಕನ ಬಂಧನ :

ಮತೀಯವಾದಿಗಳಿಗೆ ಮಣಿದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅರ್ಥವೇನು?

ಒಂದು 'ಪಿಳ್ಳೆ ನೆವ' ಸಿಕ್ಕರೂ ಸಾಕೆಂದು ಕಾಯುತ್ತಿರುವ ಸಂಘಪರಿವಾರವು ಇತ್ತೀಚೆಗೆ ಯೋಗೀಶ್ ಮಾಸ್ಟರ್‌ರವರ 'ಢುಂಡಿ' ಕಾದಂಬರಿ ಬಿಡುಗಡೆಗೊಂಡದ್ದನ್ನು ಮಸೆಯುತ್ತಿದ್ದ ಲಾಠಿ ತಿರುವಲು ಸಿಕ್ಕ ಸುವರ್ಣ ಅವಕಾಶವೆಂದು ಬಗೆದಿದೆ. ಆ ಕಾದಂಬರಿ ಇನ್ನೂ ಮಾರುಕಟ್ಟೆಯಲ್ಲೇ ಸಿಗುತ್ತಿಲ್ಲ, ಓದಿ ಬಲ್ಲವರು ಬಹಳವಿಲ್ಲ, ವಿವಾದ ಬೆಳೆಯುತ್ತಿದ್ದ ಬಗೆ ಅರಿತ ಲೇಖಕ 'ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುವುದಾಗಿ' ಹೇಳಿಯಾಗಿದೆ. ಹೀಗಿರುವಾಗ ಆ ಕೃತಿಯನ್ನು ನಿಷೇಧಿಸುವಂತೆ, ಲೇಖಕನನ್ನು ಬಂಧಿಸಿ ದಂಡಿಸುವಂತೆ ಹಾಹಾಕಾರ ಎಬ್ಬಿಸಿ ಅಮಾಯಕರನ್ನು ಕೆರಳಿಸಿ, ಅಲ್ಲಲ್ಲಿ ಪ್ರತಿಭಟನೆಯನ್ನೂ ನಡೆಸುತ್ತಿರುವುದೇಕೆ?

ಸೋಗುಗಳು


ವಿವಾದವೆಬ್ಬಿಸುವ ಮೊದಲು ಕೃತಿಯ ಒಳ ತಿರುಳು ತಿಳಿಯದೇ, ವಾದವೇನೆಂದು ಅರಿಯದೇ, ಏಕಮುಖವಾಗಿ ಧಾಳಿ ಮಾಡುತ್ತಾ ಹೊರಟಿರುವ ಉದ್ದೇಶವಾದರೂ ಏನು? ಕೃತಿಯ ವಸ್ತು ವಿಶ್ಲೇಷಣೆಯ ಕುರಿತು ವಿಮರ್ಶೆಗೆ ಒತ್ತು ನೀಡುವ ಬದಲು ಧರ್ಮ, ದೇವರ ರಕ್ಷಣೆಯ ಸೋಗಿನಲ್ಲಿ ಅಡಗಿಸಿಕೊಂಡಿರುವ ಸಮಯ ಸಾಧಕ ರಾಜಕೀಯವಾದರೂ ಎಂತಹುದು? ಇಂತಹ ದುಷ್ಟ ಅಜೆಂಡಾ-ಕ್ಕೆ ಸಾಥ್ ನೀಡುವ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗಗಳೇ ತಾವೆಂದು ಬೊಗಳೆ ಹೊಡೆಯುವ ವಿಜಯವಾಣಿ, ಉದಯವಾಣಿ ಮತ್ತು ಕೆಲ ಟಿ.ವಿ.ಚಾನೆಲ್‌ಗಳಿಗೆ ತಿರುಚಿ ಪ್ರಚೋದಿಸುತ್ತಾ ಪ್ರಸಾರಿಸಲು ಇರುವ ನೈತಿಕತೆ-ಯಾದರೂ ಏನು?



ಚಿಂತನ ಮಂಥನದ ಬೆಳಕು ಬರಲಿ

'ಡುಂಡಿ' ಕಾದಂಬರಿ ಇತಿಹಾಸವಲ್ಲ, ಆದರೆ ಭಾರತೀಯ ಸಮಾಜದ ಬೆಳವಣಿಗೆಯ ಐತಿಹಾಸಿಕ ಕಾಲಘಟ್ಟದ ಅಂಶಗಳನ್ನು ಕಥಾ ವಸ್ತುವನ್ನಾಗಿ ಹೊಂದಿದೆ. ಆ ಕಾಲ ಘಟ್ಟದ ಚಿತ್ರಣವನ್ನು ಕಟ್ಟಿಕೊಡುವ ಒಂದು ಪ್ರಯತ್ನ. ಈ ಕೃತಿಯಲ್ಲಿನ ಗಣೇಶ/ ಗಣ-ಪತಿ ಆದಿಮ ಕಾಲದ, ಆದಿವಾಸಿ ಬುಡಕಟ್ಟುಗಳಿಗೆ ಸೇರಿದವ. ಮುಂದೆ ವೈದಿಕರು ಇವನನ್ನು ತಮ್ಮೊಳಗೆ ಹಾಕಿಕೊಂಡ ಕಥಾವಸ್ತು ಇದಾಗಿದೆ ಎನ್ನುತ್ತಾರೆ ಲೇಖಕರು. ಇದನ್ನು ಬರೆಯುವಾಗಲೂ ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಗಣಪತಿ ಹುಟ್ಟು ಕುರಿತ ವಿಶ್ಲೇಷಣೆ, ತಾಪಿ ಧರ್ಮರಾವ್‌ರವರ ವಿವಾಹ ಗ್ರಂಥ, ಯಾಜ್ಞವಲ್ಕ ಸ್ಮೃತಿ ಮುಂತಾದ ಹಲವು ಗ್ರಂಥಗಳ ಅಧ್ಯಯನದಿಂದ ಪಡೆದ ತಿಳುವಳಿಕೆಯನ್ನು ಆಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ತಮ್ಮ ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯವಿರುವವರು ಚರ್ಚಿಸಿ ಶ್ರೀಮಂತಗೊಳಿಸಬಹುದೆಂಬುದು ಲೇಖಕರ ಅನಿಸಿಕೆ. ಕಾದಂಬರಿಯಾಗಿರುವುದರಿಂದ ವಸ್ತುನಿಷ್ಠ ಅಂಶಗಳ ಜೊತೆಗೆ ಒಂದಿಷ್ಟು ಕಲ್ಪನೆಗಳು ಇರುವುದು ಸಹಜ. ಹಾಗೆ ಭಿನ್ನಾಭಿಪ್ರಾಯಗಳೂ ಸಹ. ಅದೇನಿದ್ದರೂ ಮುಕ್ತ ಮನಸ್ಸಿನಿಂದ ವಿದ್ವುತ್ ಪೂರ್ಣ ಸಂವಾದ, ಚರ್ಚೆ ನಡೆದರೆ ಎಲ್ಲರಿಗೂ ಫಲದಾಯಕ.

ಪಿ ಮಹಮ್ಮದ್



ಕೃಪೆ : ವಿಜಯ ಕರ್ನಾಟಕ

ಅರ್ಥೈಸುವಿಕೆ

ಆದರೆ ಸಂಘಪರಿವಾರ ಇಂತಹ ಯಾವುದೇ ಚರ್ಚೆಯನ್ನು ಎತ್ತದೇ 'ತಮ್ಮ' ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲಾಗಿದೆಯೆಂದು, ಆರಾಧ್ಯ ದೇವರನ್ನು ಅವಹೇಳನ ಮಾಡಲಾಗಿದೆಯೆಂದು, ಲೇಖಕನನ್ನು ಬಂಧಿಸಿ, ಶಿಕ್ಷೆ ವಿಧಿಸಬೇಕೆಂದೂ, ಕೃತಿಯನ್ನು ನಿರ್ಬಂಧಿಸಿ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಗಂಟಲು ಹರಿಯುವಂತೆ ಕೂಗಾಡುತ್ತಿದೆ. ಇದನ್ನನುಸರಿಸಿ ಮಾಧ್ಯಮದಲ್ಲಿನ ಸಂಘದ 'ಕರಸೇವಕರು' ಬೊಬ್ಬೆಯಿಡುವುದೂ ನಡೆದಿದೆ. ಇಂದು ದೇವರೆಂದು ಪೂಜಿಸುವ

ಪುಟ 6 ಕ್ಕೆ

ಓದುಗರ ಓಲೆ :

ಪೇಜಾವರರ 'ಸಾಮರಸ್ಯದ ಕರೆ' ಪ್ರಾಮಾಣಿಕವಾದದ್ದೆ?

ಉಡುಪಿಯ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮಿಗಳ ವಿತಂಡವಾದ ಕಂಡು ಅಯ್ಯೋ ಪಾಪ ಎನಿಸುತ್ತಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಸಿಪಿಐ(ಎಂ) ಸಂಘಟಿಸಿದ್ದ ಪಂಕ್ತಿ ಭೇದ ಮತ್ತು ಮಡೆಸ್ನಾನ ಕುರಿತ ಸಮಾವೇಶದಲ್ಲಿ ನಿಡುಮಾಮಿಡಿ ಚನ್ನಮಲ್ಲ ಸ್ವಾಮೀಜಿಯವರು ಮಾತನಾಡಿದ್ದಕ್ಕೆ ಅವರು ನೀಡಿದ ಪ್ರತಿಕ್ರಿಯೆ(ಪ್ರಜಾವಾಣಿ–21.08.2013–ಪುಟ 5,) ಹಾಸ್ಯಾಸ್ಪದವಾಗಿದೆ.

ತಾವೊಬ್ಬ ಯತಿಗಳಾಗಿದ್ದರೂ ಸಮಾಜ ಸುಧಾರಕರಾದ್ದರಿಂದ ದಲಿತ ಕೇರಿಗಳಿಗೆ ಹೋಗಿ ಪಾದಪೂಜೆ ಮಾಡಿಸಿಕೊಳ್ಳುತ್ತೇನೆ ಎಂದು ಬೀಗುವ ಪೇಜಾವರರು 'ಯತಿಗಳಾದ ತಾವು ಬ್ರಾಹ್ಮಣರ ಮನೆಯಲ್ಲಿಯೂ ಊಟ ಮಾಡುವುದಿಲ್ಲ' ಎಂದು ಹಪಹಪಿಸಿದ್ದಾರೆ. ಪಂಕ್ತಿಭೇದಕ್ಕೆ ಆಹಾರ ಪದ್ಧತಿಯೇ ಕಾರಣ ಎಂದು ಅಪ್ಪಣೆ ಕೊಡಿಸಿದ್ದಾರೆ.

ಉಡುಪಿ ಮಠದಲ್ಲಿ ಸಸ್ಯಾಹಾರಿಗಳಿಗೆ ಬೇರೆ ಮತ್ತು ಮಾಂಸಾಹಾರಿಗಳಿಗೆ ಬೇರೆ ಪಂಕ್ತಿಗಳಿವೆ. ಅದರಲ್ಲಿ ತಪ್ಪೇನಿದೆ ಎನ್ನುವಂತೆ ವಾದಿಸುತ್ತಾ ಬ್ರಾಹ್ಮಣರಿಗೆ ಒಂದು ಪಂಕ್ತಿಯಲ್ಲಿ ಹಾಗು ಅಬ್ರಾಹ್ಮಣರಿಗೆ ಬೇರೆ ಪಂಕ್ತಿ ಊಟ ನೀಡುವ ಜಾತಿಬೇಧದ ಪದ್ಧತಿಯನ್ನು ಮರೆ ಮಾಚುತ್ತಿದ್ದಾರೆ. ಅವರ ಪ್ರಕಾರ ಬ್ರಾಹಣರೆಲ್ಲಾ ಸಸ್ಯಾಹಾರಿಗಳು. ಅಬ್ರಾಹ್ಮಣರೆಲ್ಲಾ ಮಾಂಸಾಹಾರಿಗಳು.!!

ಅವರ ಮಠದಲ್ಲಿ ಸಸ್ಯಾಹಾರದ ಜತೆಯಲ್ಲೇ ಮಾಂಸಾಹಾರವನ್ನೂ ಉಣಬಡಿಸುತ್ತಿದ್ದರೆ ಮತ್ತು ಜಾತಿ ತಾರತಮ್ಯವಿಲ್ಲದೇ ಸಸ್ಯಾಹಾರ ಮತ್ತು ಮಾಂಸಾಹಾರದ ಆಧಾರದಲ್ಲಿ ಬೇರೆ ಬೇರೆ ಪಂಕ್ತಿಗಳಲ್ಲಿ ಊಟ ಹಾಕುತ್ತಿದ್ದಲ್ಲಿ ಆಗ ಈ ವಾದಕ್ಕೆ ಸ್ವಲ್ಪ ಸಮರ್ಥನೆ ಇರುತ್ತಿತ್ತೇನೊ. ಏಕೆಂದರೆ ಕೆಲವು ಸಸ್ಯಾಹಾರಿಗಳಿಗೆ(ಅವರು ಯಾವ ಜಾತಿಯವರಾಗಿದ್ದರೂ) ಮಾಂಸಾಹಾರ ಇಷ್ಟವಾಗುವುದಿಲ್ಲ ಎನ್ನಬಹುದು. ಆದರೆ ಅಲ್ಲಿ ಉಡುಪಿ ಮಠದಲ್ಲಿ ಸಸ್ಯಾಹಾರ ಮಾತ್ರ ನೀಡುತ್ತಾರೆ.

(ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದರೆ ಕರ್ನಾಟಕದಲ್ಲಿ ಬ್ರಾಹ್ಮಣರಂತೆ ಲಿಂಗಾಯತರೂ ಸಹ ಸಸ್ಯಾಹಾರಿಗಳಾಗಿದ್ದಾರೆ. ಇಂತಹ ಇನ್ನೂ ಹಲವು ಸಸ್ಯಾಹಾರ ಮಾತ್ರ ಸೇವಿಸುವ ಜಾತಿಯ ಜನರಿದ್ದಾರೆ. ಹಾಗಿರುವಾಗ ಸಸ್ಯಾಹಾರದ ಹೆಸರಿನಲ್ಲಿ ಬ್ರಾಹ್ಮಣರಿಗೆ ಮಾತ್ರ ಪ್ರತ್ಯೇಕ ಪಂಕ್ತಿ ಯಾಕೆ ? ಈ ಬ್ರಾಹ್ಮಣರ ಪಂಕ್ತಿಗೆ ಸಂಪ್ರದಾಯಸ್ಥ ಲಿಂಗಾಯತರೂ ಬಂದು ಕೂರಲು ಬಯಸಿದರೆ ಅದಕ್ಕೆ ಅವಕಾಶ ಉಂಟೇ ಎಂಬ ಬಗ್ಗೆ ಯಾಕೆ ಪೇಜಾವರರರು ಮಾತನಾಡುವುದಿಲ್ಲ?)

ಪಂಕ್ತಿಭೇದದ ಆಚರಣೆಯ ಮೂಲಕ ಸಸ್ಯಾಹಾರ ಮಾಡುವ ಬ್ರಾಹ್ಮಣರು ಶ್ರೇಷ್ಠರು, ಮಾಂಸಾಹಾರ ಮಾಡುವ ಅಬ್ರಾಹ್ಮಣರು



ದಲಿತ ಕೇರಿಗೆ ಪಾದ ಬೆಳೆಸಿರುವ ಪೇಜಾವರರು

ಕನಿಷ್ಠರು ಎಂಬ ಭಾವನೆ ಇಲ್ಲಿ ಎದ್ದು ಕಾಣುತ್ತದೆ. ಉಡುಪಿಯ ಮಠಕ್ಕೆ ಹೆಚ್ಚಿನ ಆದಾಯ ಬರುವುದು ಅಬ್ರಾಹ್ಮಣರಿಂದ ಎಂಬ ಸತ್ಯವನ್ನು ಯಾರೂ ಅಲ್ಲಗಳೆಯಲಾರರು. ಶೂದ್ರರಿಂದ ಬರುವ ಆದಾಯಕ್ಕೆ ಏನೂ ಬೇಧವಿಲ್ಲ. ಆದರೆ ಅವರಿಗೆ ಊಟ ನೀಡುವ ವಿಚಾರದಲ್ಲಿ ಪಂಕ್ತಿಭೇದ !!! ಹೀಗೆ ಬೇಧ ಮಾಡುವುದು ಜಾತಿ ಹೆಸರಲ್ಲಿ ಮಾಡುವ ಅವಮಾನ ಮತ್ತು ಅನ್ಯಾಯ. ಅದು ಮಾನವ ಧರ್ಮಕ್ಕೇ ವಿರೋಧ. ಮತ್ತು ನಮ್ಮ ದೇಶದ ಸಂವಿಧಾನಕ್ಕೆ ವಿರೋಧ.

ಮುಂದುವರಿದು ಮಾತನಾಡಿರುವ ಪೇಜಾವರರು 'ಬದಲಾದ ಕಾಲಮಾನದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಎಲ್ಲ ಧರ್ಮಗಳ ಕೆಲವರ ಆಹಾರ ಪದ್ಧತಿ ಬದಲಾಗಿರಬಹುದು, ಹಾಗಂತ ಬ್ರಾಹ್ಮಣರು ಗೋಮಾಂಸ ಸೇವಿಸುತ್ತಾರೆ ಎಂದು ಹೇಳುವುದು ಎಷ್ಟು ಸಮಂಜಸ' ವೆಂದು ಗೋಳಿಟ್ಟಿದ್ದಾರೆ. ಇಪ್ಪತ್ತೊಂದನೇ ಶತಮಾನದಲ್ಲಿನ ಬ್ರಾಹ್ಮಣರು ಮಾಂಸಾಹಾರ ಮಾಡುವುದಿರಲಿ, ಬ್ರಾಹ್ಮಣರ ಮಾಂಸಾಹಾರದ ಬಗ್ಗೆ 'ಮನುಸ್ಮೃತಿ'ಗಿಂತ ಪುರಾವೆ ಬೇರೆ ಬೇಕೆ? ಬ್ರಾಹ್ಮಣರ ಮಾಂಸಭಕ್ಷಣೆಯ ಬಗ್ಗೆ ಮನುಸ್ಮೃತಿಯಲ್ಲಿನ ಉಲ್ಲೇಖದತ್ತ ವಿಶ್ವೇಶತೀರ್ಥರ ಗಮನ ಸೆಳೆಯಬಯಸುತ್ತೇನೆ:

"ಯಜ್ಞದಲ್ಲಿ ಬಲಿ ಕೊಡುವುದಕ್ಕಾಗಿ ಶಾಸ್ತ್ರದಲ್ಲಿ ಹೇಳಿದ ಪಶುಪಕ್ಷಿಗಳನ್ನು ವ ಧೆ ಮಾ ಡ ಬ ಹು ದು. ತ ನ್ನ ನ್ನ ವ ಲಂ ಬಿ ಸಿ ದ ವೃದ್ಧ ಮಾತಾಪಿತೃಗಳು ಇತ್ಯಾದಿಗಳ ಪೋಷಣೆಗಾಗಿ ಆಪತ್ತಿನಲ್ಲಿ ಪಶುಪಕ್ಷಿಗಳನ್ನು ಅಗಸ್ತ್ಯನು ಪೂರ್ವ ಕಾಲದಲ್ಲಿ ವಧೆಮಾಡಿದಂತೆ ಮಾಡಬಹುದು."(ಅಧ್ಯಾಯ.5–ಶ್ಲೋಕ22)

" ಬ್ರಾ ಹ್ಮ ಣ ರಿ ಗೆ ಅ ಪೇ ಕ್ಷೆ ಯು ಉಂ ಟಾ ದಾ ಗ ಯಜ್ಞವಿಧಿಗಳಲ್ಲಿ ಮಂತ್ರಜಲದಿಂದ ಪ್ರೋಕ್ಷಿ ತ ವಾ ದ (ಪ ವಿ ತ್ರೀ ಕ ರಿ ಸಿ ದ) ಮಾಂಸವನ್ನು ಹಾಗು ಶಾಸ್ತ್ರವಿಧಿಗಳಲ್ಲಿ ಹೇಳಲಾದ ರೀತಿಯಿಂದ ಶ್ರಾದ್ಧದೂಟದಲ್ಲಿಯ ಮಾಂಸವನ್ನು ಹಾಗೂ ಆಹಾರ ಸಿಗದೆ ಪ್ರಾಣಸಂಕಟ ಉಂಟಾದಾಗ ಅನಿವಾರ್ಯವಾಗಿ ಮಾಂಸವನ್ನು ತಿನ್ನಬಹುದು"(ಅ.5–ಶ್ಲೋ.27)

"ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ ಜಂಗಮ ಜೀವ ಜಂತುಗಳನ್ನು, ಚರಾಚರ ವಸ್ತುಗಳನ್ನು ತಿನ್ನಲಿಕ್ಕೆಂದೇ ಪರಮಾತ್ಮನು ಸೃಷ್ಟಿಸಿದ್ದಾನೆ."(ಅ.5–ಶ್ಲೋ.28)

"ಪ್ರತಿದಿನವೂ ತಿನ್ನಲಿಕ್ಕೆ ಯೋಗ್ಯವಾದ ಪ್ರಾಣಿಗಳನ್ನೇ ಕೊಂದುತಿಂದರೆ
ಅಪರಾಧವಲ್ಲ. ಏಕೆಂದರೆ ತಿನ್ನುವವ
ಪ್ರಾಣಿಗಳನ್ನೂ ಭಗವ
ಸೃಷ್ಟಿಮಾಡಿದ್ದಾನೆ."(ಅ.5–ಶ್ಲೋ.30)

"ಯಜ್ಞಕ್ಕಾಗಿ ಪಶುವನ್ನು ಕೊಂದು ಮ
ಮಾಂಸಭಕ್ಷಣವು 'ದೈವಿಕರೀತಿ'ಯೆ
ಹೇಳಲ್ಪಟ್ಟಿದೆ. ಇದಕ್ಕೆ ವಿರುದ್ಧವಾಗಿ
ಸಂದರ್ಭಗಳಲ್ಲಿ ಮಾಡುವ ಅಕ
ಪಶುವಧೆ ಮತ್ತು ಮಾಂಸಭಕ್ಷ
'ರಾಕ್ಷಸರೀತಿ' ಎಂದು ಹೇಳಲ್ಪಟ್ಟಿದೆ."(
ಶ್ಲೊ.31)

"ಹೀಗೆ ಯಜ್ಞ, ಶ್ರಾದ್ಧ ಹಾಗು ಮಧು
ಮುಂತಾದ ಕಾರ್ಯಗಳಿಗಾಗಿ
ವೇದಜ್ಞನಾದ ಬ್ರಾಹ್ಮಣನು ಪಶು
ಕೊಂದರೆ ತನ್ನ ಜತೆಗೆ ಆ ಪಶುವಿಗೂ ಉ
ಗತಿಯನ್ನುಂಟು ಮಾಡುತ್ತಾನೆ."(
ಶ್ಲೋ.42)

ಮಾಧ್ವ ಮತದ ಶ್ರೀಗಳು ಎಷ್ಟರ ಮ
ಮನುಸ್ಮೃತಿಯನ್ನು ಒಪ್ಪುತ್ತಾರೆ ಗೊತ್ತಿಲ್ಲ.
ಅವರ ಸಂಘ ಪರಿವಾರದವರೇ ಆದ ವ
ನ್ಯಾಯಾಧೀಶರಾದ ರಾಮಾ ಜೋ
ಅವರು ಹಿಂದಿನ ಬಿಜೆಪಿ ಸರ್ಕಾರಕ್ಕೆ
ಮಕ್ಕಳಿಗೆ ಮನುಸ್ಮೃತಿಯನ್ನು ಬೋಧಿಸಬೆ
ಎಂದು ಕಿವಿ ಮಾತು ಹೇಳಿದ್ದರು. ಹಾ
ಪೇಜಾವರರೂ ಮನುಸ್ಮೃತಿಯ
ಪಾಲಿಸುತ್ತಾರೆ ಎಂದು ನಂಬೋಣ
ಇನ್ನು ಮುಂದಾದರೂ ಅವರು ಈ ರೀತಿ
ವಿತಂಡ ವಾದ ಮಾಡುವುದನ್ನು ನಿ
ಎಲ್ಲಾ ಜಾತಿಗಳ ಜನರಿಗೂ ಸೇರಿ
ಉಡುಪಿ ಕೃಷ್ಣ ಮಂದಿರದಲ್ಲಿ ಪಂಕ್ತಿಭೇದವ
ನಿಲ್ಲಿಸುತ್ತಾರೆಂದು ಆಶಿಸಬಹುದೆ?

ವಿ.ಎಚ್.ಪಿ.ಯ ರಾಷ್ಟ್ರೀಯ ಉಪಾಧ್ಯಕ್ಷ
ಆಗಿರುವ ಪೇಜಾವರರು 'ಹಿಂದೂ ನಾವ
ಒಂದು' ಎಂದು ಹೇಳುತ್ತಲೇ ಈ ರೀತಿ
ಜಾತಿ ಭೇದ ಮಾಡುತ್ತಿರುವ ಸಂಗತಿ ಎ
ಕಣ್ಣಿಗೂ ರಾಚುತ್ತಿರುವಾಗ 'ಜಾತಿ ಜಾತಿ
ಮಧ್ಯೆ ದ್ವೇಷ ಬೆಳೆಸುವುದು ಬೇಡ,
ಸಾಮರಸ್ಯ ಬೆಳೆಸಬೇಕು' ಎನ್ನುವ ಆ
ಮನವಿ ವಿಪರ್ಯಾಸದ ಪರಾಕಾಷ್ಠೆಯಂ
ಹೇಳಬಹುದು !

ತಡಗಳಲೆ ಸುರ
ಬೆಂಗಳ

'ಸುವರ್ಣಯುಗ'ದ......

ಪುಟ 2 ರಿಂದ

ಲಕ್ಸೆಂಬರ್ಗ್, ಬೆಲ್ಜಿಯಂ, ನೆದರ್‌ಲ್ಯಾಂಡ್ಸ್ ಹಾಗೂ ಆಗಿನ ಪಶ್ಚಿಮ ಜರ್ಮನಿಗಳು ಒಟ್ಟಾಗಿ ಒಂದು ಕೂಟವನ್ನು ರಚಿಸಿಕೊಂಡಿದ್ದವು. 1957 ರಲ್ಲಿ ಒಂದು ಒಪ್ಪಂದಕ್ಕೆ (ರೋಮ್ ಒಡಂಬಡಿಕೆ) ಸಹಿ ಹಾಕಿ ಈ ಕೂಟವನ್ನು ಯೂರೋಪಿಯನ್ ಆರ್ಥಿಕ ಮಂಡಳಿ (EEC) ಎಂದು ಬದಲಾಯಿಸಿಕೊಂಡವು. 1973 ರಲ್ಲಿ ಡೆನ್ಮಾರ್ಕ್, ಬ್ರಿಟನ್ ಹಾಗೂ ಐರ್ಲ್ಯಾಂಡ್‌ಗಳು ಇದನ್ನು ಸೇರಿಕೊಂಡವು. ನೇರ ಹಾಗೂ ಸಾರ್ವತ್ರಿಕ ಚುನಾವಣೆಗಳಿಂದ ಆಯ್ಕೆಗೊಂಡ ಯೂರೋಪಿನ ಸಂಸತ್ತು (European Parliament) 1979 ರಲ್ಲಿ ರೂಪುಗೊಂಡಿತು. 1981 ರಲ್ಲಿ ಗ್ರೀಸ್ ಹಾಗೂ 1986 ರಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ ಸಹ ಈ ಮಂಡಳಿಗೆ ಸೇರ್ಪಡೆಯಾದವು. ಸೋವಿಯತ್ ಒಕ್ಕೂಟದ ಪತನದ ನಂತರದ ಬೆಳವಣಿಗೆಗಳಿಂದಾಗಿ ಈ ಕೂಟ ಇನ್ನಷ್ಟು ಬಲಗೊಳ್ಳಲು ಹಾಗೂ ವಿಸ್ತರಿಸಲು ಹಾದಿ ಸುಗಮವಾಯಿತು. 1993ರ ನವೆಂಬರ್ ಒಂದರಂದು ಮಾಸ್ಟ್ರಿಕ್ಟ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಯೂರೋಪಿಯನ್ ಸಮುದಾಯ (EU) ಅಸ್ತಿತ್ವಕ್ಕೆ ಬಂತು. 27 ದೇಶಗಳ ಈ ಸಮುದಾಯ ತಮ್ಮ ದೇಶಗಳ ಜನತೆಗೆ ಸಮೃದ್ಧ ಹಾಗೂ ಶ್ರೀಮಂತ ಬದುಕಿನ ಭರವಸೆಗಳ ಮಹಾಪೂರವನ್ನೇ ಒದಗಿಸಿತ್ತು. ಪರಸ್ಪರ ಆರ್ಥಿಕ, ಸಾಮಾಜಿಕ, ರಾಜಕೀಯ ಸಹಕಾರಗಳ ಮೂಲಕ ಇಡೀ ಸಮುದಾಯವನ್ನು ಉಜ್ವಲ ಬೆಳವಣಿಗೆಯತ್ತ ಕೊಂಡೊಯ್ಯುವ ಕನಸಿನ ಗೋಪುರವನ್ನು ಸೃಷ್ಟಿಸಿತು. ಅಂತಹ ಕನಸಿನ ಭಾಗವಾಗಿಯೇ ಯೂರೋಪಿಯನ್ ಸಮುದಾಯದ 11 ದೇಶಗಳು 1999ರ ಜನವರಿ ಒಂದರಂದು 'ಯೂರೋವಲಯ'ವನ್ನು (Euro Zone) ಹುಟ್ಟುಹಾಕಿದವು. ಆ ಮೂಲಕ ಆಯಾ ದೇಶಗಳ ನಾಣ್ಯಗಳು ರದ್ದಾಗಿ ಈ ಎಲ್ಲಾ ದೇಶಗಳಲ್ಲೂ ಯೂರೋ ಎಂಬ ಹೊಸ ನಾಣ್ಯ ಚಲಾವಣೆಗೆ ಬಂತು. 2002 ರಲ್ಲಿ ಈ ಪ್ರಕ್ರಿಯೆ ಪೂರ್ಣವಾಯಿತು. ಈ ನಡುವೆ 2001ರಲ್ಲಿ ಗ್ರೀಸ್ ಹಾಗೂ 2007 ಮತ್ತು 2011 ರ ಅವಧಿಯಲ್ಲಿ ಇನ್ನೂ 5 ದೇಶಗಳು ಯೂರೋವಲಯವನ್ನು ಸೇರಿಕೊಂಡವು. 17 ದೇಶಗಳ ಈ
ವಲಯದ ಒಟ್ಟು ಜನಸಂಖ್ಯೆ ಸುಮ
50 ಕೋಟಿ. ಜಗತ್ತಿನ ಜನಸಂಖ್ಯೆಯ
7.3 ರಷ್ಟು. ಆದರೆ ಅವುಗಳ ಒಟ್ಟು
ಉತ್ಪನ್ನ ಜಗತ್ತಿನ ಸುಮಾರು ಶೇ. 20 ರ
ಅವುಗಳ ಈ ಆರ್ಥಿಕ ಬಲಾಢ್ಯತೆಯಿಂ
ಯೂರೋನಾಣ್ಯ ಪ್ರಬಲವಾಗಿ ಬೆ
ಬಂದದ್ದಲ್ಲದೆ ಅಮೇರಿಕಾದ ಡಾಲ
ಸರಿ ಸಮನಾಗಿ ನಿಲ್ಲಬಹುದಾದ ಮಟ್ಟ
ಬಂತು. ಅದರ ಪ್ರಭಾವ ಎಷ್ಟೊ
ತೀವ್ರವಾಗಿ ಯೂರೋಪನ್ನು ತಟ್ಟಿತೆ
ರೆ, ಯೋರೋಪಿಯನ್ ಸಮುದಾ
ಸೇರದೇ ಇರುವ 6 ಸ್ವತಂತ್ರ ದ
ಯೂರೋವನ್ನೇ ತಮ್ಮ ದೇಶಗಳ ಅಧ
ನಾಣ್ಯವನ್ನಾಗಿ ಮಾಡಿಕೊಂಡಿವೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಜ್ಯದಲ್ಲಿ ಮತ್ತೊಮ್ಮೆ 'ಎಸ್ಮಾ' ಕಾನೂನಿನ ಕರಾಳ ನರ್ತನ ??

'ಎಸ್ಮಾ' ಮರಳಿ ತರುವ ಸರಕಾರದ ಕ್ರಮಕ್ಕೆ ಸಿಐಟಿಯು ತೀವ್ರ ವಿರೋಧ

ೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷಿಯಲ್ಲಿ ಎಂದಿತಂತೆ ಅದು. ಹಾಗೆ ಒಮ್ಮೆ ರ್ನಾಟಕದಲ್ಲಿ ತನ್ನ ಕರಾಳ ನೃತ್ಯ ಮಾಡಿ ಹೋಗಿರುವ ಕಾರ್ಮಿಕ ವಿರೋಧಿ ಕ್ರೂರ ಎಸ್ಮಾ' ಕಾನೂನನ್ನು ಮತ್ತೆ ತರುವುದಾಗಿ ರಾಜ್ಯದ ಸಚಿವರೊಬ್ಬರು ಹೇಳಿಕೆ ನೀಡಿದ್ದಾ- . ಈ ಹಿನ್ನೆಲೆಯಲ್ಲಿ ಎಸ್ಮಾ ಕಾನೂನಿನ ಇತಿಹಾಸ ಮತ್ತು ಅದರ ಕರಾಳ ಮುಖದ ರಿಚಯ ನಿಮಗಾಗಿ.

ಎಸ್. ಪ್ರಸನ್ನಕುಮಾರ

ಾಜ್ಯದ ಸಾರಿಗೆ ಸಚಿವರಾಗಿರುವ ಮಲಿಂಗಾರೆಡ್ಡಿ ಅವರು 'ಎಸ್ಮಾ' ಕಾನೂನನ್ನು ತ್ತೊಮ್ಮೆ ಜಾರಿಗೆ ತರುವುದಾಗಿ ಹಾಗೂ ುಂದಿನ ವಿಧಾನ ಸಭೆಯ ಅಧಿವೇಶನದಲ್ಲಿ ದನ್ನು ಮಂಡಿಸಿ ಅಂಗೀಕರಿಸುವುದಾಗಿ ಕಟಿಸಿದ್ದಾರೆ. ಎಸ್ಮಾ (ESMA- Essential Services Maintenance Act) ಂದ ಕರಾಳ ಕಾನೂನು. ಮಲಿಂಗಾರೆಡ್ಡಿ ಅವರ ೇಳಿಕೆಯು 9 ಆಗಸ್ಟ್ 2013 ಂದು ಹೊರಬಿದ್ದಿದೆ. ಆಗಸ್ಟ್ 9 ಎಂಬುದು ಟೀಷರೇ ಭಾರತ ಬಿಟ್ಟು ತೊಲಗಿ' ಎಂಬ ೋಷಿಸಿದ ದೇಶ ಪ್ರೇಮಿ ಹೋರಾಟದ ನವಾಗಿದೆ. ಅಂತಹ ಮಹತ್ವದ ದಿನದಂದು ಂತಹ ಕರಾಳ ಕಾನೂನು ಪುನರ್ ರಚಿಸಿ ಾರಿಗೊಳಿಸುವ ಸರಕಾರದ ೋರಣೆ ನಿಜಕ್ಕೂ ಒಂದು ಪರ್ಯಾಸವೇ ಸರಿ.

ಐತಿಹಾಸಿಕವಾಗಿ ಭಾರತ ಲ್ಲಿ ಸಾಮ್ರಾಜ್ಯಶಾಹಿ ಬ್ರಿಟಿಷರ ಮನಕಾರಿ ಆಡಳಿತದ ಲದಲ್ಲಿ 1941 ರಲ್ಲಿ 'ಡಿಫೆನ್ಸ್ ಫ್ ಇಂಡಿಯಾ ರೂಲ್ಸ್'ನ ಗವಾಗಿ 'ಸುಗ್ರೀವಾಜ್ಞೆ- I' ಮೂಲಕ ಜಾರಿಗೊಳಿಸಿ ದ್ವಿತೀಯ ಮಹಾಯುದ್ಧದ ಲದಲ್ಲಿ ಭಾರತದ ಸ್ವಾತಂತ್ರ್ಯ ೋರಾಟಗಾರರನ್ನು ಮತ್ತು ರ್ಮಿಕ ವರ್ಗವನ್ನು ಮನ ಮಾಡಲು ಈ ಕರಾಳ ನೂನನ್ನು ಬಳಸಲಾಗಿತ್ತು. ಟೀಷ್ ಸರಕಾರದ ಸದರಿ ನೂನಿಗೆ ವಿರುದ್ಧವಾಗಿ ುರಧೀರ ಹೋರಾಟಗಳೇ ಡೆದಿದ್ದವು.


ಸ್ವಾತಂತ್ರ್ಯಾನಂತರದಲ್ಲಿ 1952ರಲ್ಲಿ ಕೇಂದ್ರ ರಕಾರವು ಜವಹರಲಾಲ್ ನೆಹ್ರೂ ಅವರ ೇತೃತ್ವದಲ್ಲಿ ಮೊದಲ ಬಾರಿಗೆ 'ಎಸ್ಮಾ' ನೂನನ್ನು 10 ವರ್ಷಗಳ ಕಾಲಾವಧಿವರೆಗೆ ್ತಿತ್ವದಲ್ಲಿರುವಂತೆ ಜಾರಿಗೊಳಿಸಿ ರಾಜ್ಯ ರಕಾರಗಳು ಸದರಿ ಮಾದರಿಯಲ್ಲಿ ನೂನುಗಳನ್ನು ರಚಿಸಲು ಅಧಿಕಾರ ೀಡಲಾಗಿತ್ತು. ಇಂದಿರಾಗಾಂಧಿ ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ 1968ರಲ್ಲಿ ತ್ತೊಮ್ಮೆ 'ಎಸ್ಮಾ' ಕರಾಳ ಕಾನೂನನ್ನು ಅಂಗೀಕರಿಸಲಾಯಿತು. ಸದರಿ ಕಾನೂನು ಮೂಲಕ ಸಾರಿಗೆ, ವಿದ್ಯುತ್ ಮತ್ತು ಆರೋಗ್ಯ ಸೇವೆ ಮುಂತಾದ ವಲಯದ ಕಾರ್ಮಿಕರ ಮುಷ್ಕರಗಳನ್ನು ದಮನ ಮಾಡಲು ಉದ್ದೇಶಿಸಲಾಗಿತ್ತು.

1948 ರಲ್ಲಿ 'ಮೈಸೂರು ರಾಜ್ಯ'ದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಕಾರ್ಮಿಕರ ಮುಷ್ಕರವನ್ನು ಹತ್ತಿಕ್ಕಲು ಈ ಕಾನೂನನ್ನು ಜಾರಿ ಮಾಡಲಾಗಿತ್ತು. ಸದರಿ ಕಾನೂನು ಕುರಿತು ರಾಜ್ಯ ಉಚ್ಚ ನ್ಯಾಯಾಲಯವು 'ಮೈಸೂರು ಲೇಬರ್ ಕಾನೂನಿ'ಗೆ ಎಸ್ಮಾ ಕಾನೂನು ವಿರುದ್ಧವಾಗಿದೆ ಎಂದು ತೀರ್ಪು ನೀಡಿತ್ತು. ನಂತರದಲ್ಲಿ ಆಂಧ್ರಪ್ರದೇಶ, ಉತ್ತರ




ಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವಾಗ ಇಂತಹ ಕರಾಳ ಕಪ್ಪು ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಶಿಕ್ಷಕರ ಹೋರಾಟಗಳನ್ನು ಸದೆಬಡಿಯಲು ಈ ಕಾನೂನನ್ನು ಬಳಸಲಾಗಿದೆ.

1994ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ 10 ವರ್ಷಗಳ ಕಾಲ ಮಿತಿಯೊಂದಿಗೆ 'ಎಸ್ಮಾ' ಕಾನೂನ್ನು ಜಾರಿಗೊಳಿಸಿದ್ದು, 2004 ಕ್ಕೆ ಮುಕ್ತಾಯವಾಗಿದೆ. ಬಿಜೆಪಿ ಸರಕಾರವು 2009 ರಲ್ಲಿ ಪುನಃ ಎಸ್ಮಾ ಕಾನೂನನ್ನು ವಿಧಾನ ಮಂಡಳದಲ್ಲಿ ಅಂಗೀಕರಿಸಿ ರಾಷ್ಟ್ರಪತಿಗಳ ಅನುಮೋದನೆಗಾಗಿ ಕಳುಹಿಸಿದ್ದೂ, ಆಗ ಕೇಂದ್ರದಲ್ಲಿ ಯುಪಿಎ-1 ಸರಕಾರವು ಎಡಪಕ್ಷಗಳ ಬೆಂಬಲದಲ್ಲಿದ್ದ ಕಾಲಾವಧಿಯಲ್ಲಿ ಸದರಿ ಕಾನೂನಿಗೆ ಅನುಮೋದನೆಯನ್ನು ನೀಡದಿರುವ ಕಾರಣ ಸದರಿ ಕಾನೂನು ವಿಧಾನ ಸಭೆ ವಿಸರ್ಜನೆಯಾಗಿ ಕಾಲಮಿತಿಯನ್ನು ಕಳೆದುಕೊಂಡಿತ್ತು.



ಸಿದ್ದರಾಮಯ್ಯ



ರಾಮಲಿಂಗಾರೆಡ್ಡಿ

ಬಿಜೆಪಿ ಸರಕಾರದ ಉದ್ದೇಶಿತ ಕಾನೂನಿನಲ್ಲಿ ಅಗತ್ಯ ಸೇವೆಗಳ ನೌಕರರು ಪರವಾನಗಿ ಇಲ್ಲದೇ ಕೆಲಸಕ್ಕೆ ಗೈರುಹಾಜರಾದರೆ ಅಥವಾ ಮುಷ್ಕರದಲ್ಲಿ ಭಾಗಿಯಾದರೆ ಮತ್ತು ಅಂತಹ ಮುಷ್ಕರಗಳಿಗೆ ಬೆಂಬಲಿಸಿದರೆ ಜೈಲು ಶಿಕ್ಷೆ ಮತ್ತು ರೂ.2,000 ದಂಡ ವಿಧಿಸುವ ಅಂಶಗಳು ಒಳಗೊಂಡಿವೆ. ಅಲ್ಲದೇ ವಾರೆಂಟ್ ಇಲ್ಲದೇ ಬಂಧಿಸುವ ಸರ್ವಾಧಿಕಾರಿ ಅಂಶಗಳು ಒಳಗೊಂಡಿವೆ. ರಾಮಲಿಂಗಾರೆಡ್ಡಿ ಅವರು ಸದರಿ ಕಾನೂನನ್ನು ಮತ್ತೂ ಬಿಗಿಗೊಳಿಸಿ ಜಾರಿ ಮಾಡುವುದಾಗಿ ಹೇಳಿಕೆ ನೀಡಿದ್ದು, ದಂಡವನ್ನು ರೂ. 2,000 ರಿಂದ ರೂ.5,000 ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದಾರೆ. ಹಿಂದೆ ಇಂತಹ ಕರಾಳ ಕಾನೂನನ್ನು ಪಿಯುಸಿ ಉಪನ್ಯಾಸಕರ ವಿರುದ್ಧ ಕರ್ನಾಟಕದಲ್ಲಿ ಉಪಯೋಗಿಸಿ ಧಾಳಿ ಮಾಡಲಾಗಿತ್ತು. ಈ ಹಿಂದಿನ ಕಾಲಾವಧಿಯಲ್ಲಿ 'ಎಸ್ಮಾ' ಜಾರಿ ಇಲ್ಲದ ಸಂದರ್ಭದಲ್ಲಿ ಕಳೆದ ವರ್ಷ ಸಾರಿಗೆ ನೌಕರರು ಬೇಡಿಕೆಗಳ ಈಡೇರಿ- ಕೆಗಾಗಿ ಮುಷ್ಕರ ನಡೆಸಿದಾಗ ಮಾತುಕತೆಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳಲಾಗಿತ್ತು. ಈ ಎರಡೂ ಮಾದರಿಗಳು ಇಲ್ಲಿ ಜನರ ಮುಂದಿವೆ. ನೌಕರರ ನ್ಯಾಯವಾದ ಸಮಸ್ಯೆಗಳನ್ನು ಬಗೆಹರಿಸಲು ಪ್ರಜಾಪ್ರಭುತ್ವ ಮಾರ್ಗದಲ್ಲಿ ಸಮಾಲೋಚನೆ, ಚರ್ಚೆಗಳ ಮೂಲಕ ಸಾಮರಸ್ಯದಿಂದ ಪರಿಹಾರ ಕಂಡುಹಿಡಿಯುವ ಬದಲಾಗಿ ಕರಾಳ ಕಾನೂನುಗಳನ್ನು ತರಲು ಮುಂದಾಗಿರುವುದು ಒಂದು ಖಂಡನಾರ್ಹ ಪ್ರವೃತ್ತಿಯಾಗಿದೆ. ಇತ್ತೀಚೆಗೆ 108 ನೌಕರರು ಹೋರಾಟಕ್ಕೆ ಇಳಿದಾಗ ರಾಜ್ಯದ ಹೈಕೋರ್ಟ್ ನಿರ್ದೇಶನದಂತೆ ಮಾತುಕತೆಗಳನ್ನು ಆರೋಗ್ಯ ಇಲಾಖೆಯ ಮಂತ್ರಿಗಳಾದ ಯು.ಟಿ.ಖಾದರ್ ಅವರ ನೇತೃತ್ವದಲ್ಲಿ ನಡೆಸಲಾಗುತ್ತಿದೆ.

ಯಾವುದೇ ಅಗತ್ಯ ಸೇವೆಗಳ ನೌಕರರ ಸಾಂದರ್ಭಿಕ ಬೇಡಿಕೆಗಳು, ಸಮಸ್ಯೆಗಳನ್ನು ಬಗೆಹರಿಸಬೇಕಾದ ಸಂದರ್ಭದಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಮಾತುಕತೆ, ಸಂಧಾನ, ಸಮಾಲೋಚನೆಗಳ ಮೂಲಕ ನ್ಯಾಯಬದ್ಧವಾಗಿ ಸರಕಾರವು ಮಧ್ಯಪ್ರವೇಶ ಮಾಡಿ ಪರಿಹಾರ ಕಂಡುಹಿಡಿದು ಸಾರ್ವಜನಿಕರಿಗೆ ಆಗಬಹುದಾದ ಅನಾನುಕೂಲಗಳನ್ನು ತಪ್ಪಿಸಲು ಪ್ರಜಾಪ್ರಭುತ್ವ ರೀತಿಯಲ್ಲಿ ಚರ್ಚೆ, ಮಾತುಕತೆ ಮತ್ತು ಸಂಧಾನ ಕ್ರಮಗಳ ಮೂಲಕ ನೌಕರರ ನ್ಯಾಯವಾದ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸಿ ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ. ಕೈಗಾರಿಕಾ ವಿವಾದಗಳ ಕಾನೂನಿನಲ್ಲಿ ಮುಷ್ಕರಗಳನ್ನು ನಿಷೇಧಿಸುವ ಅಧಿಕಾರವು ಸರಕಾರಕ್ಕೆ ಇದೆ. ಅದೇ ಸಮಯದಲ್ಲಿ ಸಂಬಂಧಿತ ಸಮಸ್ಯೆಗಳ ಪರಿಹಾರ ಒದಗಿಸುವ ಆದೇಶ ನೀಡುವ ಅಧಿಕಾರವೂ ಇದೆ. ಆದ್ದರಿಂದ ಈಗಾಗಲೇ ಜಾರಿಯಲ್ಲಿರುವ ಕಾನೂನುಗಳಲ್ಲಿ ಅಗತ್ಯ ಕ್ರಮಗಳನ್ನು ವಹಿಸುವ ಬದಲಾಗಿ ಸರ್ವಾಧಿಕಾರಿ, ಧಮನಕಾರಿ ಮತ್ತು ಕರಾಳ 'ಎಸ್ಮಾ' ಕಾನೂನು ಪುನರ್ ಅಂಗೀಕರಿಸುವುದು ಯಾವ ಕಾರಣಕ್ಕೂ ಸಮಂಜಸವಲ್ಲ ಮತ್ತು ಸಮರ್ಥನೀಯವಲ್ಲ.

'ಎಸ್ಮಾ' ದಂತಹ ಕರಾಳ ಕಾನೂನುಗಳ ವಿರುದ್ಧ ಜನತಾ ಪರಿವಾರದ ಭಾಗವಾಗಿ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೋರಾಟಗಳಲ್ಲಿ ಭಾಗಿಯಾಗಿದ್ದವರು. ಜನತಾ ಪಕ್ಷವು ಅಸ್ತಿತ್ವಕ್ಕೆ ಬಂದಿದ್ದೇ ಇಂತಹ ಕರಾಳ ಕಾನೂನುಗಳ ವಿರುದ್ಧ ಹೋರಾಟಗಳ ಪ್ರಕ್ರಿಯೆಯಲ್ಲಿ ಜೈಲುಗಳಲ್ಲಿ. ಜನತಾ ಪಕ್ಷದ ಉದಯಕ್ಕೆ ಅಂದಿನ ಕಾಂಗ್ರೆಸ್ ಸರ್ಕಾರದ ಇಂತಹ ದಮನಕಾರಿ ಕಾನೂನು ಮತ್ತು ನೀತಿಗಳೇ ನಾಂದಿಯಾಗಿತ್ತು. ಕಾಂಗ್ರೆಸ್ ಪಕ್ಷ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂತಹ ವಿಚಾರಗಳನ್ನು ನೆನಪಿಸಿಕೊಳ್ಳಬೇಕು. ಇತಿಹಾಸವನ್ನು ಮರೆಯಬಾರದು.

ಇಂತಹ ಕರಾಳ ಕಾನೂನನ್ನು ಯಾವುದೇ ಕಾರಣಕ್ಕೆ ವಿಧಾನ ಮಂಡಳದಲ್ಲಿ ಮಂಡಿಸಬಾರದೆಂದು ಸಿಐಟಿಯು ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ತೀವ್ರವಾಗಿ ಒತ್ತಾಯಿಸಿದೆ. ಈ ಕಾನೂನನ್ನು ಪುನರ್ ರಚಿಸಿ ಜಾರಿಗೊಳಿಸುವುದನ್ನು ಸಿಐಟಿಯು ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿದೆ. ಸರಕಾರವು ಮೊಂಡು ಧೋರಣೆ ತಳೆದಲ್ಲಿ ರಾಜ್ಯದ ಎಲ್ಲಾ ಕಾರ್ಮಿಕ ವರ್ಗವನ್ನು ಐಕ್ಯಗೊಳಿಸಿ, ಪ್ರಜಾಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಿ ಪ್ರಬಲ ಚಳುವಳಿ ನಡೆಸಬೇಕಾಗುತ್ತದೆ ಎಂದು ಸಂಘಟನೆಯ ರಾಜ್ಯ ಅಧ್ಯಕ್ಷರಾದ ವಿ.ಜೆ. ಕೆ.ನಾಯರ್ ಮತ್ತು ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್ ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕರಾವಳಿ ಜಿಲ್ಲೆಗಳಲ್ಲಿ ಸಂಘ ಪರಿವಾರ ಮತ್ತೆ ಚುರುಕು

ಕಡಲತಡಿ

ಬಾಲಕೃಷ್ಣ ಶೆಟ್ಟಿ

ಮಾರ್ಚ್ ತಿಂಗಳಲ್ಲಿ ನಡೆದ ಸ್ಥಳೀಯ ಸಂಸ್ಥೆ ಮತ್ತು ಮೇ ತಿಂಗಳಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಗೆ ಆದ ತೀವ್ರ ಹಿನ್ನಡೆಯಿಂದ ವಿಚಲಿತಗೊಂಡಿದ್ದ ಸಂಘಪರಿವಾರದ ಸಂಘಟನೆಗಳು ದ.ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮತ್ತೆ ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಮಣಿಪಾಲ ಗ್ಯಾಂಗ್ ರೇಪ್ ಪ್ರಕರಣದ ವಿರುದ್ಧದ ಪ್ರತಿಭಟನೆಯಲ್ಲಿ ರಂಗ–ಕ್ಕೆ ಬರಲು ಪ್ರಯತ್ನಿಸಿದ ಸಂಘಪರಿವಾರದ ಸಂಘಟನೆಗಳಿಗೆ ಸಿಪಿಐ(ಎಂ)ನ ಸಕಾಲಿಕ ಮಧ್ಯಪ್ರವೇಶ ಮತ್ತು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾದುದರಿಂದ ತೊಡಕುಂಟಾಯಿತು. ಜೊತೆಯಲ್ಲಿ ಪ್ರಮುಖ ಆರೋಪಿ ಯೋಗೀಶ್ ಹಿಂದೆ ಭಜರಂಗದಳದ ಕಾರ್ಯಕರ್ತನಾಗಿದ್ದ. ಆತನ ಸಹೋದರ ಮಣಿಪಾಲದಲ್ಲಿ ಭಜರಂಗದಳದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಎಂಬಿತ್ಯಾದಿ ಸುದ್ದಿಗಳು ಸಹ ಸಂಘಪರಿವಾರದ ಮುಖಕ್ಕೆ ಮಸಿ ಬಳಿಯಿತು.

ಅಲ್ಲದೆ, ಮಣಿಪಾಲದ ದೊರೆಗಳ ಆಶ್ರಯದಲ್ಲೇ ಸುಖಕಾಣುವ ಬಿಜೆಪಿ ಪ್ರತಿಭಟನೆ ನಡೆಸುವ ಗೋಜಿಗೂ ಹೋಗಿರಲಿಲ್ಲ.

ಇದೀಗ ದನಗಳ ಸಾಗಣಿಕೆ ತಡೆಯುವ ಹೆಸರಿನಲ್ಲಿ ಬಜರಂಗದಳ ಚುರುಕಾಗಿದ್ದು, ಕೋಮುಭಾವನೆಯನ್ನು ಪ್ರಚೋದಿಸುವ ಕೆಲಸಕ್ಕೆ ಮುಂದಾಗಿದೆ.

ಅಗಸ್ಟ್ 19 ಮತ್ತು 20 ರಂದು ಅವಳಿ ಜಿಲ್ಲೆಗಳ ಪ್ರಮುಖ ಕೇಂದ್ರಗಳಲ್ಲಿ ಜನಜಾಗೃತಿ ಸಮಿತಿ ಹೆಸರಿನಲ್ಲಿ "ದನಗಳ ಕಳ್ಳತನ"ದ ವಿರುದ್ಧ ಭಜರಂಗದಳ ಪ್ರತಿಭಟನೆ ನಡೆಸಿದ್ದು ಮಾತ್ರವಲ್ಲದೆ ಅದರ ಮುಖಂಡರು ಪ್ರಚೋದನಕಾರಿ ಭಾಷಣ ಮಾಡಿರುತ್ತಾರೆ. "ಹಿಂದುಗಳು ಶಸ್ತ್ರಗಳನ್ನು ಹೊಂದಬೇಕು" ಎಂದು ಹೇಳಿದ್ದಲ್ಲದೆ "ಇದಕ್ಕೆಲ್ಲ ಮುಸ್ಲಿಮರೇ ಕಾರಣ" ಎಂದು ದೂರಿದ್ದಾರೆ. ಅದರ ಪ್ರಾಂತೀಯ ಸಂಚಾಲಕ ಮಂಜುನಾಥ ಮಂಡ್ಯ ಅವರು ಮಂಗಳೂರಿನಲ್ಲಿ ಮಾಡಿದ ಭಾಷಣದ ತುಣುಕುಗಳು ಹೀಗಿವೆ.

"ಮನೆಯಲ್ಲಿ ಆಯು ಧ ಪೂಜೆಯನ್ನು ಟಿ.ವಿ., ಫ್ರಿಡ್ಜ್‌ಗಳಿಗೆ ಮಾಡುವ ಬದಲು ತಮ್ಮ ಸ್ವಯಂ ರಕ್ಷಣೆಗೆ ಇರಿಸಿಕೊಂಡ ಆಯುಧಗಳಿಗೆ



ಪೂಜೆ ಮಾಡಬೇಕು........ ತಲವಾರುಗಳನ್ನು ತೋರಿಸಿ, ದನ ಕದಿಯುವಾಗ ಆಯು ಧ ಬಳಸಿ, ತಮ್ಮ ಜಾನುವಾರುಗಳನ್ನು ರಕ್ಷಿಸಿಕೊಳ್ಳಬೇಕು".

ಸಂಘ ಪರಿವಾರದ "ಈ ದೇಶ ಮುಸ್ಲಿಮರಿಗೆ ಎಲ್ಲವನ್ನೂ ಕೊಟ್ಟಿದೆ. ಪ್ರತೆ–ೄಕ ದೇಶವನ್ನೇ ಘೋಷಣೆ ಮಾಡಿದರೂ ಅವರನ್ನು ನಮ್ಮ ದೇಶ ಬಿಟ್ಟುಹೋಗುವಂತೆ ಹೇಳಿಲ್ಲ. ಹಿಂದೂಗಳ ಭಾವನೆಗಳಿಗೆ ಧ–ಕ್ಕೆಯಾದಾಗ ಅನೇಕ ಬಾರಿ ಸಹಿಸಿಕೊಂಡಿದ್ದೇವೆ. ......" ಇತ್ಯಾದಿ. ಕರಾವಳಿ ಆವೃತಿ (ಪ್ರಜಾವಾಣಿ 20.08.2013)

ಈ ಸಂಘಟನೆಗಳ ಮುಖಂಡರು ಎಷ್ಟೊಂದು ಅಪಪ್ರಚಾರ ಮಾಡುತ್ತಿದ್ದಾರೆಂದರೆ ಕಳೆದ 5 ವರ್ಷಗಳಲ್ಲಿ ಜಾನುವಾರು ಸಂಖ್ಯೆ 1.5 ಲಕ್ಷದಷ್ಟು ಇಳಿಕೆಯಾಗಿದೆಯಂತೆ. ಇದಕ್ಕೆಲ್ಲ ಕಳ್ಳತನವೇ ಕಾರಣ ಎಂದು ಹೇಳುತ್ತಿದ್ದಾರೆ. ಆದರೆ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳ ಪ್ರಕಾರ, ಕೃಷಿ ಬಿಕ್ಕಟ್ಟು ಜಾನುವಾರು ಪ್ರಮಾಣ ಕುಸಿತಕ್ಕೆ ಕಾರಣ. ಜಾನುವಾರು ಸಾಕುವವರು "ಮೇವಿನ ಕೊರತೆ ಮತ್ತು ಆಹಾರ ವಸ್ತುಗಳ ಬೆಲೆ ಗಗನಕ್ಕೇರಿದೆ. ಇದರಿಂದ ಮನೆಯಲ್ಲಿ ಒಂದು ಹಸುವನ್ನು ಉಳಿಸಿಕೊಳ್ಳುವುದೂ ಕಷ್ಟವೆನಿಸಿದೆ". ಎಂದು ಹೇಳುತ್ತಾರೆ.

ಕೆಲವೊಂದು ಪತ್ರಿಕೆಗಳಲ್ಲಿ ಬಂದ ವರದಿಯ ಪ್ರಕಾರ ದನಗಳ್ಳತನ ಬಂಧಿತರಲ್ಲಿ ಬಹುತೇಕರು ಮುಸ್ಲಿಂ ಜನಾಂಗಕ್ಕೆ ಸೇರಿದವರಲ್ಲ. ಆದರೆ ಸಂಘಪರಿವಾರದವರು ಕೋಮು ವಿಷಬೀಜ ಬಿತ್ತಲು ಇದನ್ನು ಮುಸ್ಲಿಂಮರ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ. 'ನೈತಿಕ ಪೊಲೀಸ್‌ಗಿರಿ' ವಿರುದ್ಧ ಸಾಕಷ್ಟು ಪ್ರತಿಭಟನೆಗಳು ವ್ಯಕ್ತವಾದುದರಿಂದ ಈಗ ಹೊಸತೊಂದು ಅಸ್ತ್ರ ಬಳಕೆಯಾಗುತ್ತಿದೆ.

ಆಶ್ಚರ್ಯದ ಸಂಗತಿ ಎ ದನಗಳ್ಳತನದಲ್ಲಿ ಸ್ವತಃ ಸಂಘಪರಿವಾ ಜನರೇ ಬಂದಿಸಲ್ಪಡುತ್ತಿದ್ದಾರೆ. ಅ ಕದಿಯುವವರು ಅವರೇ, ಕಳ್ಳತನದ ವಿ ಹೋರಾಡುವವರು ಅವರೇ! ಇತ್ತೀ ಪಣಂಬೂರಿನಲ್ಲಿ ಓರ್ವ ದನಗ ಬಂಧಿಸಲಾಗಿದ್ದು, ಆತ ಸಂಘಪರಿವಾ ಸೇರಿದವನು ಎಂಬುದು ಖಾತರಿಯಾ ತಾವೇ ದನಗಳನ್ನು ಕದ್ದು ಮುಸ್ಲಿಂ ಮೇಲೆ ಆರೋಪ ಹೋರಿಸುವುದು ಇ ತಂತ್ರವೂ ಆಗಿದೆ.

ದೇವಸ್ಥಾನಗಳ ದುರುಪಯೋಗ :–

ಹಿಂದೂಗಳ ವಾರೀಸುದಾರರು ಎ ಬಿಂಬಿಸಿಕೊಳ್ಳುತ್ತಿರುವ ಸಂಘ ಪರಿವಾರದ ಕರಾವಳಿ ಜಿಲ್ಲೆಗಳ ಹಲವಾರು ದೇವಸ್ಥಾನ ಆಡಳಿತ ಮಂಡಳಿಯಲ್ಲೂ ನುಸುಳಿದ ಪುತ್ತೂರಿನ ನೆಹರೂ ನಗರದಲ್ಲಿರುವ ಅ ಒಂದು ದೇವಸ್ಥಾನದಲ್ಲಿ ಭಿತ್ತಿ ಪತ್ರವೊಂದ ಅಂಟಿಸಿ, ಹಿಂದೂಗಳೆ, ದೇಶದ್ರೋಹಿಗ ಹತ್ತಿರ ಮಾಡುವ ಕಾಂಗ್ರೆಸ್‌ನ್ನು ದೇಶದ ತೊಲಗಿಸಿ" ಎಂದು ಬರೆಯ ಈ ದೇಶದ ಜನರ ಹಿತದೃಷ್ಟಿಯ ಕಾಂಗ್ರೆಸ್ ಪಕ್ಷವನ್ನು ಅಧಿಕಾರದ ತೊಲಗಿಸಬೇಕಾಗಿರುವುದು ಇಂದಿನ ಕ ಎಂಬುದು ಸತ್ಯ. ಆದರೆ ದೇಶದ್ರೋಹಿ ಯಾರು? ಯಾಕಾಗಿ ಈ ಪ್ರಚೋದ ಖಂಡಿತವಾಗಿ ಮುಂಬರುವ ಲೋಕಸ ಚುನಾವಣೆ ಕಣ್ಣಮುಂದಿದೆ.

ಒಟ್ಟಾರೆಯಾಗಿ ಸಂಘಪರಿವಾ ಸಂಘಟನೆಗಳ ಅಬ್ಬರ ಹೆಚ್ಚಾಗುತ್ತಿದೆ. ಬೆಂಕಿಗೆ ಕಾಂಗ್ರೆಸ್ ಪಕ್ಷದ ಜನವಿರೋಧಿ ಆಡಳಿತಾತ್ಮಕ ವೈಫಲ್ಯ ತುಪ್ಪ ಸುರಿಯು ಇವೆರಡೂ ಪಕ್ಷಗಳನ್ನು ಜನರಿಂದ ದ ಮಾಡುವಂತೆ ಎಡ ಪಕ್ಷಗಳು ವಿಶೇಷ ಸಿಪಿಐ(ಎಂ) ಕಾರ್ಯನಿರ್ವಹಿಸಬೇಕಾಗಿ

ಮತೀಯವಾದಿಗಳಿಗೆ.......

ಪುಟ 3 ರಿಂದ

ಗಣೇಶ ಇಂದಿನಂತೆಯೇ ಇದ್ದನೇ? ಮನುಷ್ಯ ದೇಹ, ಆನೆಯ ಮುಖವೇ ಇತ್ತೇ? ಇರಲು ಸಾಧ್ಯವೇ? ಇದನ್ನು ಹೇಗೆ ಅರ್ಥೈಸುವುದು. ಆತನ ಇಷ್ಟಾರ್ಥಗಳು ಈಡೇರದಿದ್ದರೆ ವಿಘ್ನ ತಂದೊಡ್ಡುವುದು ಗ್ಯಾರಂಟಿ ಎಂದ–ರೆ ಆತ ವಿನಯಮೂರ್ತಿಯೇ ಅಥವಾ ಒರಟುತನವೇ? ತಳ ಸಮುದಾಯಗಳು ಆದರಿಸಿ, ಆಚರಣೆಗಳ ಭಾಗವಾಗಿಸಿಕೊಂಡ ಜನ ಸಮುದಾಯಗಳ 'ಆಸ್ತಿ'ಗಳನ್ನು ಹಾಡ ಹಗಲೇ ಅಪಹರಿಸಿ ಬೆಣ್ಣೆ ಮೆಲ್ಲುವವರು ಉತ್ತರಿಸಬೇಕಾದ ಇಂತಹ ಹಲವು ಪ್ರಶ್ನೆಗಳಿವೆ!

ಇಂತಹ ದೇವರು, ದೈವಗಳೂ 'ಹುಟ್ಟಿದ್ದು', ಅವತಾರಗಳು 'ಘಟಿಸಿದ್ದು' ಒಂದು ನಿರ್ಧಿಷ್ಠ ಕಾಲ ಘಟ್ಟದಲ್ಲಿ, ಸನ್ನಿವೇಶದಲ್ಲಿ ತಾನೇ! ನಮ್ಮಲ್ಲಿರುವ ಉತ್ಪಾದನಾ ಪದ್ಧತಿ–ಪರಿಕರಗಳು, ಆಚರಣೆ, ನಂಬಿಕೆ, ಪಾತ್ರ–ಪ್ರತಿಮೆಗಳು, ಸಾಹಿತ್ಯ, ಹೀಗೆ ಇಂತಹವುಗಳ ಆಧಾರದಲ್ಲಿ ನಮ್ಮ ಇತಿಹಾಸವನ್ನು ವಿಶ್ಲೇಷಿಸುವುದು, ಅರಿಯುವುದು ಸಾ ಧ್ಯ ಅಲ್ಲವೇ? .

ವಾದಗಳ ಹೂರಣ

ಆದರೆ ತಾವು ಹೇಳಿದ್ದು ಮಾತ್ರ ಇತಿಹಾಸ, ಸಂಸ್ಕೃತಿ, ಉಳಿದವರದ್ದೆಲ್ಲಾ ವಿಕೃತಿ ಎನ್ನುವುದು ಫ್ಯಾಶಿಸ್ಟ್ ವರ್ತನೆಯಾಗಿದೆ. ಸದಾ ಚರಿತ್ರೆಯನ್ನು ತಮ್ಮ ಸಂಕುಚಿತ ವಿಕೃತ ಉದ್ದೇಶಗಳಿಗೆ ತಿರುಚುವ ಈ ಸಂಘಪರಿವಾರ ಈಗ ತಮ್ಮ ಭಾವನೆಗಳಿಗೆ ಧಕ್ಕೆ ಎಂದು ವಾದಿಸುವುದು ಉಳಿದವರಿಗೆ ಭಾವನೆ, ಬದುಕು ಇಲ್ಲವೆಂಬುದರ ನಿರಾಕರಣೆಯಾಗಿದೆ. ಹಾಗೆ ಅದು ವಾದಿಸುವಾಗ ತಾವು ಸೃಷ್ಟಿಸಿದ ವರ್ಣರಂಜಿತ ವಂಚನೆಯ ವಾದಗಳ ಹೂರಣವು ಸತ್ಯದ ಹುಡುಕಾಟದಲ್ಲಿ ಎಲ್ಲಿ ಹೊರ ಬೀಳುವುದೋ, ಸಮುದ್ರ ಮಥನಕ್ಕೆ 'ರಾಕ್ಷಸರ'ನ್ನು(ಶೂದ್ರರನ್ನು) ಹಚ್ಚಿ ಅಮೃತ ತಿನ್ನುವುದು ಎಲ್ಲಿ ತಪ್ಪಿ ಹೋಗುವುದೋ ಎಂಬ ದಿಗಿಲು ಇದರ ಹಿಂದೆ ಇದೆ.

ಹಾಗೆ ನೋಡಿದರೆ ಗಣಪತಿಯನ್ನು ಬಹುಧರ್ಮಿಯರು ಸ್ವಾಗತಿಸುತ್ತಾರೆ, ಈತನಿಗೆ ಸಿಕ್ಕಷ್ಟು ವಿವಿಧ ಜಾತಿ, ಜನಾಂಗಗಳ ಪುರಸ್ಕಾರ, ವೈವಿಧ್ಯ ಆಚರಣೆ ರೀತಿ ಬೇರೆಯವರಿಗಿಲ್ಲ ಎನ್ನಬಹುದು. ಇಂತಹ 'ಗಣ– ಪತಿ'ಯನ್ನು 'ಹಿಂದುತ್ವದ ಶಕ್ತಿಗಳು' ಅಪಹರಿಸಿ ಬಂಧಿಯನ್ನಾಗಿಸುತ್ತಿದ್ದಾರೆ. ಮತೀಯ ದ್ವೇಶ ಹೊತ್ತಿಸಲು ಸಿಡಿ ಮದ್ದನ್ನಾಗಿಸುತ್ತಿದ್ದಾರೆ. ಇದು ಉಗ್ರ ಖಂಡನೀಯ.

ಬಂಧನ ಖಂಡನೀಯ

ಇದೀಗ ಬಂದ ಸುದ್ದಿಯಂತೆ (ಆ.29) ಚೆಡ್ಡಿ ಪಡೆ ನೀಡಿದ್ದ ದೂರನ್ನು ಅನುಸರಿಸಿ ಲೇಖಕ ಯೋಗೇಶ್ ಮಾಸ್ತರರನ್ನು ಬೆಂಗಳೂರಿನ ಕಲಾಸಿಪಾಳ್ಯಂನ ಪೋಲೀಸರು ಐಪಿಸಿ 295(ಎ) ಪ್ರಕಾರ ಬಂಧಿಸಿದ್ದಾರೆ. ಹಿಂದೂ ಧಾರ್ಮಿಕ ಭಾವನೆಗಳಿಗೆ ಧ–ಕ್ಕೆ ಉಂಟು ಮಾಡಿದ ಕಾರಣ! ಒಂದು ಕೃತಿಯೊಂದರಲ್ಲಿನ ಅಂಶಗಳಿಗೆ ಯಾರೋ ಕೆಲವರು ತಕರಾರು ಎತ್ತಿದ್ದಾರೆ, ಗುಂಪುಕಟ್ಟಿ ದೊಂಬಿ ನಡೆಸುತ್ತಾರೆ ಎನ್ನುವುದನ್ನೇ ಆಧರಿಸಿ ಆರೋಪದ ಟೊಳ್ಳುತನ, ಹಿಂದಿರುವ ಕಪಟತನವನ್ನು ಪರಿಗಣಿಸದೇ ಮೊಕದ್ದಮೆ ದಾಖಲಿಸಿ ಬಂಧಿಸಿರುವುದು ಅಕ್ಷಮ್ಯ, ಇದು ಬರಹಗಾರನ ಮೂಲಭೂತ ಹಕ್ಕಾದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಕ್ರೂರ ಹಲ್ಲೆ. ಖಾವಿ ಪಡೆಯನ್ನು ಓಲೈಸುವ ಕಾಂಗ್ರೆಸ್ ಸರಕಾರದ ಈ ಕ್ರಮ ಖಂಡನೀಯ.

ಇಂತಹ ಕ್ರಮ ವಹಿಸುವಾಗ ಪ್ರತಿಗಾಮಿಗಳು ಸನ್ನಿವೇಶದ ದುರುಪಯೋಗ ಪಡೆಯಬಾರದೆಂಬ ಉದ್ದೇಶವಿದೆಯೆಂದು ಸರಕಾರ ಹೇಳಿಕೊಳ್ಳಬಹುದು. ಆದರೆ ಪ್ರತಿಗಾಮಿಗಳು ಇಷ್ಟಕ್ಕೆ ಸುಮ್ಮನಾ ಜಾಯಮಾನದವರೇನಲ್ಲ. ದು ಕೊಟ್ಟಿರುವವರ ವಾದವನ್ನೇ ತಮ್ಮ ಆಧರಿಸುವಂತಾದರೆ, ಅವರು ಹೇಳಿ ಹೂಂ ಗುಟ್ಟುವುದಾದರೆ ಜ ವಾದವನ್ನೇ ಸರಕಾರ ಪುರಸ್ಕರಿಸಿದಂತಲ್ಲ ಕೋಮುವಾದಿಗಳ ಬ್ಲಾಕ್‌ಮೇಲ್‌ಗೆ ಬಗ್ಗಿದ ಅಲ್ಲವೇ?.

ಈ ಕೂಡಲೇ ಸರಕಾರ ಬೇಷರತ ಲೇಖಕರನ್ನು ಬಿಡುಗಡೆ ಮಾಡಬೇಕು, ವ ಮೊಕದ್ದಮೆಗಳನ್ನು ಹಿಂಪಡೆಯಬೇಕು.

ಧಾರ್ಮಿಕ ಭಾವನೆಗಳ ಅಗೌರವಿಸಬೇಕೆಂದಲ್ಲ. ನಮ್ಮ ತಕರಾ ಸಂಘಪರಿವಾರ ಈಗ ಹೇಳುವ ಧಾರ್ಮಿಕ ನಂಬಿಕೆಗಳೇ ಎಂಬುದ ಇಲ್ಲಿ ಸಂಘಪರಿವಾರ ಮತ್ತು ಸರಕಾ ಟೊಳ್ಳುತನವನ್ನು ಅರಿಯಬೇಕು. ನಾ ಪ್ರಜ್ಞಾವಂತರು ಈಗಲೇ ಪ್ರತಿಭಟಿಸದಿ ಬರಹಗಾರರು, ಕಲಾವಿದರು ಬಾಯಿ, ಕಾಲುಗಳಿಗೆ ಸ್ವಯಂ ಬೇಡಿ ತೊಟ್ಟು ಬಂಧಿಖಾನೆಯಲ್ಲಿ ಕಾಲ ನೂಕಬೇಕಾಗು ಎಂಬುದನ್ನು ಮರೆಯದಿರೋಣ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರೂಪಾಯಿಯ ಹಿಂದೆಂದೂ ಕಾಣದ ಪತನಕ್ಕೆ ಆಹಾರ ಭದ್ರತಾ ಮಸೂದೆಯೇ ತಕ್ಷಣದ ಕಾರಣ ಎಂದು ಕಾರ್ಪೊರೇಟ್ ವಲಯ ಮತ್ತು ನವ-ಉದಾರವಾದಿ ಪಂಡಿತರು ಕೂಗಾಡುತ್ತಿದ್ದಾರೆ. ವಾಸ್ತವವಾಗಿ, ದೇಶ ತನ್ನ ಹಸಿದ ಜನಗಳಿಗೆ ಉಣಿಸುವ ಬಗ್ಗೆ ಯೋಚಿಸುವುದೇ ಭಂಡತನ, ಅಂತಹ ಭಂಡತನ ತೋರಿ ತಮ್ಮ ಲಾಭದ ಬೇಟೆಗೆ ಸಂಚಕಾರ ಬರುವಂತಾಗಬಾರದು ಎಂಬ ಅಮಾನವೀಯ ಕೂಗು ಇದು. ತನ್ನ ಹಸಿದ ಜನಗಳಿಗೆ ತುತ್ತು ಕೊಡಲಾಗದ ಒಂದು ದೇಶ, ಹಿಡಿಯಷ್ಟು ಶ್ರೀಮಂತರು ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳಲು ಆಡುವ ಆಟಗಳ ಮೈದಾನವಾಗಲು ಕೂಡ ಖಂಡಿತ ಸಾಧ್ಯವಿಲ್ಲ ತಾನೇ?

ಶ್ರೀಮಂತರ ಲಕ್ಷ ಕೋಟಿ ಸಬ್ಸಿಡಿಗಳ ಬಗ್ಗೆ ದಿವ್ಯ ಮೌನ! ಬಡವರ ಸಾವಿರ ಕೋಟಿ ಸಬ್ಸಿಡಿಗಳ ಬಗ್ಗೆ ಕೂಗಾಟ!!

ಸೀತಾರಾಂ ಯೆಚೂರಿ


ಭಾರತದ ರೂಪಾಯಿ ಈ ವಾರ ಮತ್ತೆ ಹಿಂದೆಂದೂ ಕಾಣದಷ್ಟು ಕೆಳಕ್ಕೆ ಉರುಳಿದೆ. ಅಷ್ಟೇ ಅಲ್ಲ, ಇನ್ನೂ ಉರುಳುತ್ತಲೇ ಇದೆ. ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಪಂಡಿತರುಗಳು, ಲೋಕಸಭೆ ಆಹಾರ ಭದ್ರತಾ ಮಸೂದೆಯನ್ನು ಪಾಸು ಮಾಡಿರುವುದೇ ರೂಪಾಯಿ ಇಷ್ಟೊಂದು ಉರುಳಲು ತಕ್ಷಣದ ಕಾರಣ ಎಂದು ಬೊಬ್ಬಿಡುತ್ತಿದ್ದಾರೆ. ಭಾರತದ ಕಾರ್ಪೊರೇಟ್ ವಲಯ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅಜೆಂಡಾಕ್ಕಾಗಿ ತಮ್ಮ ಲೇಖಣಿ ಓಡಿಸುವ ಮಂದಿ ಆಹಾರ ಭದ್ರತಾ ಶಾಸನವನ್ನು ಪಾಸು ಮಾಡಿರುವುದು " ಸಾರ್ವಜನಿಕ ಹಣಕಾಸಿಗೆ ಭಾರೀ ಹೊಡೆತ ನೀಡಿದೆ" ಎಂದು ಸಾರುತ್ತಿದ್ದಾರೆ. "ಇಂತಹ ಸಮಯದಲ್ಲಿ ಇಷ್ಟೊಂದು ದೊಡ್ಡ ಮೊತ್ತವನ್ನು ಎತ್ತಿಟ್ಟಿರುವುದು(ಆಹಾರ ಭದ್ರತೆಗೆ) ಖಂಡಿತವಾಗಿ ಹಣಕಾಸು ಕೊರತೆಯ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತದೆ" ಎಂದು ಸಿಐಐ(ಭಾರತೀಯ ಉದ್ದಿಮೆಗಳ ಮಹಾಒಕ್ಕೂಟ) ಅಧ್ಯಕ್ಷರು ತಡೆಬಾವುಟ ಎತ್ತಿದ್ದಾರೆ. ಹಣಕಾಸು ಕೊರತೆ ಹೆಚ್ಚುತ್ತದೆ ಎಂದು ಭಯಭೀತರಾದ ಅಂತರ್ರಾಷ್ಟ್ರೀಯ ಹಣಕಾಸು ಹೂಡಿಕೆದಾರರು (ಎಫ್ಐಐಗಳು) ಭಾರತೀಯ ಮಾರುಕಟ್ಟೆಗಳಿಂದ ಹೊರ ನಡೆಯುತ್ತಿರುವುದರಿಂದಾಗಿ ರೂಪಾಯಿ ಪತನಕ್ಕೆ ಕಾರಣವಾಗಿದೆಯಂತೆ.

ಭಾರತದ ರೂಪಾಯಿಯುಷ್ಟೇ ಅಲ್ಲ, ಇನ್ನೂ ಹಲವು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕರೆನ್ಸಿಗಳು ಅಂತರ್ರಾಷ್ಟ್ರೀಯ ಅನಿಶ್ಚಿತತೆಗಳಿಂದಾಗಿ(ಈ ಬಗ್ಗೆ ಮುಂದೆ ನೋಡೋಣ) ತೀಕ್ಷ್ಣ ಪತನ ಕಂಡಿವೆ ಎಂಬ ಸಂಗತಿಯನ್ನು ಭಾರತೀಯ ನವ-ಉದಾರವಾದಿ ಸುಧಾರಕರುಗಳು ಗಮನಿಸುತ್ತಿಲ್ಲ. ಉದಾಹರಣೆಗೆ, ರೂಪಾಯಿ ಈ ವರ್ಷದ ಆರಂಭದಿಂದ 20 ಶೇ. ಇಳಿಕೆ ಕಂಡಿದ್ದರೆ, ದಕ್ಷಿಣ ಆಫ್ರಿಕಾದ ರಾಂಡ್ 23ಶೇ. ಇಳಿಕೆ ಕಂಡಿದೆ. ಇದು ಭಾರತದ ಆಹಾರ ಭದ್ರತಾ ಮಸೂದೆಯಿಂದಾಗಿಯಂತೂ ಖಂಡಿತಾ ಅಲ್ಲ!

ಅಮಾನವೀಯ ಕೂಗು

"ದೇಶ ತನ್ನ ಹಸಿದವರಿಗೆ ಉಣಿಸುವ ಭಂಡತನ ತೋರುತ್ತಿದೆ!" –ಇದೀಗ, ತಮ್ಮ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳುವ ದಾರಿಗಳನ್ನು ಕಾಯ್ದುಕೊಳ್ಳಲು ಭಾರತದ ಕಾರ್ಪೊರೇಟ್ ವಲಯ ಎಬ್ಬಿಸುತ್ತಿರುವ ಅಮಾನವೀಯ ಕೂಗು. ಈ ಆಹಾರ ಭದ್ರತಾ ಮಸೂದೆ ಒದಗಿಸಿರುವ ಅಲ್ಪ ಮತ್ತು ಅತ್ಯಂತ ಅಸಮರ್ಪಕ ಪ್ರಮಾಣ ಕೂಡ ಇವರ ಲಾಭದ ಸೂರೆಕೋರತೆಗೆ ಒಡ್ಡಿರುವ ಒಂದು ವಿಘ್ನ ಎಂದು ಬಗೆದಿದ್ದಾರೆ. ನಮ್ಮ ಜನತೆಗೆ ಒಂದು ಅರ್ಥಪೂರ್ಣ ಆಹಾರ ಭದ್ರತೆ ಎಂಬುದು ಸಾರ್ವತ್ರಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಪ್ರತಿಯೊಂದು ಕುಟುಂಬಕ್ಕೆ ಕೆ.ಜಿ.ಗೆ 2ರೂ. ಮೀರದ ದರದಲ್ಲಿ 35 ಕೆ.ಜಿ. ಅಕ್ಕಿಯನ್ನು ಕೊಟ್ಟಾಗಲೇ ಆರಂಭವಾಗಲು ಸಾಧ್ಯ. ಈ ಮಸೂದೆ ಆ ಗುರಿಗಿಂತ ಇನ್ನೂ ಎಷ್ಟೋ ದೂರದಲ್ಲಿದೆ.

> **ಇನ್ನಷ್ಟು ಸುಧಾರಣೆಗಳನ್ನು ತರಬೇಕು ಎಂಬ ಕೂಗು ಭಾರತದ ಸಮಸ್ಯೆಗಳಿಗೆ ಉತ್ತರವಾಗಲು ಸಾಧ್ಯವಿಲ್ಲ. ಉತ್ತರವಿರುವುದು ಶ್ರೀಮಂತರಿಗೆ ಕೊಡುವ ಸಬ್ಸಿಡಿಗಳನ್ನು ನಿಲ್ಲಿಸಿ, ಈ ಸಂಪನ್ಮೂಲಗಳನ್ನು ನಮ್ಮ ಬಹು ಆವಶ್ಯಕವಾದ ಮೂಲರಚನೆಗಳನ್ನು ಕಟ್ಟಲು ಬೇಕಾಗುವ ವಿಶಾಲ ಸಾರ್ವಜನಿಕ ಹೂಡಿಕೆಗಳಿಗೆ ಬಳಸುವಲ್ಲಿ.**



ಅಲ್ಲಿ ನೋಡು ನಾವು ಆಹಾರ ಭದ್ರತೆ ಕಾಯ್ದೆ ಜಾರಿಗೆ ತರುತ್ತಿದ್ದೇವೆ.

ಕೃಪೆ : ದಿ ಹಿಂದೂ

ಈ ಮಸೂದೆ ಒದಗಿಸಿರುವ ಅಸಮರ್ಪಕ ಪ್ರಮಾಣದ ಭದ್ರತೆಗೆ ದೇಶದ ಖಜಾನೆಯಿಂದ ಹೆಚ್ಚುವರಿಯಾಗಿ 30,000 ಕೋಟಿ ರೂ. ಬೇಕಾಗುತ್ತದೆ. ಈಗಾಗಲೇ ಬಜೆಟ್ ಎತ್ತಿಟ್ಟಿರುವ ಹಣ ರೂ.10,000 ಕೋಟಿ. ಅಂದರೆ ಇನ್ನೂ ಹೆಚ್ಚುವರಿಯಾಗಿ ಬೇಕಾಗಿರುವುದು ರೂ.20,000 ಕೋಟಿ. ಭಾರತದ ಕಾರ್ಪೊರೇಟ್ ವಲಯದ ಪ್ರಕಾರ ನಮ್ಮ ಆರ್ಥಿಕ ವ್ಯವಸ್ಥೆ ಇಷ್ಟೊಂದು ಹಣ ಒದಗಿಸಲಾರದು! ತನ್ನ ಹಸಿದವರಿಗೆ ತುತ್ತು ಕೊಡಲಾರದ ಒಂದು ದೇಶ, ಹಿಡಿಯಷ್ಟು ಶ್ರೀಮಂತರು ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳಲು ಆಡುವ ಆಟಗಳ ಮೈದಾನವಾಗಲು ಕೂಡ ಖಂಡಿತ ಸಾಧ್ಯವಿಲ್ಲ ತಾನೇ?

ನಿಜ, ಭಾರತದ ಇದೇ ಕಾರ್ಪೊರೇಟ್ ವಲಯಕ್ಕೆ ಬೆಳವಣಿಗೆಯನ್ನು ಪ್ರೋತ್ಸಾಹಿಸಲೆಂದು ಕೊಟ್ಟಿರುವ 'ಪ್ರೋತ್ಸಾಹಕ'ಗಳ ಬಗ್ಗೆಯಾಗಲೀ, ಸಾವಿರಾರು ಕೋಟಿ ರೂ.ಗಳ 'ಉತ್ತೇಜಕ ಪ್ಯಾಕೇಜು'ಗಳ ಬಗ್ಗೆಯಾಗಲೀ ಚಕಾರವಿಲ್ಲ. ಕಳೆದ ಮೂರು ವರ್ಷಗಳಲ್ಲಿ ವಾರ್ಷಿಕ ಬಜೆಟ್ ದಸ್ತಾವೇಜುಗಳಲ್ಲಿ ಕೇಂದ್ರ ಸರಕಾರ ಬಿಟ್ಟುಕೊಟ್ಟ ತೆರಿಗೆಗಳ ಬಗ್ಗೆ ಒಂದು ತಖ್ತೆ ಇದೆ. ಇದರ ವಾರ್ಷಿಕ ಮೊತ್ತ 5ಲಕ್ಷ ಕೋಟಿ ರೂ.ಗಳಷ್ಟು ಅಗಾಧವಾಗಿದೆ. ಈ ಸಂಪೂರ್ಣ ಮೊತ್ತವನ್ನು ಹಿಡಿಯಲು ಸಾಧ್ಯವಿಲ್ಲ, ಏಕೆಂದರೆ ಇದರಲ್ಲಿ ಬಹಳಷ್ಟು ವ್ಯಾಜ್ಯದಲ್ಲಿದೆ ಎಂದು ಹಲವರು ಪ್ರಶ್ನೆಗಳನ್ನು ಎತ್ತಬಹುದು. ಈ ವಾದವನ್ನು ಉದಾರ ಮನಸ್ಸಿನಿಂದ ಒಪ್ಪಿಕೊಂಡರೂ ಕೂಡ, ಶ್ರೀಮಂತರಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಕೊಟ್ಟ ನೇರ ತೆರಿಗೆ ರಿಯಾಯಿತಿಗಳ ಮೊತ್ತವೂ ಇದರ ಸುಮಾರು ಮೂರನೇ ಒಂದರಷ್ಟಾದರೂ ಆಗುತ್ತದೆ.

ಕಾರ್ಪೊರೇಟ್‌ಗಳಿಗೆ ಉತ್ತೇಜನೆ ಆರ್ಥಿಕಕ್ಕೆ ಕೊಟ್ಟದ್ದೇನು?

ಕಾರ್ಪೊರೇಟ್‌ಗಳಿಗೆ ಬೆಳವಣಿಗೆಗೆ ಪ್ರೋತ್ಸಾಹ ನೀಡಲೆಂದು ಕೊಡುವ 'ಪ್ರೋತ್ಸಾಹಕ'ಗಳು ಅವರಿಗೆ ಕೊಡುವ ಸಬ್ಸಿಡಿಗಳಲ್ಲದೆ ಮತ್ತಿನ್ನೇನು? ಈ ಎಲ್ಲ ರಿಯಾಯಿತಿಗಳನ್ನು ಪಡೆದ ಮೇಲೂ, ಕೈಗಾರಿಕಾ ಉತ್ಪಾದನೆಯಲ್ಲಿ ಬೆಳವಣಿಗೆಯ ಸೂಚ್ಯಂಕ ಈ ವರ್ಷದ ಮೇ ತಿಂಗಳಲ್ಲಿ ಋಣಾತ್ಮಕವಾಗಿದೆ, ಅಂದರೆ (–)1.6. ನಂತರ ಅದು ಇನ್ನಷ್ಟು ಕೆಳಗೆ ಬಿದ್ದಿದೆ. ಇಂತಹ ಅತ್ಯಂತ ನಕಾರಾತ್ಮಕ ಫಲಿತಾಂಶಗಳ ನಂತರವೂ, ಇಂತಹ ಶ್ರೀಮಂತರಿಗೆ ನೀಡುವ ಸಬ್ಸಿಡಿಗಳನ್ನು ನಿಲ್ಲಿಸುವುದಿರಲಿ, ಕಡಿತ ಮಾಡುವ ಪ್ರಶ್ನೆಯ ಬಗ್ಗೆಯೂ ಸಂಪೂರ್ಣ ಮೌನಕ್ಕೇ ಶರಣು!

ಆದರೆ ಅದಕ್ಕೆ ಹೋಲಿಸಿದರೆ ಸಣ್ಣ ಮೊತ್ತವಾದ ಬಡವರಿಗೆ ಒದಗಿಸುವ ಸಬ್ಸಿಡಿಗಳ ಬಗ್ಗೆ ಬಹಳಷ್ಟು ಬೊಬ್ಬೆ ಎಬ್ಬಿಸಲಾಗುತ್ತಿದೆ. ಈಗಾಗಲೇ ಏರುತ್ತಿರುವ ಸಬ್ಸಿಡಿ ಮೊತ್ತಕ್ಕೆ ಕಡಿತ ಹಾಕುವ, ಆಮೂಲಕ ಹಣಕಾಸು ಕೊರತೆ ಮತ್ತಷ್ಟು ಹೆಚ್ಚುವುದನ್ನು ತಡೆಯುವ ಹೆಸರಿನಲ್ಲಿ ಮತ್ತೊಮ್ಮೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುವ ಬಗ್ಗೆ ಸರಕಾರ ಯೋಚಿಸುತ್ತಿದೆಯಂತೆ. ಇಂತಹ ಕ್ರಮಗಳು ಆಹಾರ ಭದ್ರತಾ ಮಸೂದೆ ಒದಗಿಸಿರುವ ಅಲ್ಪ-ಸ್ವಲ್ಪ ಪ್ರಯೋಜನಗಳನ್ನು ಕೂಡ ಸಂಪೂರ್ಣವಾಗಿ ಇಲ್ಲವಾಗಿಸುತ್ತವೆ.

ಇಷ್ಟೇ ಅಲ್ಲ, ಇದು ಬೆಳವಣಿಗೆಯ ಮೇಲೆ ತದ್ವಿರುದ್ಧ ಪರಿಣಾಮ ಬೀರುವಂತದ್ದು. ಈಗಾಗಲೇ ವಿಪರೀತ ಮಟ್ಟದಲ್ಲಿರುವ ಹಣದುಬ್ಬರ ಮತ್ತು ಎಲ್ಲ ಸರಕುಗಳ ಬೆಲೆಗಳು ಆಕಾಶಕ್ಕೇರುತ್ತಿರುವ ಹಿನ್ನೆಲೆಯಲ್ಲಿ ಇಂತಹ ಏರಿಕೆಗಳು ಜನಗಳ ಖರೀದಿ ಸಾಮರ್ಥ್ಯವನ್ನು ಇನ್ನಷ್ಟು ಇಳಿಸುತ್ತವೆ, ನಮ್ಮ ಆರ್ಥಿಕದಲ್ಲಿನ ಒಟ್ಟು ಬೇಡಿಕೆಯನ್ನು ಮತ್ತಷ್ಟು ಕುಗ್ಗಿಸುತ್ತವೆ ಮತ್ತು ಆಮೂಲಕ ನಮ್ಮ ಒಟ್ಟಾರೆ ಜಿಡಿಪಿ ಬೆಳವಣಿಗೆಯ ದರವನ್ನೂ ಕೆಳಗಿಳಿಸುತ್ತವೆ. ಈಗಾಗಲೇ ಹಿಂದಿನ ಕೆಲವು ವರ್ಷಗಳಲ್ಲಿ ಬಳಕೆ ಖರ್ಚುಗಳ ಪ್ರಮಾಣ ಒಂದು ಆರೋಗ್ಯಕರ 8 ಶೇ.ದರದಲ್ಲಿ ಏರಿತ್ತಿದ್ದುದು, ಈಗ 4.4ಶೇ.ಕ್ಕೆ ಕುಸಿದಿದೆಯೆಂದು ವರದಿಯಾಗಿದೆ.

2012ರ ಆರಂಭದಿಂದ 2013 ರ ನಡುವೆ ಬಹುಬಾಳಿಕೆಯ ಬಳಕೆ ವಸ್ತುಗಳ ಮಾರಾಟ ಗಮನಾರ್ಹವಾಗಿ ನಿಧಾನಗೊಂಡಿದೆ ಎಂದು ಕಾರ್ಪೊರೇಟ್ ವರದಿಗಳು ಹೇಳುತ್ತಿವೆ. ಶೇರುಮಾರುಕಟ್ಟೆಯ ವ್ಯವಹಾರಗಳ ಪಟ್ಟಿಯಲ್ಲಿರುವ 12 ಬಳಕೆ ವಸ್ತುಗಳ ಕಂಪನಿಗಳ ಒಟ್ಟು ಲಾಭ ಈ ಜೂನ್ ತಿಂಗಳಲ್ಲಿ 5ಶೇ. ಹೆಚ್ಚಳವನ್ನು ತೋರಿಸುತ್ತಿದೆ. ಕಳೆದ ಜೂನ್‌ನಲ್ಲಿ ಇದು 29.3 ಶೇ. ಬೆಳವಣಿಗೆ ತೋರಿಸಿತ್ತು. ಶೇರು ಮಾರುಕಟ್ಟೆಯ ಪಟ್ಟಿಯಲ್ಲಿರುವ ಅತ್ಯಂತ ದೊಡ್ಡ ಬಳಕೆ ಪ್ಯಾಕೇಜ್ ಸರಕುಗಳ ಕಂಪನಿಯಾದ ಹಿಂದುಸ್ತಾನ್ ಯುನಿಲಿವರ್ "ಜನ ಖರ್ಚುಗಳಲ್ಲಿ ಕಡಿತ ಮಾಡುತ್ತಿದ್ದಾರೆ" ಎಂದು ವರದಿ ಮಾಡಿದೆ. ಕಳೆದ ಹಣಕಾಸು ವರ್ಷದಲ್ಲಿ ಕಾರುಗಳ ಮಾರಾಟ 6.7ಶೇ.ದಷ್ಟು ಇಳಿಯಿತು, ಇದು ಕಳೆದ ದಶಕದಲ್ಲೇ ಮೊದಲ ಇಳಿಕೆ. ಭಾರತದ ಆಟೊಮೊಬೈಲ್ ತಯಾರಕರ ಸೊಸೈಟಿಯ ಪ್ರಕಾರ ಈ ಎಪ್ರಿಲ್-ಜೂನ್ ಅವಧಿಯಲ್ಲಿಯೂ ಅದು ಮತ್ತೆ 10ಶೇ.ದಷ್ಟು ಇಳಿದಿದೆ. ಈ ಹಣಕಾಸು ವರ್ಷದಲ್ಲಿಯೂ ದುರ್ಬಲ ಬೇಡಿಕೆಯಿಂದಾಗಿ ಅದು 5ರಿಂದ 12 ಶೇ.ದಷ್ಟು ಇಳಿಯುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ಇದೇ ರೀತಿಯಲ್ಲಿ ವಾಶಿಂಗ್ ಮೆಶೀನ್, ಟಿವಿ, ಮೈಕ್ರೋವೇವ್‌ಗಳು ಮುಂತಾದ ಬಳಕೆ ವಸ್ತುಗಳ ಮಾರಾಟಗಳೂ ಗಮನಾರ್ಹವಾಗಿ ಬಿದ್ದು ಹೋಗಿವೆ.

ಶ್ರೀಮಂತರ ಗರಿಷ್ಟ ಲಾಭದಾಸೆ

ಇದಕ್ಕೆ ಪ್ರಮುಖ ಕಾರಣವೆಂದರೆ

ಮುಟ 10 ಕ್ಕೆ

ಬಿಜೆಪಿ ಸೇಡಿಗೆ ಬಲಿಯಾದ ಜೆಡಿಎಸ್

ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ನೆಲೆ ಇಲ್ಲದ ಬಿಜೆಪಿಯು ಜೆಡಿಎಸ್ ಜೊತೆ ಕೈ ಜೋಡಿಸಿ ತನ್ನ ಪ್ರಬಲ ಪ್ರತಿಸ್ಪರ್ಧಿ ವಿರುದ್ಧ ಹಳೆಯ ಸೇಡನ್ನು ತೀರಿಸಿಕೊಂಡಿದೆ. ವಿವರಗಳಿಗಾಗಿ ಮುಂದೆ ಓದಿ

ನಿತ್ಯಾನಂದ ಸ್ವಾಮಿ

ಒಂದು ಉಪ ಚುನಾವಣೆಯಲ್ಲಿ ಗೆಲ್ಲುವುದು ಬೇರೆ ಪಕ್ಷಗಳಿಗಿಂತ ಆಡಳಿತಾರೂಢ ಪಕ್ಷಕ್ಕೆ ಹೆಚ್ಚು ಸುಲಭ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜೆಡಿಎಸ್‌ನ ಈ ಸೋಲು ಸಾಮಾನ್ಯ ಸೋಲಲ್ಲ. ಈ ಸೋಲು ಆ ಪಕ್ಷದ ಮೇಲೆ, ಅದರ ತಕ್ಷಣದ ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಮಾನ್ಯ ಎಚ್.ಡಿ. ದೇವೇಗೌಡರು ಸಾಕಷ್ಟು ಕಷ್ಟ ಪಟ್ಟು ಬೆಳೆಸಿದ ಆ ಪಕ್ಷ ಈಗ ಛಿದ್ರ ಛಿದ್ರವಾಗುವ ಅಪಾಯವನ್ನು ಎದುರಿಸುತ್ತಿದೆ. ಯಾವುದೇ ಸಿದ್ಧಾಂತದ ಗಂಧಗಾಳಿ ಇಲ್ಲದ ಅದರ ಶಾಸಕರು ಯಾವ ಮಟ್ಟದ ರಾಜಿಗೂ ಸಿದ್ಧರಾಗಿ ಜೆಡಿಎಸ್ ಅನ್ನು ತೊರೆದರೆ ಆಶ್ಚರ್ಯವೇನಿಲ್ಲ.


ಜನತಾ ಪಕ್ಷ ನಂತರ ಜನತಾ ದಳ ಎನಿಸಿಕೊಂಡ ಆ ಪಕ್ಷ ರಾಜ್ಯದಲ್ಲಿ ಬಲಿಷ್ಠವಾದ ಕಾಂಗ್ರೆಸ್ ವಿರೋಧಿ ಅಲೆಯ ಪ್ರತಿನಿಧಿಯಾಗಿ ಬೆಳೆದು ಬಂದ ಪಕ್ಷವಾಗಿತ್ತು. ಆಗ ಬಿಜೆಪಿ ಎಂಬ ವಿಷ ಸರ್ಪ ಇನ್ನೂ ಚಿಕ್ಕ ಮರಿಯಾಗಿತ್ತು. ಆ ವಿಷ ಸರ್ಪದ ಮರಿಯನ್ನು ಹಾಲೆರೆದು ಘಟಸರ್ಪವಾಗಿ ಬೆಳೆಸಿದ ಕೀರ್ತಿ ಇದೆ ಜಾತ್ಯಾತೀತ ಜನತಾದಳಕ್ಕೆ ಸಲ್ಲುತ್ತದೆ. ಅದರ ಪರಿಣಾಮವಾಗಿ ಬಿಜೆಪಿ ರಾಜ್ಯ ರಾಜಕೀಯದಲ್ಲಿ ಜೆಡಿಎಸ್‌ನ ಸ್ಥಾನವನ್ನೇ ಆಕ್ರಮಿಸಿಕೊಂಡಿತು. ಜೆಡಿಎಸ್ ಕುಬ್ಜವಾಯಿತು.

ಕಾಂಗ್ರೆಸಿಗೆ ಮತ್ತೊಂದು ಅನಾಯಾಸ ಗೆಲವು

ಬಿಜೆಪಿಯ 5 ವರ್ಷಗಳ ಬ್ರಹ್ಮಾಂಡ ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅನಾಯಾಸವಾಗಿ ಲಾಭವಾಯಿತು. ಆದ-ರೆ ಈ ಉಪ ಚುನಾವಣೆ ಪಕ್ಷದ ಪಾಲಿಗೆ ಇಷ್ಟೊಂದು ಸುಲಭವಾಗುತ್ತದೆ ಎಂದು ಸ್ವತಃ ಕಾಂಗ್ರೆಸಿಗರೇ ನಿರೀಕ್ಷಿಸಿರಲಿಲ್ಲ. ಕಾಂಗ್ರೆಸಿನ ಇಬ್ಬರೂ ಅಭ್ಯರ್ಥಿಗಳು ರಾಜಕೀಯಕ್ಕೆ ಹೊಸಬರು ಮತ್ತು ಹೆಸರು ಮಾಡಿದವರಲ್ಲ. ಇದು ಅಭ್ಯರ್ಥಿಗಳು ಪಕ್ಷಕ್ಕೆ ತಂದುಕೊಟ್ಟ ಜಯವಂತೂ ಅಲ್ಲವೇಅಲ್ಲ. ಕಾಂಗ್ರೆಸ್ ಪಕ್ಷ ಈ ಚುನಾವಣೆಯನ್ನು ಗೆಲ್ಲಲು ಅಧಿಕಾರಬಲ, ಹಣಬಲ, ತೋಳ್ಬಲವನ್ನು ಅತ್ಯಧಿಕ ಪ್ರಮಾಣದಲ್ಲಿ ಬಳಸಿದೆ. ಕಾಂಗ್ರೆಸ್ ಪಕ್ಷಕ್ಕೆ ಇದೇನೂ ಹೊಸದಲ್ಲ. ಆದರೆ, ಈ ಚುನಾವಣೆಯಲ್ಲಿ ಜೆಡಿಎಸ್ ಇಟ್ಟಂತಹ ತಪ್ಪು ಹೆಜ್ಜೆಗಳೂ ಕಾಂಗ್ರೆಸ್ ಗೆಲುವಿಗೆ ಕಾರಣವಾಗಿವೆ.

ಜೆಡಿಎಸ್ ತಪ್ಪು ಹೆಜ್ಜೆ :


ಹಿಂದೆ ಈ ಅಂಕಣದಲ್ಲಿ ಬರೆದಂತೆ, ಜೆಡಿಎಸ್ ಈ ಸಲ ಬಿಜೆಪಿ ಜತೆಯಲ್ಲಿ ಒಳ ಒಪ್ಪಂದ ಮಾಡಿಕೊಂಡದ್ದು ಅದರ ಇತ್ತೀಚಿನ ಅತಿ ದೊಡ್ಡ ರಾಜಕೀಯ ಪ್ರಮಾದವಾಗಿದೆ. ಕಾಂಗ್ರೆಸ್ ವಿರುದ್ಧ



ವಿರೋಧ ಪಕ್ಷಗಳನ್ನು ಒಂದುಗೂಡಿಸಿ ಕಾಂಗ್ರೆಸ್ ವಿರೋಧಿ ಮತಗಳು ಛಿದ್ರವಾಗದಂತೆ ತಡೆಯುವ ಉದ್ದೇಶ ತಾರ್ಕಿಕವಾಗಿ ಸರಿಯಾಗಿದ್ದರೂ ಹೋಗಿ ಹೋಗಿ ಕೈ ಜೋಡಿಸಿದ್ದು ಬಿಜೆಪಿ ಜತೆ ಮಾತ್ರ. ಅಲ್ಲಿ ಬೇರೆ ಯಾವ ವಿರೋಧ ಪಕ್ಷವೂ ಇರಲಿಲ್ಲ. ಬಿಜೆಪಿ ಜತೆಯಲ್ಲಿ ಮಾಡಿಕೊಂಡ ಹೊಂದಾಣಿಕೆಯಿಂದ ಜೆಡಿಎಸ್‌ಗೆ ಲಾಭಕ್ಕಿಂತ ನಷ್ಟವೇ ಹೆಚ್ಚಾಯಿತು. ಬಿಜೆಪಿಯನ್ನು ಅಪ್ಪಿಕೊಂಡದ್ದು ಭಸ್ಮಾಸುರನನ್ನು ಅಪ್ಪಿಕೊಂಡಂತಾಯಿತು. ಜೆಡಿಎಸ್‌ನ ಸ್ವಂತ ಮತಗಳೇ ಕುಸಿಯುವಂತಾಯಿತು. ಬಿಜೆಪಿ ಅಪ್ಪುಗೆಯಲ್ಲಿ ಜೆಡಿಎಸ್ ಅನ್ನು ಕಂಡ ಜೆಡಿಎಸ್ ನ ಅಲ್ಪಸಂಖ್ಯಾತ ಬೆಂಬಲಿಗರು ಜೆಡಿಎಸ್ ನಿಂದ ದೂರ ಸರಿದರು. ಕುಮಾರ ಸ್ವಾಮಿಯವರ ಬಲಗೈಯಂತಿದ್ದ ಜಮೀರ್ ಅಹಮ್ಮದ್ ಈ ಜಿದ್ದಾ ಜಿದ್ದಿನ ಚುನಾವಣಾ ಸಮರದಲ್ಲಿ ಕಾಣಿಸಿಕೊಳ್ಳಲೇ ಇಲ್ಲ. ಮಾಜಿ ಸಂಸದ, ಜೆಡಿಎಸ್ ನ ಹಿರಿಯ ಮುಂಖಂಡ ಸಿ. ನಾರಾಯಣಸ್ವಾಮಿ ಅಂತಹವರಿಗೆ ಬಿಜೆಪಿಯನ್ನು ಕೈಹಿಡಿದ ಜೆಡಿಎಸ್‌ಗಿಂತ ಕಾಂಗ್ರೆಸ್ ಹೆಚ್ಚು ಜಾತ್ಯಾತೀತವಾಗಿ ಕಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಇದೇ ರೀತಿ ಜೆಡಿಎಸ್‌ನ ಅನೇಕ ನಾಯಕರು ಜೆಡಿಎಸ್‌ನಿಂದ ದೂರವಾದದ್ದು ಮತದಾರರ ಮೇಲೆ ಪರಿಣಾಮ ಬೀರದೆ ಇರಲಿಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸಿಗೆ ಮತ್ತು ಬಿಜೆಪಿಗೆ ಪರ್ಯಾಯವಾಗಿ ಬೆಳೆಯುವ ಸಾಮರ್ಥ್ಯ ಇರುವ ಏಕೈಕ ಪಕ್ಷ ಜೆಡಿಎಸ್ ಎಂದು ಅದನ್ನು ಬೆಂಬಲಿಸುತ್ತಾ ಬಂದಿರುವ ಮತದಾರರು ಗಣನೀಯ ಸಂಖ್ಯೆಯಲ್ಲಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅವರ ಸಂಖ್ಯೆ ಬೆಳೆಯುತ್ತಾ ಇತ್ತು. ಅವರು ಎಂದೂ ಕಾಂಗ್ರೆಸಿಗಾಗಲಿ, ಬಿಜೆಪಿಗಾಗಲಿ ಮತ ಹಾಕುವವರಲ್ಲ. ಜೆಡಿಎಸ್ ಅವರ ಸಹಜ ಆಯ್ಕೆ. ಆದರೆ ಈ ಉಪ ಚುನಾವಣೆಯಲ್ಲಿ ಅಂತಹ ಪ್ರಗತಿಪರರು, ಜಾತ್ಯಾತೀತ ಮನೋಭಾವದ ಮತದಾರರು ಅನಿವಾರ್ಯವಾಗಿ ಕಾಂಗ್ರೆಸಿಗೆ ಮತ ನೀಡಿದರು.

ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಿಪಿಐ(ಎಂ) ತನ್ನ ಪ್ರಭಾವವನ್ನು ಬೆಳೆಸಿಕೊಂಡಿದೆ. ಕೃಷಿ ಕೂಲಿಕಾರರ ನಡುವೆ ಹಾಗೂ ಬಡ ರೈತರ ನಡುವೆ ಸಂಘಟನೆಯನ್ನು ಕಟ್ಟಿ ಅನೇಕ ಗಮನಸೆಳದ ಹೋರಾಟಗಳನ್ನು ನಡೆಸಲಾಗಿದೆ. ಕಾಂಗ್ರೆಸ್ ಹಾಗೂ ಬಿಜೆಪಿಗಳನ್ನು ಸೋಲಿಸಲು ಶ್ರಮಿಸಬೇಕೆಂದು ಎಡ ಪಕ್ಷಗಳು ತೀರ್ಮಾನಿಸಿದ ಅಂಗವಾಗಿ ಈ ಉಪಚುನಾವಣೆಯಲ್ಲಿ ಸಿಪಿಐ(ಎಂ) ಜೆಡಿಎಸ್ ಗೆ ಬೆಂಬಲ ನೀಡುವ ಬಗ್ಗೆ ಯೋಚಿಸುತಿತ್ತು, ಬೆಂಬಲ ಕೋರಿ ಮಾನ್ಯ



ಎಚ್.ಡಿ. ದೇವೇಗೌಡರಿಂದ ಸಿಪಿಐ(ಎಂ) ರಾಜ್ಯ ಸಮಿತಿಗೆ ಪತ್ರವೂ ಬಂದಿತ್ತು. ಆದರೆ ಜೆಡಿಎಸ್ ಬಿಜೆಪಿ ಜತೆಯಲ್ಲಿ ಹೊಂದಾಣಿಕೆ ಮಾಡಿಕೊಂಡದ್ದು ನಿಜವೆಂದು ಸ್ಪಷ್ಟವಾದಗ ಸಿಪಿಐ(ಎಂ) ಈ ಉಪ ಚುನಾವಣೆಯಲ್ಲಿ ತಟಸ್ಥ ದೋರಣೆಯನ್ನು ಅನುಸರಿಸಲು ನಿರ್ಧರಿಸಿತು. ಈ ಬೆಳವಣಿಗೆಯೂ ಸಹ ಜೆಡಿಎಸ್‌ನ ತಪ್ಪು ನಿರ್ಧಾರದ ಪರಿಣಾಮವಾಗಿದೆ. ಹೀಗಾಗಿ ಜೆಡಿಎಸ್‌ನ ಈ ಚುನಾವಣಾ ಸೋಲಿಗೆ ಜೆಡಿಎಸ್ ಪಕ್ಷವೇ ಕಾರಣವಾಗಿದೆ.

ಬಿಜೆಪಿಗೆ ಕಳೆದುಕೊಳ್ಳಲು ಏನೂ ಉಳಿದಿರಲಿಲ್ಲ :

ಕಾಂಗ್ರೆಸಿಗೆ ತಾನೇ ಪರ್ಯಾಯವೆಂದು ಬಿಂಬಿಸಿಕೊಳ್ಳಲು ಹೆಣಗಾಡುತ್ತಿರುವ ಬಿಜೆಪಿ ಕರ್ನಾಟಕದಲ್ಲಿ ಒಡೆದು ಚೂರು ಚೂರಾಗಿತ್ತು. ವಿಧಾನ ಸಭಾ ಚುನಾವಣೆಯಲ್ಲಿ ಸೋತು ಸುಣ್ಣವಾಗಿತ್ತು. ಅಂತಹ ಒಂದು ಪಕ್ಷದ ಸಹಾಯ ಕೋರಿ ಜೆಡಿಎಸ್ ಮೊರೆಹೋಗಿರುವುದು ಅದರ ಮೂರ್ಖತನ. ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಲೋಕ ಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಏನಾದರೂ ನೆಲೆ ಇತ್ತಾ? ಗೆಲ್ಲುವ ಪ್ರಶ್ನೆ ಬಿಡಿ. ಯಾವುದಾದರೂ ಪಕ್ಷವನ್ನು ಸೋಲಿಸುವ ಸಾಮರ್ಥ್ಯವಾದರೂ ಬಿಜೆಪಿಗೆ ಈ ಕ್ಷೇತ್ರಗಳಲ್ಲಿ ಇತ್ತಾ ? ಅದು ಸ್ವತಂತ್ರವಾಗಿ ಸ್ಪರ್ಧಿಸಿದರೂ ಏನನ್ನೂ ಸಾಧಿಸುತ್ತಿರಲಿಲ್ಲ. ಬಿಜೆಪಿಗೆ ಕಳೆದುಕೊಳ್ಳಲು ಏನೂ ಇರಲಿಲ್ಲ. ಚುನಾವಣೆಯಲ್ಲಿ ತನ್ನ ಅಭ್ಯರ್ಥಿಯನ್ನೇ ಕಣಕ್ಕೆ ಇಳಿಸಲು ಸಾಮರ್ಥ್ಯ ಇಲ್ಲದ ಗಣನೀಯ ಪ್ರಮಾಣದ ಮತಗಳೇ ಇಲ್ಲದ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡರೆ ಏನು ಪ್ರಯೋಜನ?

ಬಿಜೆಪಿ ಜೆಡಿಎಸ್ ಜತೆ ಗುಟ್ಟಾಗಿ ಲಗ್ನ ಮಾಡಿಕೊಂಡು ಜೆಡಿಎಸ್ ಮೇಲಿನ ಸಿಟ್ಟು ಸೇಡನ್ನು ತೀರಿಸಿಕೊಂಡಂತೆ ಕಾಣುತ್ತದೆ. ಬಿಜೆಪಿ ನಾಯಕರು ಜೆಡಿಎಸ್ ಪರವಾಗಿ ವ್ಯವಸ್ಥಿತ ಪ್ರಚಾರಕ್ಕೆ ಇಳಿಯಲೇ ಇಲ್ಲ. ಮಾಜಿ ಉಪ ಮುಖ್ಯಮಂತ್ರಿ ಆರ್. ಅಶೋಕ್ ಹಾಗೂ ಶಾಸಕ ಎಂ. ಕೃಷ್ಣಪ್ಪ ಅವರು ಅನಿತಾ ಕುಮಾರಸ್ವಾಮಿ ಜತೆ-ಗೂಡಿ ಒಂದು ದಿನ ಪ್ರಚಾರ ಮಾಡಿದ್ದನ್ನು ಹೊರತುಪಡಿಸಿದರೆ, ಇತರ ಯಾವನೊಬ್ಬ ಬಿಜೆಪಿ ನಾಯಕರು ಜೆಡಿಎಸ್ ಪರ ನೇರವಾಗಿ ಪ್ರಚಾರ ಮಾಡಲಿಲ್ಲ. ಜೆಡಿಎಸ್ ಗೆ ಮತ ಕೇಳುವುದು ತಮಗೆ ಮುಜುಗರದ ವಿಷಯ ಅಂಥ ಬಿಜೆಪಿ ಮುಖಂಡರು ಮಾತನಾಡಿಕೊಂಡದ್ದನ್ನು ಕೇಳಿಸಿಕೊಂಡು ಬಿಜೆಪಿ ಕಾರ್ಯಕರ್ತರು ತಟಸ್ಥವಾಗಿ ಉಳಿದರು. ಹೀಗೆ ಬಿಜೆಪಿ ತನ್ನ ಇದ್ದಷ್ಟು ಮತಗಳನ್ನೂ ಸಹ ಜೆಡಿಎಸ್ ಗೆ ವರ್ಗಾವಣೆ ಮಾಡಲಿಲ್ಲ.

ಆರೆಸ್ಸೆಸ್ ಕರಾಳ ಕೈವಾಡ :

ಉಪ ಚುನಾವಣೆಯಲ್ಲಿ ಜೆಡಿಎಸ್‌ಗೆ ಬಿಜೆಪಿ ತನ್ನ ಮತಗಳನ್ನು ವರ್ಗಾವಣೆ ಮಾಡದಿರುವ ಮೂಲಕ ಬಿಜೆಪಿ ಆರೆಸ್ಸೆಸ್ಸಿನ ರಹಸ್ಯ ಆದೇಶವನ್ನು ಪಾಲಿಸಿದೆ. ಆರೆಸ್ಸೆಸ್‌ಗೆ ಸೆಕ್ಯುಲರ್, ಸೆಕ್ಯುಲಾರಿಸಂ ಎಂಬುದು ಪ್ರಥಮ ಶತ್ರು. ಅಂತಹ ನಾಮಾಂಕಿತವನ್ನು

ಪುಟ 15 ಕ್ಕೆ

'ಪರ್ಯಾಯ ಧೋರಣೆಗಳಿಗಾಗಿ ಹೋರಾಡೋಣ' ಎಡಪಕ್ಷಗಳ ರಾಜ್ಯ ಮಟ್ಟದ ಯಶಸ್ವಿ ಸಮಾವೇಶದ ಕರೆ

ಜನಪರ ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಸಿಪಿಐ(ಎಂ), ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್ ಪಕ್ಷಗಳ ರಾಜ್ಯ ಮಟ್ಟದ ಸಮಾವೇಶ ಆಗಸ್ಟ್ 24, 2013 ರಂದು ಬೆಂಗಳೂರಿನ ಎನ್.ಜಿ.ಓ. ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. ಜುಲೈ 1 ರಂದು ದೆಹಲಿಯಲ್ಲಿ ನಡೆದ ಎಡಪಕ್ಷಗಳ ಸಮಾವೇಶದ ಘೋಷಣೆಯನ್ನು ಇಲ್ಲಿ ಅನುಮೋದಿಸಲಾಯಿತು.

ವರದಿ: ಜಗದೀಶ್ ಸೂರ್ಯ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ: ಜಿ.ವಿ. ಶ್ರೀರಾಮರೆಡ್ಡಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಇಂದು ನೀತಿಗಳ ಪರ್ಯಾಯದ ಬಗ್ಗೆ ಎಡಪಕ್ಷಗಳನ್ನು ಹೊರತು ಪಡಿಸಿ ಯಾರೂ ಮಾತನಾಡುತ್ತಿಲ್ಲ. ಬದಲಾಗಿ ಇಬ್ಬರು ಪರ್ಯಾಯ ನಾಯಕರುಗಳ ಬಗ್ಗೆ ಮಾತನಾಡುತ್ತಿದ್ದಾರೆ. ಒಂದು ಕಡೆ 120 ವರ್ಷಗಳ ಇತಿಹಾಸವಿರುವ ಕಾಂಗ್ರೆಸ್. ಮತ್ತೊಂದೆಡೆ ಧರ್ಮಾಧಾರಿತ ರಾಜಕಾರಣ ಮಾಡುವ ಕೋಮುವಾದಿ ಬಿಜೆಪಿ. ಇವು ಪರ್ಯಾಯ ನೀತಿಗಳನ್ನು ಹೇಳುತ್ತಿಲ್ಲ. ಇದು ಆ ಪಕ್ಷಗಳ ದಿವಾಳಿಕೋರತನವನ್ನು ತೋರಿಸುತ್ತಿದೆ. ಇಂದು ಮಾಧ್ಯಮಗಳು ಸಹ ಅವರೇ ಅನಿವಾರ್ಯ ಎಂಬಂತೆ ಬಿಂಬಿಸುತ್ತಿವೆ.

ಬೆಲೆ ಏರಿಕೆ–ನಿರುದ್ಯೋಗ ಹೊಸ ಆರ್ಥಿಕ ನೀತಿಗಳ ಕೊಡುಗೆ

1991 ರಲ್ಲಿ ನವ ವಸಾಹತುಶಾಹಿ ಆರ್ಥಿಕ ನೀತಿ ಜಾರಿಯಾಗಿದ್ದರಿಂದ ಬೆಲೆ ಏರಿಕೆ, ನಿರುದ್ಯೋಗ, ಕೈಗಾರಿಕಾ ರಂಗದ ಸ್ಥಗಿತತೆ ಆಗಿದೆ. ಅದರೆ ಯುಪಿಎ ಸರ್ಕಾರ ಇದನ್ನು ಒಪ್ಪಲು ತಯಾರಿಲ್ಲ. ಒಂದೆಡೆ ಬಹುರಾಷ್ಟ್ರೀಯ ಕಂಪೆನಿಗಳ ಆದಾಯ ಹೆಚ್ಚುತ್ತಿದೆ. ಮತ್ತೊಂದೆಡೆ ಬಡವರ ಆದಾಯ ಕುಸಿಯುತ್ತಿದೆ. ಹಾಗೆಯೇ ಯೋಜನಾ ಆಯೋಗ ನೀಡುತ್ತಿರುವ ವರದಿಗಳು ಸಹ ಬಡವರವನ್ನು ಅವಹೇಳನ ಮಾಡುತ್ತಿವೆ. ಮತ್ತೊಂದೆಡೆ ರೂಪಾಯಿ ಮೌಲ್ಯ ಕಡಿಮೆ ಆಗುತ್ತ ಬೆಲೆ ಏರಿಕೆ ಹೆಚ್ಚಿ ಜನರ ಕೊಂಡುಕೊಳ್ಳುವ ಶಕ್ತಿ ಕಡಿಮೆ ಆಗಿದೆ. ದೇಶ ಸಾಲದ ಸುಳಿಗೆ ಸಿಕ್ಕಿದ್ದು, 20 ಲಕ್ಷ ಕೋಟಿಗೆ ಹೆಚ್ಚಿದೆ. ದೇಶದ ಪ್ರತಿ ಪ್ರಜೆಯ ಮೇಲೆ ತಲಾ 33 ಸಾವಿರ ಸಾಲ ಇದೆ. ಇದಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ಯಲ್ಲಿ 23% ರಷ್ಟನ್ನು ಬಡ್ಡಿಗೆ ಕಟ್ಟಬೇಕಾಗಿದೆ. ಇವು 1991 ರಲ್ಲಿ ತಂದ ಆರ್ಥಿಕ ನೀತಿಯ ಪರಿಣಾಮ. ಆದರೂ ದೇಶ ಅಭಿವೃದ್ಧಿಯತ್ತ ಸಾಗುತ್ತಿದೆ ಎಂಬ ಸುಳ್ಳನ್ನು ಹೇಳುತ್ತ ಬರುತ್ತಿದ್ದಾರೆ ಎಂದು ಜಿ.ವಿ.ಶ್ರೀರಾಮರೆಡ್ಡಿಯವರು ಹೇಳಿದರು.

ಅವರು ಮುಂದುವರೆದು ಮಾತನಾಡಿ ಬಿಜೆಪಿ ಕಳೆದ 9 ವರ್ಷಗಳಲ್ಲಿ ಯಾವತ್ತೂ ಈ ನೀತಿಗಳನ್ನು ಅಧಿಕೃತ ವಿರೋಧಪಕ್ಷವಾಗಿ ವಿರೋಧಿಸಿಲ್ಲ. ಬದಲಾಗಿ ಈ ಆರ್ಥಿಕ ನೀತಿಯನ್ನೇ ಬೆಂಬಲಿಸುತ್ತಿದೆ. ವಿದೇಶಿ ಬಂಡವಾಳದ ಬಿಗಿಹಿಡಿತ ನಮ್ಮ ದೇಶ ಆರ್ಥಿಕ ನೀತಿಯನ್ನು ತಿರುಚುತ್ತಿದೆ. ಈ ನೀತಿಯನ್ನು ಜಾರಿಗೆ ತರಲು ನರೇಂದ್ರಮೋದಿ ಮತ್ತು ರಾಹುಲ್‌ಗಾಂಧಿ ಅವರನ್ನು ಪರ್ಯಾಯವೆಂದು ಬಿಂಬಿಸಲಾಗುತ್ತಿದೆ.

ಗುಜರಾತ್‌ನಲ್ಲಿ ನರಮೇಧ ನಡೆಸಿ ಸಾವಿರಾರು ಅಲ್ಪಸಂಖ್ಯಾತರನ್ನು ಕೊಲ್ಲುವಾಗ ಗುಜರಾತ್‌ನಲ್ಲಿ ವಿರೋಧಪಕ್ಷವಾಗಿದ್ದ ಕಾಂಗ್ರೆಸ್ ಮೌನವಾಗಿ ಸಮ್ಮತಿಸಿತ್ತು. ಬಾಬರಿ ಮಸೀದಿಯನ್ನು



ಕೆಡವುವಾಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಮೌನ ವಹಿಸಿ ಸಹಕರಿಸಿತ್ತು. ಮತ್ತೊಂದೆಡೆ ಎರಡೂ ಪಕ್ಷಗಳು ಭ್ರಷ್ಟಾಚಾರ ನಡೆಸಲು ಪೈಪೋಟಿ ನಡೆಸುತ್ತಿವೆ. ಸಂಸತ್ತಿನಲ್ಲಿ ಚರ್ಚೆ ನಡೆಯುವಾಗ ಮ್ಯಾಚ್ ಫಿಕ್ಸಿಂಗ್ ಮಾಡಿಕೊಳ್ಳುತ್ತವೆ.

ಹೀಗಿರುವಾಗ ನೀತಿಗಳ ಬದಲಾವಣೆ ಮಾಡದೆ ವ್ಯಕ್ತಿಗಳ ಬದಲಾವಣೆ ಬಗ್ಗೆ ಚರ್ಚೆ ನಡೆಯುತ್ತಿದೆ. ದೇಶದ ಎಡಪಕ್ಷಗಳು ಮಾತ್ರ ಪರ್ಯಾಯ ಧೋರಣೆಗಳನ್ನು ಪ್ರತಿಪಾದಿಸುತ್ತಿವೆ. ಜನರಿಗೆ ಪರ್ಯಾಯದ ಅಗತ್ಯವಿದ್ದು ಜನಪರ ಪರ್ಯಾಯ ಧೋರಣೆಗಳನ್ನು ಜನರ ನಡುವೆ ಕೊಂಡೊಯ್ಯುವ ಐತಿಹಾಸಿಕ ಜವಾಬ್ದಾರಿ ಎಡಪಕ್ಷಗಳ ಮೇಲಿದೆ ಎಂದರು.

ಕಾರ್ಪೋರೇಟ್ ಕಂಪೆನಿಗಳ ಹಿಡಿತ

ನಂತರ ಫಾರ್ವರ್ಡ್ ಬ್ಲಾಕಿನ ರಾಜ್ಯಾಧ್ಯಕ್ಷರಾದ ಶಿವಶಂಕರ್ ಮಾತನಾಡಿ ದೇಶ ಕಾರ್ಪೋರೇಟ್ ಕಂಪೆನಿಗಳ ಹಿಡಿತದಲ್ಲಿದೆ. ಹಾಗಾಗಿ ಕಾರ್ಪೋರೇಟ್ ಕಂಪೆನಿಗಳಿಗೆ ಬಜೆಟಿನಲ್ಲಿ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ. ವಿದೇಶಿ ನೇರಬಂಡವಾಳವನ್ನು ಎಲ್ಲಾ ಕ್ಷೇತ್ರಗಳಲ್ಲಿ ತರಲು ಸರ್ಕಾರ ಹೊರಟಿದ್ದು ಕಾರ್ಪೋರೇಟ್ ಕಂಪೆನಿಗಳಿಗೆ ಲಾಭ ಮಾಡಿಕೊಡಲು ಮುಂದಾಗಿದೆ. ಮತ್ತೊಂದೆಡೆ ರೈತರಿಗೆ ನೀಡುವ ಸಬ್ಸಿಡಿ ಕಡಿತಗೊಳಿಸಿ ಅವರನ್ನು ನರಳುವಂತೆ ಮಾಡುತ್ತಿದ್ದಾರೆ. ಎನ್‌ಡಿಎ ಮತ್ತು ಯುಪಿಎ ಗಳ ಕರಾಳ ಮುಖ ಜನರಿಗೆ ತಿಳಿಯುತ್ತಿದೆ. ಹೀಗಾಗಿ ಎಡಪಕ್ಷಗಳು ಪರ್ಯಾಯ ತರುವ ಜವಾಬ್ದಾರಿ ಇದೆ. ಸಮಾನತೆಯ ತತ್ವ ಆಧರಿಸಿದ ಆರ್ಥಿಕ ನೀತಿ ರೂಪಿಸಿ ಪರ್ಯಾಯ ಧೋರಣೆ ಪರ ಇರುವ ಎಲ್ಲರನ್ನು ಒಗ್ಗೂಡಿಸಬೇಕಿದೆ. ನೇತಾಜಿ ಸುಭಾಶ್ ಚಂದ್ರಬೋಸರ ಆಶಯವು ಇದಾಗಿತ್ತು ಎಂದರು.

ಎನ್‌ಡಿಎ– ಯುಪಿಎ ಆರ್ಥಿಕ ಧೋರಣೆ ಒಂದೇ

ಸಿಪಿಐನ ರಾಜ್ಯ ಕಾರ್ಯದರ್ಶಿ ಪಿ.ವಿ.ಲೋಕೇಶ್ ಪ್ರಾಸ್ತಾವಿಕವಾಗಿ ಮಾತನಾಡಿ ದೇಶದಲ್ಲಿ ಯುಪಿಎ ಅಥವಾ ಎನ್‌ಡಿಎ ಎರಡೇ ಕೂಟಗಳು ಅಧಿಕಾರಕ್ಕೆ ಬರಬೇಕೆಂಬ ಪರೋಕ್ಷ ಪ್ರಚಾರ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಯಾರೇ ಅಧಿಕಾರಕ್ಕೆ ಬಂದರೂ 20 ವರ್ಷಗಳಲ್ಲಿ ಅನುಸರಿಸುತ್ತಾ ಬಂದಿರುವ ಆರ್ಥಿಕ ಉದಾರೀಕರಣದ ನೀತಿಗಳ ಬದಲಾವಣೆ ಆಗದಂತೆ ನೋಡಿಕೊಳ್ಳುವ ಹುನ್ನಾರವಾಗಿದೆ. ಯುಪಿಎ–ಎನ್‌ಡಿಎ ಗಳ ಆರ್ಥಿಕ ಧೋರಣೆಗಳು ಒಂದೇ ಅಗಿದ್ದು ಇವುಗಳಿಂದ ಪರ್ಯಾಯ ನಿರೀಕ್ಷಿಸಲು ಸಾಧ್ಯವಿಲ್ಲ. ಎಡಪಕ್ಷಗಳು ಮಾತ್ರ ಪರ್ಯಾಯ ಆರ್ಥಿಕ ಧೋರಣೆಗಳನ್ನು ಹೊಂದಿವೆ. ಎಡಪಕ್ಷಗಳು ಪ್ರತಿಪಾದಿಸುವ ಪರ್ಯಾಯ ಧೋರಣೆಗಳನ್ನು ಜನರಿಗೆ ಮನವರಿಕೆ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಈ ಸಮಾವೇಶವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ: ವಿಜೆಕೆ ನಾಯರ್, ಸಿಪಿಐನ ಕಾಂ: ಸಿದ್ದನಗೌಡ ಪಾಟೀಲ, ಫಾರ್ವರ್ಡ್ ಬ್ಲಾಕಿನ ಕಾಂ: ಶಿವಶಂಕರ್‌ರವರಿದ್ದ ಅಧ್ಯಕ್ಷೀಯ ಮಂಡಳಿ ಯಶಸ್ವಿಯಾಗಿ ನಡೆಸಿಕೊಟ್ಟಿತು. ದೆಹಲಿ ಸಮಾವೇಶದ ಕರೆಯನ್ನು ಓದಿ ಅನುಮೋದಿಸಲಾಯಿತು. ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಸಿಪಿಐ ಮತ್ತು ಸಿಪಿಐ(ಎಂ) ಜಿಲ್ಲಾವಾರು ಪ್ರತಿನಿಧಿಗಳು ಜಿಲ್ಲಾ ಮಟ್ಟದಲ್ಲಿಯೂ ಜಂಟಿ ಸಮಾವೇಶಗಳನ್ನು ನಡೆಸಿ ಸಮಾವೇಶದ ಕರೆಯನ್ನು ಜಾರಿಮಾಡುತ್ತೇವೆ ಎಂದು ಹೇಳಿದರು.

ಅಕ್ಟೋಬರ್ 7– ಬೆಂಗಳೂರಿನಲ್ಲಿ ರಾಜ್ಯಮಟ್ಟದ ಬೃಹತ್ ರ್‍ಯಾಲಿ:

ಜನವಿರೋಧಿ ನೀತಿಗಳಿಗೆ ವಿರುದ್ಧವಾಗಿ ಜನಪರ ಪರ್ಯಾಯ ಧೋರಣೆಗಳನ್ನು ಜನರ ನಡುವೆ ಕೊಂಡೊಯ್ದು ಪ್ರಚುರಪಡಿಸುವ ನಿಟ್ಟಿನಲ್ಲಿ ಎಡಪಕ್ಷಗಳು ಜಂಟಿಯಾಗಿ ಅಕ್ಟೋಬರ್ 7 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ರ್‍ಯಾಲಿ ನಡೆಸಲು ಸಮಾವೇಶ ತೀರ್ಮಾನಿಸಿತು. ಹಾಗೂ ಈ ಬೃಹತ್ ರ್‍ಯಾಲಿಯನ್ನು ಯಶಸ್ವಿಗೊಳಿಸಲು ಎಡಪಕ್ಷಗಳ ಎಲ್ಲ ಮುಖಂಡರು, ಸದಸ್ಯರು, ಕಾರ್ಯಕರ್ತರು, ಹಿತೈಷಿಗಳು ಶ್ರಮಿಸಬೇಕೆಂದು ಸಮಾವೇಶ ಕರೆನೀಡಿತು. ರಾಜ್ಯದ ನಾನಾ ಭಾಗಗಳಿಂದ ಬಂದು ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಪ್ರತಿನಿಧಿಗಳು ಸಮಾವೇಶದ ಈ ಕರೆಗೆ ಒಕ್ಕೊರಲಿನ ಬೆಂಬಲ ಘೋಷಿಸಿದರು.



ಜುಲೈ 1: ದೆಹಲಿಯಲ್ಲಿ ನಡೆದ ಎಡಪಕ್ಷಗಳ ಸಮಾವೇಶ

ರಾಮನಗರ:

ರೈತರನ್ನು ಒಕ್ಕಲೆಬ್ಬಿಸುತ್ತಿರುವುದರ ವಿರುದ್ಧ ಪ್ರತಿಭಟನೆ




ರಾಮನಗರ ಜಿಲ್ಲೆಯ ಜಿಲ್ಲೆಯ ವಿವಿಧೆಡೆ ಅರಣ್ಯ ಮತ್ತು ಕಂದಾಯ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಭೂರಹಿತ ಬಡ ರೈತರನ್ನು ಒಕ್ಕಲೆಬ್ಬಿಸಿ ಬೀದಿಪಾಲು ಮಾಡುತ್ತಿರುವುದನ್ನು ತಡೆಯುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಇದೇ ಅಗಸ್ಟ್ 19 ರಂದು ರೈತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಎಂ. ಶ್ರೀನಿವಾಸ ಅವರು ಕಳೆದ 60–70 ವರ್ಷಗಳಿಂದ ಈ ಬಡರೈತರು ತಮ್ಮ ಗ್ರಾಮಗಳ ಆಸುಪಾಸಿನಲ್ಲಿರುವ ಸರ್ಕಾರಿ ಬಂಜರು ಭೂಮಿಯನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಆಗ ಈ ಭೂಮಿ ಅರಣ್ಯ ಭೂಮಿ ಆಗಿರಲಿಲ್ಲ. ಹಲವಾರು ರೈತರು ಕಾನೂನು ಚೌಕಟ್ಟಿನಲ್ಲಿ ಸಾಗುವಳಿ ಚೀಟಿ ಪಡೆದವರಾಗಿದ್ದು ಅವರ ಹೆಸರಿನಲ್ಲಿ ಪಹಣಿ ಕೂಡ ಇದೆ. ಈಗ ಅರಣ್ಯ ಇಲಾಖೆಯ ಅಧಿಕಾರಿಗಳು ರೈತರು ಬಿತ್ತನೆ ಮಾಡಿದ ಭೂಮಿಯಲ್ಲಿ ಪೈರನ್ನು ನಾಶಮಾಡಿ, ಟ್ರಂಚ್ ಹೊಡೆದು, ಗುಂಡಿ ತೋಡಿ, ಅರಣ್ಯ ಸಸಿಗಳನ್ನು ನೆಟ್ಟು ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ. ಅವರ ಮೇಲೆ ಅರಣ್ಯ ನಾಶಮಾಡಿದ್ದಾರೆ ಎಂದು ಸುಳ್ಳು ಆರೋಪ ಹೊರಿಸಿ, ಮೊಕದ್ದಮೆ ಹೂಡಿ ಕಿರುಕುಳ ನೀಡುತ್ತಿದ್ದಾರೆ ಎಂದು ಟೀಕಿಸಿದರು. ಈ ಭೂಮಿಯನ
ಅವಲಂಭಿಸಿರುವ ಈ ಬಡ ರೈತರು ಸರ್ಕಾರ
ಕ್ಕೆ ಹಲವು ಬಾರಿ ಸಾಮೂಹಿಕವಾಗಿಯ
ವೈಯುಕ್ತಿಕವಾಗಿಯೂ ಅರ್ಜಿಗಳನ
ಸಲ್ಲಿಸಿದ್ದಾರೆ ಎಂದು ಹೇಳಿದ ಅವರು 20
ಅರಣ್ಯ ಹಕ್ಕುಗಳ ಕಾಯ್ದೆ ಅಡಿಯಲ್ಲಿ
ರೈತರಿಂದ ಅರ್ಜಿಗಳನ್ನು ಪಡೆದು ಅಹ
ಬಡ ಭೂರಹಿತರಿಗೆ ಭೂಮಿಯ ಹಕ್ಕನ
ನೀಡಬೇಕು ಎಂದು ಒತ್ತಾಯಿಸಿದರ
ಬಗರ್ ಹುಕುಂ ಸಾಗುವಳಿದಾರರ ವಿರು
ಅರಣ್ಯ ಇಲಾಖೆ ಅಧಿಕಾರಿಗಳು ಸು
ಮೊಕದ್ದಮೆ ಹೂಡುವುದನ್ನು ನಿಲ್ಲಿಸದಿದ್ದ
ಚಳುವಳಿಯನ್ನು ತೀವ್ರಗೊಳಿಸಲಾಗುವುದ
ಎಂದು ಎಚ್ಚರಿಸಿದರು.

ಜಿಲ್ಲಾ ಕಾರ್ಯದರ್ಶಿ ನಾಗೇಶ್, ರಾ
ಸಮಿತಿ ಸದಸ್ಯೆ ವನಜ, ರಾಮಚಂದ್ರ
ಮಹದೇವಯ್ಯ, ಸಂಜೀವಯ್ಯ, ಕೃಷ್ಣಮೂರ್ತಿ
ಮಹೇಂದ್ರ, ಅಂಕಪ್ಪ, ಚೆನ್ನಪ್ಪಾಜಿ ಸೇರಿದಂ
ರೈತ ಮುಖಂಡರು ಪ್ರತಿಭಟನೆಯ ನೇತೃ
ವಹಿಸಿದರು.

ವರದಿ : ಮಕ್ತು

ಕಟ್ಟಡ ಕಾರ್ಮಿಕರ ಸಂಗಾತಿ 'ಜಯರಾಮ್' ಇನ್ನಿಲ್ಲ



ಬೆಂಗಳೂರು ಸಿಐಟಿಯು ಜಿಲ್ಲಾ ಸಮಿತಿ ಸದಸ್ಯರು, ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಸಹಕಾರ್ಯದರ್ಶಿ ಕಾಮ್ರೆಡ್ ಎಂ.ಜಯರಾಮ್ ಆಗಸ್ಟ್ 27 ರಂದು ಅನಾರೋಗ್ಯದಿಂದಾಗಿ ನಿಧನರಾದರು. ಅವರಿಗೆ 54 ವರ್ಷ ವಯಸ್ಸಾಗಿತ್ತು. ಅವರು ತಂದೆ, ತಾಯಿ, ಪತ್ನಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರನನ್ನು ಅಗಲಿದ್ದಾರೆ.

ಬೆಂಗಳೂರಿನ ಗಾಂಧಿ ಬಜಾರ್‌ನಲ್ಲಿ ಬೀದಿ ವ್ಯಾಪಾರಿಗಳನ್ನು ಬೆಂಗಳೂರು ನಗರ ಪಾಲಿಕೆ ಏಕಾಏಕಿ ತೆರವುಗೊಳಿಸಿದ್ದನ್ನು ವಿರೋಧಿಸಿ ಅವರನ್ನು ಸಿಐಟಿಯು ಆಶ್ರಯದಲ್ಲಿ ಸಂಘಟಿಸಿ ಪ್ರಬಲ ಹೋರಾಟಕ್ಕೆ ನೇತೃತ್ವ ನೀಡಿದ್ದರು. ಪ್ರತಿಭಟನೆಗೆ ಮಣಿದ ಪಾಲಿಕೆ ವ್ಯಾಪಾರಿಗಳ ತೆರವು ಕಾರ್ಯವನ್ನು ಸ್ಥಗಿತಗೊಳಿಸಿತು. ಇದರಿಂದ ಪ್ರಭಾವಿತರಾದ ಈ ಸಂಗಾತಿ, ಬೆಂಗಳೂರಿನ ಬೀದಿ ಬದಿ ವ್ಯಾಪಾರಿಗಳನ್ನು ಸಂಘಟಿಸುವ ಮತ್ತು ಅವರ ನೋವುಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಕ್ರಿಯಾಶೀಲರಾದರು. ನಂತರ ವ್ಯಾಪಾರ ನಿಲ್ಲಿಸಿ ಸಂಘಟನೆಯ ಪೂರ್ಣಾವಧಿ ಕಾರ್ಯಕರ್ತರಾದರು.

ನಂತರ ಕಟ್ಟಡ ಕಾರ್ಮಿಕರನ್ನು ಸಂಘಟಿಸಲು ನಿಯೋಜನೆಗೊಂಡ ಅವರು ಸಂಘಟನೆಯ ಆರಂಭದಿಂದ ತಾವು ಅನಾರೋಗ್ಯಕ್ಕೆ ಒಳಗಾಗುವ ವರೆಗೂ ನಿರಂತರವಾಗಿ ದುಡಿದರು. ಸತತವಾಗಿ ಕಾರ್ಮಿಕರ ಬೆನ್ನತ್ತಿ ಸದಸ್ಯತ್ವ ನೊಂದಾಯಿಸುವುದು, ನವೀಕರಿಸುವುದು, ಅವರಿಗೆ ಕಾರ್ಮಿಕ ಇಲಾಖೆಯಿಂದ ಬರಬೇಕಾದ ಸೌಲಭ್ಯಗಳನ್ನು ಕೊಡಿಸುವಲ್ಲಿ ಮುತುವರ್ಜಿ ವಹಿಸುವುದು ಮಾಡುತ್ತಿದ್ದರು. ಜಯನಗರ ವಲಯ ವ್ಯಾಪ್ತಿಯಲ್ಲಿ ಎಆರ್‌ಡಿಯು ಅಡಿಯಲ್ಲಿ ಆಟೋ ಚಾಲಕರನ್ನು ಸಂಘಟಿಸಲು ಸಹಕರಿಸುತ್ತಿದ್ದರು. ಕೇವಲ 3ನೇ ತರಗತಿವರೆಗೆ ಓದಿದ್ದ ಅವರು ಸಂಘಟನೆಯ ದಾಖಲೆಗಳನ್ನು ಅಚ್ಚುಕಟ್ಟಾಗಿ ಸಂಗ್ರಹಿಸುಡುವಲ್ಲಿ ಕಾಳಜಿವಹಿಸುತ್ತಿದ್ದರು. ಅವರು ಸಿಪಿಐ(ಎಂ) ಜಯನಗರ ವಲಯ ಸಮಿತಿ ಸದಸ್ಯರೂ ಆಗಿದ್ದರು.

ಬೆಂಗಳೂರಿನಲ್ಲಿ ನಡೆಯುವ ಸಿಐಟಿಯು, ಯುವಜನ–ವಿದ್ಯಾರ್ಥಿ, ಮಹಿಳಾ ಸಂಘಟನೆ, ಸಿಪಿಐ(ಎಂ) ಮೊದಲಾದ ಯಾವುದೇ ಸಂಘಟನೆಗಳ ಜನಪರ ಹೋರಾಟ ಮತ್ತು ಕಾರ್ಯಕ್ರಮವಿರಲಿ ಕಾಮ್ರೆಡ್ ಜಯರಾಮ್ ಅದರ ಯಶಸ್ಸಿಗೆ ಶ್ರಮಿಸುತ್ತಿದ್ದರು.

ಅಂತ್ಯ ಸಂಸ್ಕಾರದಲ್ಲಿ ಸಿಪಿಐ(ಎಂ) ಮುಖಂಡರು ಮತ್ತು ನಾನಾ ಸಾಮೂಹಿಕ ಸಂಘಟನೆಗಳ ಮುಖಂಡರು ಪಾಲ್ಗೊಂಡು ಅಂತಿಮ ಗೌರವ ಸಲ್ಲಿಸಿದರು. ಸಂಗಾತಿ ಜಯರಾಮ್ ಅವರಿಗೆ 'ಜನಶಕ್ತಿ'ಯ ಶ್ರದ್ಧಾ–ಂಜಲಿ.

ಕೋಟಿ ಸಬ್ಸಿಡಿಗಳ......

ಪುಟ 07 ರಿಂದ

ನಮ್ಮ ಆರ್ಥಿಕದಲ್ಲಿ ಒಟ್ಟಾರೆ ಆಂತರಿಕ ಬೇಡಿಕೆ ಕುಗ್ಗುತ್ತಿರುವುದು. ಇದರ ನೇರ ಪರಿಣಾಮವೆಂದರೆ ಭಾರತದ ಶ್ರೀಮಂತರು ಮತ್ತು ಕಾರ್ಪೊರೇಟ್ ವಲಯದ ಬಳಿ ಸಾಕಷ್ಟು ಮಿಗುತೆ ಹಣ ಇದ್ದರೂ ಉತ್ಪಾದನೆಯಲ್ಲಿ ಹೂಡಿಕೆ ಮಾಡಲು ಹಿಂಜರಿಯುತ್ತಿದ್ದಾರೆ. ಏಕೆಂದರೆ ಅವರ ಉತ್ಪನ್ನಗಳು ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿಯೂ ಮಾರಾಟವಾಗುತ್ತಿಲ್ಲ, ಇತ್ತ ಆಂತರಿಕ ಮಾರುಕಟ್ಟೆಯಲ್ಲಿಯೂ, ನಮ್ಮ ಜನಗಳ ಖರೀದಿ ಸಾಮರ್ಥ್ಯ ಇಳಿಯುತ್ತಿರುವುದರಿಂದಾಗಿ ಮಾರಾಟವಾಗುತ್ತಿಲ್ಲ. ಅಪಾರ ನಗದು ಮೀಸಲುಗಳನ್ನು ಹೊಂದಿರುವ ಸಾರ್ವಜನಿಕ ವಲಯದ ಕಂಪನಿಗಳು ಅವನ್ನು ಹೂಡಿಕೆ ಮಾಡಲು ಒಪ್ಪಿಸಲು, ಕಳೆದ ಒಂದು ವರ್ಷದಿಂದ ಪ್ರಧಾನ ಮಂತ್ರಿಗಳಿಗೂ, ಹಣಕಾಸು ಮಂತ್ರಿಗಳಿಗೂ ಆಗಿಲ್ಲ.

ಇಂತಹ ಸನ್ನಿವೇಶಗಳಲ್ಲಿ, ಶ್ರೀಮಂತರಿಗೆ ಅವರ ಮಿಗುತೆ ಹಣಗಳನ್ನು ಇಡಲು ಮಾರ್ಗಗಳು ಬೇಕಾಗಿವೆ. ಇದನ್ನು ಅವರು ಚಿನ್ನ, ರಿಯಲ್ ಎಸ್ಟೇಟ್ ಮತ್ತು ವಿದೇಶಿ ಕರೆನ್ಸಿಗಳನ್ನು ಖರೀದಿಸುವ ಮೂಲಕ ಮಾಡುತ್ತಿದ್ದಾರೆ. ಚಿನ್ನದ ಬೆಲೆ 10ಗ್ರಾಂಗೆ 33,590ರೂ.ಗಳ ಹಿಂದೆಂದೂ ತಲುಪದ ಮಟ್ಟಕ್ಕೆ ಏರಿದೆ. ಬೆಳ್ಳಿ ಬೆಲೆಯೂ ಕಳೆದ ಆರು ತಿಂಗಳಲ್ಲಿ ಕಾಣದ ಮಟ್ಟಕ್ಕೆ ಏರಿದೆ. ಭಾರತದಲ್ಲಿ ರಿಯಲ್ ಎಸ್ಟೇಟ್ ಬೆಲೆಗಳು ಏರುತ್ತಿರುವ ವೇಗ ಜಗತ್ತಿನಲ್ಲಿಯೇ ಅತೀ ಹೆಚ್ಚು ಎನ್ನಲಾಗಿದೆ. ಅದೇ ರೀತಿ ಅಮೆರಿಕನ್ ಡಾಲರುಗಳು ಮತ್ತು ಇತರ ವಿದೇಶಿ ಕರೆನ್ಸಿಗಳ ಬೇಡಿಕೆಯಲ್ಲಿ ತೀಕ್ಷ್ಣ ಏರಿಕೆಯಿಂದಾಗಿ ರೂಪಾಯಿಯ ತೀಕ್ಷ್ಣ ಪತನವಾಗುತ್ತಿದೆ.

ಅಂತರ್ರಾಷ್ಟ್ರೀಯ ಅನಿಶ್ಚಿತತೆಗಳ ಕೊಡುಗೆ

ಇದಲ್ಲದೆ, ಅಮೆರಿಕಾ ತನ್ನ ಉತ್ತೇಜನಾ
ಪ್ಯಾಕೇಜುಗಳನ್ನು ಹಿಂತೆಗೆದೊಳ್ಳಲಿ
ಎಂಬ ವರದಿ ಅಂತರ್ರಾಷ್ಟ್ರೀಯ ಹಣಕಾ
ಮಾರುಕಟ್ಟೆಗಳಲ್ಲಿ ಭೀತಿ ಆವರಿಸುವಂ
ಮಾಡಿದೆ. ಜತೆಗೆ, ಸಿರಿಯಾದ ಮೇ
ಅಮೆರಿಕಾದ ನೇತೃತ್ವದಲ್ಲಿ ದಾಳಿ ನಡೆಸು
ಸಾಧ್ಯತೆಯ ಹಿನ್ನೆಲೆಯಲ್ಲಿ ಅಂತರ್ರಾಷ್ಟ್ರೀಯ
ಮಾರುಕಟ್ಟೆಗಳಲ್ಲಿ ತೈಲದ ಬೆಲೆ ಕುರಿತ
ಅನಿಶ್ಚಿತತೆ ಮೂಡಿದೆ. ಇವೆರಡೂ ಸೇ
ಅಂತರ್ರಾಷ್ಟ್ರೀಯ ಹಣಕಾಸು ಮಾರುಕಟ್ಟೆಗಳ
ಭಾರಿ ಏರು–ಪೇರು ಸಂಭವಿಸುತ್ತಿದೆ. ಇದು ಕೂ
ಭಾರತೀಯ ಶೇರು ಮಾರುಕಟ್ಟೆಯ ಮೇ
ಪರಿಣಾಮ ಬೀರಿ, ರೂಪಾಯಿಯ ನಿರಂತ
ಪತನಕ್ಕೆ ಕಾರಣವಾಗಿದೆ. ಈ ಅಂತರ್ರಾಷ್ಟ್ರೀಯ
ಅನಿಶ್ಚಿತತೆಗಳಿಂದಾಗಿ ಎಫ್‌ಐಐಗಳು ಭಾರತೀಯ
ಮಾರುಕಟ್ಟೆಗಳಿಂದ ದೊಡ್ಡ ಪ್ರಮಾಣದ
ಹೊರಹೋಗುವಂತಾಗಿದೆ. ಆಗಸ್ಟ್ 19ರಂ
ಹೀಗೆ ಹೊರಹೋದ ಹಣಕಾಸಿನ ಮೊ
100ಕೋಟಿ ಡಾಲರ್‌ಗಳಿಗಿಂತಲೂ
ಎನ್ನಲಾಗಿದೆ.

ಇನ್ನಷ್ಟು ಸುಧಾರಣೆಗಳನ್ನು ತರಬೇ
ಎಂಬ ಕೂಗು ಭಾರತದ ಸಮಸ್ಯೆಗಳಿ
ಉತ್ತರವಾಗಲು ಸಾಧ್ಯವಿಲ್ಲ. ಈ ಕೂಗುಗ
ಹಿಡಿಯಷ್ಟಿರುವ 'ಹೊಳೆಯುತ್ತಿರುವ' ಭಾರ
'ನರಳುತ್ತಿರುವ' ಭಾರತದ ಖರ್ಚಿನಲ್ಲಿ ಇನ್ನ
ಹೊಳೆಯುವಂತೆ ಮಾಡುವ ಕೂಗುಗಳಷ್ಟೆ
'ಹೊಳೆಯುತ್ತಿರುವ' ಭಾರತದ ಹೊಳಪಿಗ
'ನರಳುತ್ತಿರುವ' ಭಾರತದ ನರಳಿಕೆಯ
ತೀವ್ರತೆಗೂ ನೇರ ಸಂಬಂಧವಿದೆ.


ಉತ್ತರವಿರುವುದು ಶ್ರೀಮಂತರಿಗೆ ಕೊಡು
ಸಬ್ಸಿಡಿಗಳನ್ನು ನಿಲ್ಲಿಸಿ, ಈ ಸಂಪನ್ಮೂಲಗಳನ
ನಮ್ಮ ಬಹು ಆವಶ್ಯಕವಾದ ಮೂಲರಚನೆಗಳನ
ಕಟ್ಟಲು ಬೇಕಾಗುವ ವಿಶಾಲ ಸಾರ್ವಜನ
ಹೂಡಿಕೆಗಳಿಗೆ ಬಳಸುವಲ್ಲಿ. ಇದ
ಉದ್ಯೋಗಾವಕಾಶಗಳಲ್ಲಿ ತೀವ್ರ ಹೆಚ್ಚಳವನ
ತರುತ್ತದೆ. ಇದರಿಂದಾಗಿ ಹೆಚ್ಚುವ
ಕೊಳ್ಳುವ ಶಕ್ತಿ ಒಟ್ಟು ಆಂತರಿಕ ಬೇಡಿಕೆಯನ
ವಿಸ್ತರಿಸುತ್ತದೆ, ಅದು ತಯಾರಿಕಾ ಮತ
ಇತರ ಉದ್ದಿಮೆಗಳ ಬೆಳವಣಿಗೆಗೆ ಉತ್ತೇಜ

ಚವಡಳ್ಳಿ ಗ್ರಾಮ ಪಂಚಾಯತ್ ಕಛೇರಿಗೆ ಇಂದಿರಾ ಆವಾಸ್ ಫಲಾನುಭವಿಗಳಿಂದ ಮುತ್ತಿಗೆ

ಉತ್ತರ ಕನ್ನಡ ಜಿಲ್ಲೆ, ಮುಂಡಗೋಡ್ ತಾಲೂಕಿನ ಚವಡಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಗೆ ಬರುವ ಅಂದಲಗಿ, ಬ್ಯಾನಳ್ಳಿ, ಚವಡಳ್ಳಿ, ಕಲಕೇರಿ, ಕರಗೊಳ್ಳಿ, ಕ್ಯಾಸನಕೇರಿ, ಲಕ್ಕೊಳ್ಳಿ, ಮಲವಳ್ಳಿ, ತಮ್ಮ್ಯಾನಕೊಪ್ಪ, ತೇಗಿನಕೊಪ್ಪ ಗ್ರಾಮಗಳ 376 ಜನ ಇಂದಿರಾ ಆವಾಸ್ ಯೋಜನೆ ಫಲಾನುಭವಿಗಳು ತಮಗೆ ಮನೆ ಕಟ್ಟಲು ಕಂತುಗಳಲ್ಲಿ ಕೊಡಬೇಕಾದ ಹಣವನ್ನು ಸಂದಾಯ ಮಾಡದೆ ಗೋಳಾಡಿಸುತ್ತಿರುವುದನ್ನು ಪ್ರತಿಭಟಿಸಿ ಪಂಚಾಯತ್ ಆಫೀಸನ್ನು ಬೆಳಿಗ್ಗೆಯಿಂದ ಸಂಜೆವರೆಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಧ್ವಜದಡಿಯಲ್ಲಿ ಮುತ್ತಿಗೆ ಹಾಕಿ ಅಧಿಕಾರಿಗಳನ್ನು ದಿಬ್ಬಂದನಕ್ಕೆ ಒಳಪಡಿಸಿದರು.

ಹಿನ್ನೆಲೆ : ಹಿಂದಿನ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲಿ ಸ್ಥಳೀಯ ಬಿಜೆಪಿ ಶಾಸಕ ಇ.ಎಸ್.ಪಾಟೀಲ್ ಚವಡಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹತ್ತು ಗ್ರಾಮಗಳಿಗೆ ಇಂದಿರಾ ಆವಾಸ್ ಯೋಜನೆಯ ಅಡಿಯಲ್ಲಿ 376 ಮನೆಗಳನ್ನು ಮಂಜೂರು ಮಾಡಿಸಿದ್ದರು. ಕೇಂದ್ರ ಪುರಸ್ಕೃತ ಈ ಯೋಜನೆಯ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ರೂ. 33,750, ರಾಜ್ಯ ಸರ್ಕಾರದಿಂದ ರೂ. 41,250 ನೆರವು ನೀಡಲಾಗುತ್ತಿದ್ದು ರೂ. 25,000 ಫಲಾನುಭವಿಯ ವಂತಿಗಿ. ಒಟ್ಟಿಗೆ ಒಂದು ಮನೆಕಟ್ಟಲು ಎರಡೂ ಸರ್ಕಾರಗಳಿಂದ ರೂ. 75,000 ಒದಗಿಸಲಾಗುತಿತ್ತು. ಮೊದಲ ಕಂತು ರೂ. 15,000 ಪಾಯಾ ಹಂತ ಪೂರ್ಣಗೊಳಿಸಿದಾಗ, ಎರಡನೇ ಕಂತು ರೂ. 20,000 ಗೋಡೆ ಹಂತ ಪೂರ್ಣವಾದಾಗ, ಮೂರನೇ ಕಂತು ರೂ. 20,000 ಮೇಲ್ಚಾವಣಿ ಹಂತ ಪೂರ್ಣಗೊಂಡಾಗ, ಮತ್ತು ಕೊನೆಯ ಕಂತು ರೂ. 20,000 ಮನೆ ನಿರ್ಮಾಣ ಪೂರ್ಣಗೊಂಡ ನಂತರ ನೀಡಬೇಕಾಗಿದೆ. ಹಣದ ದುರುಪಯೋಗ ತಡೆಯಲು ಮತ್ತು ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಜಿ.ಪಿ.ಎಸ್. ಕ್ಯಾಮರಾ ಮೂಲಕ ಮನೆಯ ಪ್ರಗತಿಯ ಪ್ರತಿಯೊಂದು ಹಂತದ ಛಾಯಾ ಚಿತ್ರವನ್ನು ಸೆರೆಹಿಡಿದು ಅದರ ಆಧಾ ರದ ಮೇಲೆ ಅನುದಾನದ ಕಂತುಗಳನ್ನು ಬಿಡುಗಡೆ ಮಾಡಬೇಕಾಗಿದೆ. ಗರಿಷ್ಠ 4 ತಿಂಗಳ ಒಳಗಾಗಿ ಮನೆ ನಿರ್ಮಾಣವನ್ನು ಪೂರ್ಣಗೊಳಿಸಬೇಕಾಗಿದೆ.

ಚವಡಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಫಲಾನುಭವಿಗಳಿಗೆ 4-4-12 ರಂದು ಹಕ್ಕು ಪತ್ರಗಳನ್ನು ನೀಡಿ ವರ್ಕ್ ಆರ್ಡರ್ ನೀಡಲಾಗಿತ್ತು. ಆದರೆ ಫಲಾನುಭವಿಗಳ ಪೈಕಿ ಕೆಲವರು ಮಾತ್ರ ಪಾಯಾ (ಬುನಾದಿ) ಹಂತದ ಕೆಲಸವನ್ನು ಪೂರ್ಣಗೊಳಿಸಿ ಮೊದಲ ಕಂತನ್ನು ಪಡೆದರು. ಆದರೆ ಆರ್ಥಿಕ ಅಡಚಣೆಯಿಂದಾಗಿ ಎರಡನೇ ಹಂತದ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಾಗಲಿಲ್ಲ. ಕೆಲವೇ ಕೆಲವು ಫಲಾನುಭವಿಗಳು ಮಾತ್ರ ಸಾಲಮಾಡಿ ಹಣ ಜೋಡಿಸಿ ಎರಡನೇ ಹಂತದ ಕೆಲಸವನ್ನು ಪೂರ್ಣಗೊಳಿಸಿ ತಲಾ ರೂ. 20,000 ಪಡೆದರು. ಸಮಯಕ್ಕೆ ಸರಿಯಾಗಿ ಕೆಲಸ ಆಗದಿರುವುದರಿಂದ ಪಂಚಾಯತಿಗೆ ಸರ್ಕಾರದಿಂದ ಬಂದ ದುಡ್ಡು ವಾಪಸ್ ಹೋಯಿತೆಂದು ಪಂಚಾಯತಿ ಅಧಿಕಾರಿಗಳು ಮತ್ತು ಪಂಚಾಯತ್ ಸದಸ್ಯರು ಹೇಳುತ್ತಾರೆ.



ಸಾಲದ ಸುಳಿಗೆ ಸಿಕ್ಕಿಹಾಕಿಕೊಂಡ ಫಲಾನುಭವಿಗಳು :

ಈ ನಡುವೆ ಅರ್ಧಕ್ಕೆ ಕಟ್ಟಲಾದ ಗೋಡೆಗಳು ಮಳೆಗಾಳಿ ಹೊಡೆತಕ್ಕೆ ಸಿಕ್ಕಿ ಬಿದ್ದು ಹೋಗುವ ಅಪಾಯವನ್ನು ಮನಗಂಡ ಹಲವಾರು ಜನ ಫಲಾನುಭವಿಗಳು ಸಾಲಮಾಡಿ ಹಣ ತಂದು ಮನೆಗಳನ್ನು ಪೂರ್ಣಗೊಳಿಸಿದರು. ಮನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದವರು ಕಟ್ಟಿದ ಗೋಡೆಗಳು ನೆಲಕ್ಕುರುಳಿ ನಷ್ಟವನ್ನು ಅನುಭವಿಸುವಂತಾಯಿತು. ಸಾಲ ತಂದವರು ಸಾಲಕ್ಕೆ ಬಡ್ಡಿ ತೆರಬೇಕಾಯಿತು. ಸಾಲದ ಸುಳಿಗೆ ಸಿಕ್ಕ ಈ ಫಲಾನುಭವಿಗಳು ದಾರಿ ತೋಚದೆ ಪರದಾಡುತ್ತಿರುವಾಗ ರಾಜ್ಯದಲ್ಲಿ ಚುನಾವಣೆ ನಡೆದು ಸರ್ಕಾರ ಬದಲಾಯಿತು.



ಭ್ರಷ್ಟ ಬಿಜೆಪಿ ಜನರಿಂದ ತಿರಸ್ಕರಿಸಲ್ಪಟ್ಟು ರಾಜ್ಯದಲ್ಲಿ ಅನಾಯಾಸವಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಕ್ಷೇತ್ರದ ಕಾಂಗ್ರೆಸ್ ಶಾಸಕರಾದ ಶಿವರಾಮ್ ಹೆಬ್ಬಾರ್ ಅವರ ಬಳಿಗೆ ಫಲಾನುಭವಿಗಳು ಹೋಗಿ ತಮ್ಮ ಗೋಳನ್ನು ತೋಡಿಕೊಂಡಾಗ ಶಾಸಕರು ಸ್ಪಂಧಿಸಲಿಲ್ಲ.

ಇತ್ತ, ಕಳೆದ ಕೆಲವು ವರ್ಷಗಳಿಂದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮುಂಡಗೋಡ ತಾಲೂಕಿನ ಹಳ್ಳಿಗಳಲ್ಲಿ ಸಂಘಟನೆ – ಹೋರಾಟಗಳನ್ನು ನಡೆಸುತ್ತಾ ಗ್ರಾಮೀಣ ಬಡವರ ಗಮನ ಸೆಳೆಯತೊಡಗಿದೆ. ಚವಡಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಂದಿರಾ ಆವಾಸ್ ಫಲಾನುಭವಿಗಳ ಸಂಕಷ್ಟವನ್ನು ಕುರಿತು ಚರ್ಚೆಮಾಡಿ ಹೋರಾಟವನ್ನು ರೂಪಿಸಲು ನಿರ್ಧರಿಸಲಾಯಿತು.

ದಿನವಿಡೀ ಮುತ್ತಿಗೆ – ಅಧಿಕಾರಿಗಳಿಗೆ ದಿಗ್ಭಂಧನ.

ಇದೇ ಅಗಸ್ಟ್ 27 ರಂದು ಮಂಗಳವಾರ ಬೆಳಗಾಗುತ್ತಿದ್ದಂತೆ ಬೇರೆ ಬೇರೆ ಗ್ರಾಮಗಳಿಂದ ಜನ ಟ್ರಾಕ್ಟರುಗಳಲ್ಲಿ, ಜೀಪುಗಳಲ್ಲಿ ಆಗಮಿಸಿ ಚವಡಳ್ಳಿ ಗ್ರಾಮದ ಬೀದಿಗಳಲ್ಲಿ ನೀರಿನಂತೆ ನಿಂತರು. ನಿಗಧಿತ ಸಮಯಕ್ಕೆ ಸ್ವಲ್ಪ ತಡವಾಗಿ ಅವರೆಲ್ಲರೂ ಕೆಂಬಾವುಟಗಳನ್ನು ಎತ್ತಿಕೊಂಡು ಮೆರವಣಿಗೆಯಲ್ಲಿ ಹೊರಟಾಗ ಇಡೀ ಊರೇ ಸ್ತಬ್ದವಾಯಿತು. ಅವರ ಘೋಷಣೆಗಳು ಆಕಾಶವನ್ನೇ ಭೇಧಿಸುವಂತಿದ್ದವು ಬೆಳಿಗ್ಗೆಯಿಂದಲೇ ಬಂದು ನಿಂತಿದ್ದ ಪೋಲೀಸ್ ವ್ಯಾನ್ ಅವರನ್ನು ಕೆರಳಿಸಿತ್ತು. ಬೆಂಗಳೂರಿನಿಂದ ಆಗಮಿಸಿದ್ದ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಮೆರವಣಿಗೆಯ ನೇತೃತ್ವವಹಿಸಿದ್ದರು. ಮೆರವಣಿಗೆ ಪಂಚಾಯತ್ ಕಚೇರಿಗೆ ಬರುತ್ತಿದ್ದಂತೆ, ನೂರಾರು ಪೋಲೀಸರು ಅಡ್ಡಗೋಡೆಯಾಗಿ ನಿಂತಿರುವುದನ್ನು ನೋಡಿ ಮೆರವಣಿಗೆಯಲ್ಲಿದ್ದವರ ಆಕ್ರೋಶ ನಿಯಂತ್ರಣ ತಪ್ಪುವಂತಿತ್ತು.

ಮೆರವಣಿಗೆಯಲ್ಲಿ ಬಂದವರಿಗೆ ಸಮಾಧಾನ ಪಡಿಸಿ ಕಚೇರಿ ಮುಂಭಾಗದ ಬಯಲಿನಲ್ಲಿ ಮತ್ತು ರಸ್ತೆಯ ಮೇಲೆ ಧರಣಿ ಕುಳಿತುಕೊಳ್ಳವಂತೆ ಮಾಡಲು ಕಾರ್ಯಕರ್ತರು ಹರಸಾಹಸ ಪಡಬೇಕಾಯಿತು. ಘೋಷಣೆಗಳ ಸುರಿಮಳೆ, ಅಧಿಕಾರಿಗಳೊಂದಿಗೆ ವಾದಪವಾದ ಹಲವು ಗಂಟೆಗಳ ಕಾಲ ನಡೆಯಿತು.

ಶಾಸಕರ ಮಧ್ಯಪ್ರವೇಶ :

ಘಟನೆಯ ಸುದ್ದಿ ತಿಳಿದ ಶಾಸಕರು ಸ್ಥಳಕ್ಕೆ ಆಗಮಿಸಿದರು. ಸಮಸ್ಯೆಯ ಮಾಹಿತಿಗಳನ್ನು ಕೇಳಬಯಸಿದರು. ಸಮಸ್ಯೆಯ ಕುರಿತು ವಿವರಣೆ ನೀಡಿದ ನಿತ್ಯಾನಂದ ಸ್ವಾಮಿ ಅವರು – "ಜನ ನಮಗೆ ವಿಷ ಕೊಡಿ ಎಂದು ಕೇಳಲು ಬಂದಿದ್ದಾರೆ ಅವರಿಗೆ ವಿಷ ಕೊಡುವುದು, ಬಿಡುವುದು ನಿಮಗೆ ಬಿಟ್ಟದ್ದು" ಎಂದು ಖಾರವಾಗಿಯೇ ಹೇಳಿದರು. ಅನಂತರ ಶಾಸಕರು ತಮ್ಮ ಸರ್ಕಾರದ 100 ದಿನಗಳ ಸಾಧನೆಯನ್ನು ಬಣ್ಣಿಸತೊಡಗಿದರು. ಜನರಿಗೆ ಅದು ರುಚಿಸಲಿಲ್ಲ. ಅವರು ಶಾಸಕರನ್ನು ಪ್ರಶ್ನಿಸತೊಡಗಿದರು. ಇಂದಿರಾ ಆವಾಸ್ ಯೋಜನೆಯ ಕುರಿತಾದ ಕೆಲವು ಫೈಲುಗಳು ನಾಪತ್ತೆ ಆಗಿರುವುದರಿಂದ ಸಮಸ್ಯೆ ಉಂಟಾಗಿದೆ ಎಂದು ಸಬೂಬು ಹೇಳಿದ ಶಾಸಕರು ಇನ್ನು 15 ದಿನಗಳಲ್ಲಿ ಎಲ್ಲ ಫಲಾನುಭವಿಗಳಿಗೆ ಬಟವಡೆಯಾಗದೇ ಉಳಿದಿರುವ ಹಣವನ್ನು ಪಾವತಿಸುವ ವ್ಯವಸ್ಥೆ ಮಾಡುತ್ತೇನೆ. ನೀವು ನಿಮ್ಮ ಹೋರಾಟವನ್ನು ಮುಕ್ತಾಯಗೊಳಿಸಿರಿ" ಎಂದು ಮನವಿಮಾಡಿದರು.


ಧರಣಿ ನಿರತರು ಸ್ಪಂಧಿಸದಿರುವುದನ್ನು ಗಮನಿಸಿ ಶಾಸಕರು ಅಲ್ಲಿಂದ ತೆರಳಿದರು. ಧರಣಿ ಮುಂದುವರೆಯಿತು. ಆ ಸಂದರ್ಭದಲ್ಲಿ ಮಾತನಾಡಿದ ನಿತ್ಯಾನಂದಸ್ವಾಮಿ ಅವರು "ಕಾಂಗ್ರೆಸ್ ಸರ್ಕಾರದಲ್ಲಿ ಫೈಲುಗಳು ನಾಪತ್ತೆಯಾಗುವುದು ಹೊಸದೇನಲ್ಲ. ಕೇಂದ್ರದಲ್ಲಿ ದೊಡ್ಡ ಕೋಲಾಹಲವನ್ನೇ ಉಂಟುಮಾಡಿದ ಕಾಂಗ್ರೆಸ್ ಸರ್ಕಾರದ ಕಲ್ಲಿದ್ದಲು ಹಗರಣದ ಫೈಲುಗಳು ಇದೇ ರೀತಿ ನಾಪತ್ತೆಯಾಗಿವೆ" ಎಂದರು. ಧರಣಿ ಸಂಜೆವರೆಗೂ ನಡೆಯಿತು. ಈ ನಡುವೆ ಫಲಾನುಭವಿಗಳ ಪಟ್ಟಿಯನ್ನು ಪಡೆಯಲಾಯಿತು. ಇದಕ್ಕೂ ಮೊದಲು ಫಲಾನುಭವಿಗಳ ಯಾದಿಯನ್ನು ಕೊಡಲು ಅಧಿಕಾರಿಗಳು ಒಪ್ಪಿರಲಿಲ್ಲ. ಯಾದಿಯಲ್ಲಿರುವ ಹೆಸರುಗಳನ್ನು ಬಹಿರಂಗವಾಗಿ ಓದಿ ಕೈ ಬಿಟ್ಟು ಹೋದ ಅರ್ಜಿದಾರರ ಹೆಸರುಗಳನ್ನು ಸೇರಿಸಲಾಯಿತು. 15 ದಿನಗಳ ಒಳಗಾಗಿ ಫಲಾನುಭವಿಗಳಿಗೆ ಹಣ ಸಂದಾಯ ಮಾಡದೇ ಹೋದಲ್ಲಿ ಇನ್ನೂ ತೀವ್ರವಾದ ಚಳುವಳಿಯನ್ನು ಹೂಡಲಾಗುವುದು ಎಂದು ಎಚ್ಚರಿಸಿ ಮುತ್ತಿಗೆಯನ್ನು ಹಿಂತೆಗೆದುಕೊಳ್ಳಲಾಯಿತು. ಕೃಷಿ ಕೂಲಿಕಾರರ ಸಂಘದ ತಾಲೂಕ ಅಧ್ಯಕ್ಷರಾದ ಭೀಮಣ್ಣ ಭೋವಿ, ಉಪಾಧ್ಯಕ್ಷ ಬಸವರಾಜ ಧಾರವಾಡ, ಕಾರ್ಯದರ್ಶಿ ಚಂದ್ರಶೇಖರ್ ಕೆಳಗಿನಮನಿ, ನ್ಯಾಸರ್ಗಿಯ ಹನುಮಂತಪ್ಪ ಭೋವಿ, ಚಿಗಳ್ಳಿಯ ಭೀಮಣ್ಣ ನಿಂಬಾಯಿ, ಚವಡಳ್ಳಿಯ ಸರೋಜ ಸಿಗನಳ್ಳಿ ಕಲ್ಲಹಕ್ಕಲ ಭೂತೇಶ್ ಚಿತ್ರಗಾರ್, ಅಂದಲಗಿಯ ಶಿವಾನಂದ ದಿಡಗೂರ ಮೊದಲಾದವರು ಚಳುವಳಿಯ ಮುಂದಾಳತ್ವ ವಹಿಸಿದ್ದರು.

ವರದಿ : ಬಸವರಾಜ ಧಾರವಾಡ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮೂಢನಂಬಿಕೆ ವಿರೋಧಿ ಹೋರಾಟಗಾರ ಡಾ. ನರೇಂದ್ರ ದಾಬೋಲ್ಕರ್ ಹತ್ಯೆ ಖಂಡನೆ

ಮೂಢನಂಬಿಕೆಗಳ ವಿರೋಧಿ ಹೋರಾಟಗಾರ ಡಾ. ನರೇಂದ್ರ ದಾಬೋಲ್ಕರ್ ಹತ್ಯೆಯನ್ನು ಖಂಡಿಸಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಸಮುದಾಯ-ಕರ್ನಾಟಕ, ಕರ್ನಾಟಕ ವಿಚಾರವಾದಿಗಳ ಸಂಘಗಳು ಜಂಟಿಯಾಗಿ ಸಾರ್ವಜನಿಕ ಶ್ರಧ್ಧಾಂಜಲಿ ಸಭೆಯೊಂದನ್ನು ಬೆಂಗಳೂರಿನ ಆಗಸ್ಟ್ 21, 2013 ಸಂಜೆ ಸಂಘಟಿಸಿದ್ದವು.



ನೀವು ಹೂವುಗಳನ್ನು ಕಿತ್ತುಹಾಕಬಹುದು. ಆದರೆ ಮತ್ತೆ ಹೂವು ಚಿಗುರುವ ವಸಂತವನ್ನಲ್ಲ.
ವ್ಯಕ್ತಿಗಳನ್ನು ಕೊಲ್ಲಬಹುದು. ಆದರೆ ಅವರು ಬಿತ್ತಿದ ಯೋಚನೆಗಳನ್ನು ಕೊಲ್ಲಲಾಗದು.

-ಚೆ ಗವೆರಾ

ಅವರ ಪ್ರಸಿದ್ಧ ಈ ಹೇಳಿಕೆಯನ್ನು ಅಲ್ಲಿ ನೆನಪಿಸಿಕೊಳ್ಳಲಾಯಿತು. ಅದು ಬೆಂಗಳೂರಿನ ಬನಶಂಕರಿ ಎರಡನೇ ಹಂತದ ಬಿಡಿಎ ಸಂಕೀರ್ಣದ ಬಳಿಯ ಜಾಗ.

ಪುಣೆಯಲ್ಲಿ ಹಾಡು ಹಗಲಲ್ಲೇ ಡಾ. ನರೇಂದ್ರದಾಬೋಲ್ಕರ್ ಕೊಲೆ ಮಾಡಲಾಗಿದೆ. ಪುಣೆಯ ಪ್ರಸಿದ್ಧ ಶನಿವಾರ ಪೇಟೆ-ಯ ಹತ್ತಿರದ ಓಂಕಾರೇಶ್ವರ ಸೇತುವೆ ಬಳಿ ಇಬ್ಬರು ಯುವಕರು ಮೋಟಾರ್ ಸೈಕಲಿನ ಮೇಲೆ ಬಂದು ಹತ್ತಿರದಿಂದ ಗುಂಡಿಟ್ಟು ಕೊಂದಿದ್ದಾರೆ. ಮೂಢನಂಬಿಕೆಗಳ ವಿರುದ್ಧ ಹೋರಾಟಕ್ಕೆ 1980ರ ದಶಕದಿಂದಲೇ ಅವರು ತಮ್ಮ ಜೀವನವನ್ನು ಮುಡಿಪಾಗಿಸಿದ್ದರು. ಮಹಾರಾಷ್ಟ್ರದಲ್ಲಿ ಮೂಢನಂಬಿಕೆಗಳ ವಿರುದ್ಧ ಚಳುವಳಿಯ ಮಂಚೂಣಿಯಲ್ಲಿದ್ದ 68 ವರ್ಷದ ಡಾ. ದಾಬೋಲ್ಕರ್ 'ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನ ಸಮಿತಿ'ಯ ಸ್ಥಾಪಕರಾಗಿದ್ದರು.

ಸತಾರಾದಲ್ಲಿ ದೊಡ್ಡ ಕುಟುಂಬದಲ್ಲಿ ಜನಿಸಿದ ದಾಬೋಲ್ಕರ್ ವೃತ್ತಿಯಲ್ಲಿ ವೈದ್ಯರಾಗಿದ್ದು ಒಂದು ದಶಕದ ಕಾಲ ವೈದ್ಯಕೀಯ ಸೇವೆಯ ನಂತರ ಸಾಮಾಜಿಕ ಸೇವೆಗೆ ತಮ್ಮನ್ನು ತೊಡಗಿಸಿಕೊಂಡರು. ಮೊದಲಿಗೆ ಅವರು ಬಾಬಾ ಅದವ್ ಅವರ 'ಒಂದು ಹಳ್ಳಿ ಒಂದು ಬಾವಿ' ಎಂಬ ಸಾಮಾಜಿಕ ನ್ಯಾಯದ ಚಳುವಳಿಯಲ್ಲಿ ಕೆಲಸ ಮಾಡಿದರು. ಅಂದರೆ ದಲಿತರಿಗೆ ಊರಿನ ಬಾವಿಯಿಂದ ನೀರು ಸೇದುವ ಸಮಾನ ಅವಕಾಶಕ್ಕಾಗಿ ನಡೆದ ಚಳುವಳಿಯಲ್ಲಿ ಪಾಲ್ಗೊಂಡರು. 1983ರ ಹೊತ್ತಿಗೆ ವಿವಿಧ ರೋಗಗಳಿಗೆ 'ದಿವ್ಯ ಔಷಧಿ'ಗಳನ್ನು ಕೊಟ್ಟು ಗುಣ ಮಾಡುತ್ತೇವೆ ಎಂದು ಮೋಸ ಮಾಡುವ ಶಾಂತ್ರಿಕರು ಮತ್ತು 'ದೇವ ಮಾನವ'ರನ್ನು ಬಯಲಿಗೆಳೆಯುವ ಚಳುವಳಿ ಆರಂಭಿಸಿದರು. 1989ರ ಹೊತ್ತಿಗೆ ಅದ-ಕ್ಕೊಂದು ಸಂಘಟನಾ ಸ್ವರೂಪ ಕೊಟ್ಟು 'ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಮಿತಿ' ಸ್ಥಾಪಿಸಿದರು.

ಅವರ ಚಳುವಳಿ ಸ್ವಾಭಾವಿಕವಾಗಿಯೇ ಸಾಮಾಜಿಕವಾಗಿ ರಾಜಕೀಯವಾಗಿ ಪ್ರಬಲರಾಗಿದ್ದ 'ದೇವ ಮಾನವ'ರನ್ನು ಕೆರಳಿಸಿತು. ಅವರು ನಿರಂತರವಾಗಿ ಬೆದರಿಕೆಗಳಡಿಯಲ್ಲೇ ತಮ್ಮ ಕೆಲಸ ಮುಂದುವರೆಸಿದರು. ನರೇಂದ್ರ ಮಹಾರಾಜ್ ಮತ್ತು ನಿರ್ಮಲಾ ದೇವಿ ಎಂಬ 'ದೇವ ಮಾನವ'ರ ವಿರುದ್ಧ ಅವರ ಚಳುವಳಿಯಲ್ಲಿ, ಅವರು ಮತ್ತು ಅವರ ಸಂಘಟನೆಯ ಸದಸ್ಯರು ಸಾವಿರಾರು 'ಭಕ್ತ'ರನ್ನು ಎದುರಿಸಬೇಕಾಯಿತು. ಅಹ್ಮದ್ ನಗರದ ಶನಿ ಶಿಗ್ನಾಪುರ ದೇವಸ್ಥಾನಕ್ಕೆ ಮಹಿಳೆಯರಿಗೆ ಪ್ರವೇಶ ಚಳುವಳಿ, ಅವರು ಸಂಘಟಿಸಿದ ದೊಡ್ಡ ಚಳುವಳಿಗಳಲ್ಲಿ ಒಂದಾಗಿತ್ತು.

ಅವರ ಚಳುವಳಿ ವಿರುದ್ಧ ಬೆದರಿಕೆಗಳು ಹಿಂಸಾತ್ಮಕ ದಾಳಿಗಳು ಹೊಸತಲ್ಲ. ಜನತೆಯಲ್ಲಿ ಮೂಡನಂಬಿಕೆಗಳನ್ನೇ ಬಂಡವಾಳ ಮಾಡಿಕೊಂಡಿರುವ ಕಪಟ ಧಾರ್ಮಿಕ ಸಂಘಟನೆಗಳಲ್ಲದೆ, ಹಲವು ಬಲಪಂಥೀಯ ಸಂಘಟನೆಗಳು ಅವರ ಚಳುವಳಿಯನ್ನು ದುರ್ಬಲಗೊಳಿಸಲು ಸದಾ ಪ್ರಯತ್ನಿಸುತ್ತಿದ್ದವು. ಧಾರ್ಮಿಕ ಆಚರಣೆ,



ಸಂಪ್ರದಾಯಗಳಿಗೆ ಅಡ್ಡಿ ಪಡಿಸುತ್ತಿದ್ದಾರೆ ಎಂಬ ಆರೋಪ ಮಾಡಿ ಅವರನ್ನು ವಿರೋಧಿಸುತ್ತಿದ್ದವು. ಅವರ ಯಾವ ಪತ್ರಿಕಾಗೋಷ್ಠಿ ಸಹ ಇಂತಹ ಸಂಘಟನೆಗಳ ಬುಡಮೇಲು ಚಟುವಟಿಕೆ ಇಲ್ಲದೆ ನಡೆಯುತ್ತಿರಲಿಲ್ಲ.

ಕಳೆದ ಕೆಲವು ವರ್ಷಗಳಿಂದ ಅವರು ರೂಪಿಸಿಕೊಟ್ಟ 'ಮಂತ್ರ-ತಂತ್ರಗಳ ಮತ್ತು ಮೂಢನಂಬಿಕೆಗಳ ವಿರುದ್ಧದ' ಮಸೂದೆಯೊಂದರ ಕರಡು ಮಹಾರಾಷ್ಟ್ರ ವಿಧಾನಸಭೆಯ ಮುಂದೆ ಇದೆ. ವಿಧಾನಸಭೆಯ ಕಳೆದ ಏಳು ಅಧಿವೇಶನಗಳಿಂದ ಅದರ ಮೇಲೆ ಯಾವುದೇ ಚರ್ಚೆ ಇಲ್ಲದೆ ಅಲ್ಲೇ ಬಿದ್ದಿದೆ. ಈ ಮಸೂದೆಯನ್ನು ಪಾಸು ಮಾಡಿಸಿ ಕಾನೂನು ಮಾಡುವುದು ಡಾ. ದಾಬೋಲ್ಕರ್ ಅವರ ಕನಸುಗಳಲ್ಲಿ ಒಂದಾಗಿತ್ತು. ಅದಕ್ಕಾಗಿ ಅವರು ವ್ಯಾಪಕ ಪ್ರಚಾರ ನಡೆಸಿದ್ದರು. ಸ್ವಾಭಾವಿಕವಾಗಿಯೇ ಮೇಲೆ ಹೇಳಿದ ಸಂಘಟನೆಗಳು ಮತ್ತು ಪಕ್ಷಗಳು ಅವರ ಈ ಮಸೂದೆಯನ್ನೂ ಬಲವಾಗಿ ವಿರೋಧಿಸುತ್ತಿದ್ದವು.

ಭಾರತದ ಹಲವು ಪ್ರಾಂತ್ಯಗಳಲ್ಲಿ ಮೂಢನಂಬಿಕೆಯ ವಿರುದ್ಧ ಹೋರಾಟ ಮಾಡುತ್ತಿರುವ ಡಾ.ದಾಬೋಲ್ಕರ್ ರಂತಹ ವ್ಯಕ್ತಿಗಳಿಗೆ ತೀವ್ರ ಬೆದರಿಕೆ ಒಡ್ಡಲಾಗಿದೆ. ಅವರಂತೆ ಹಲವರನ್ನು ಸದಾ ಕಾಲಕ್ಕೆ ಬಾಯಿ ಮುಚ್ಚಿಸುವ ಪ್ರಯತ್ನ ಮಾಡಲಾಗಿದೆ. ಮೂಢನಂಬಿಕೆಯ ವಿರುದ್ಧ ಹೋರಾಟಕ್ಕೂ ಚಾರ್ವಾಕನಿಂದ ಹಿಡಿದು ಅದರದೇ ಆದ ದೀರ್ಘ ಸಂಪ್ರದಾಯ ಇದೆ. ಕರ್ನಾಟಕದಲ್ಲೂ 12ನೇ ಶತಮಾನದ ಶರಣರಿಂದ ಪ್ರಾರಂಭಿಸಿ ದಾಸರು, ಸೂಫಿಗಳು, ಸಮಾಜಸುಧಾರಕರು ಹಾಗೂ ಕಳೆದ ದಶಕಗಳಿಂದ ಸಕ್ರಿಯವಾಗಿರುವ ಹಲವು ಚಳುವಳಿಗಳು ಇಂತಹ ದೀರ್ಘ ಸಂಪ್ರದಾಯದ ಭಾಗವಾಗಿದ್ದು ಬೆದರಿಕೆ ಎದುರಿಸುತ್ತಿವೆ.

ಮೂಢನಂಬಿಕೆಗಳನ್ನು ಹೋಗಲಾಡಿಸಿ ವೈಜ್ಞಾನಿಕ ಮನೋಭಾವ ರೂಢಿಸುವುದು ಸರ್ಕಾರದ ಕರ್ತವ್ಯ ಎಂಬ ಸಂವಿಧಾನದ ಆಶಯವನ್ನು ನಮ್ಮ ದೇಶದ ಕೇಂದ್ರ-ರಾಜ್ಯ ಸರ್ಕಾರಗಳು ಲೆಕ್ಕಿಸಿಲ್ಲ. ಮಾತ್ರವಲ್ಲ, ಈ ಆಶಯವನ್ನು ಜಾರಿ ಮಾಡಲು ಪ್ರಯತ್ನಿಸುತ್ತಿರುವ ವ್ಯಕ್ತಿಗಳು ಮತ್ತು ಸಂಘಟನೆಗಳ ಮೇಲಿನ ದಾಳಿಯ ವಿರುದ್ಧ ಕಿರುಬೆರಳನ್ನೂ ಎತ್ತಿಲ್ಲ. ಬದಲಾಗಿ ಇಂತಹ ವ್ಯಕ್ತಿಗಳು ಮತ್ತು ಸಂಘಟನೆಗಳ ಮೇಲೆ 'ಧಾರ್ಮಿಕ ಭಾವನೆಗಳನ್ನು ನೋಯಿಸಿದ್ದಕ್ಕೆ', 'ಸಮುದಾಯಗಳ ನಡುವೆ ಸಾಮರಸ್ಯ ಕೆಡಿಸಿದ್ದಕ್ಕೆ' ಕಾನೂನು ಕ್ರಮ ಜರುಗಿಸಿದ್ದೂ ಇದೆ. ಇತ್ತೀಚೆಗೆ 'ಪವಾಡ ರಹಸ್ಯ ಬಯಲು' ಕಾರ್ಯಕ್ರಮ ನಡೆಸಿದ ಕಾರ್ಯಕರ್ತರ ಬಂಧನ ಇಂತಹ ಒಂದು ಉದಾಹರಣೆ. ಇಂದಿನ ಆಳುವವರಿಗೆ ಅವರ ನೀತಿಗಳಿಂದ ಬಾಧಿತರಾದ ಆಕ್ರೋಶಕ್ಕೊಳಗಾದ ಜನ ಇಂತಹ ಮೂಢನಂಬಿಕೆಗಳಿಗೆ 'ದೇವತಾ ಮಾನವ'ರಿಗೆ ಶರಣು ಹೋಗುವುದು ಬೇಕಾಗಿದೆ. ಅವರು ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡರೆ ತಮ್ಮ ನೀತಿಗಳ ವಿರುದ್ಧ ತಿರುಗಿ ಬೀಳಬಹುದು ಎಂಬ ಆತಂಕ ಅವರಿಗೆ ಸದಾ ಇರುತ್ತದೆ.

ಇಷ್ಟಾದರೂ ಮೂಢನಂಬಿಕೆಯ ವಿರುದ್ಧ ಹೋರಾಟ ನಿಂತಿಲ್ಲ. ನಿಲ್ಲುವುದೂ ಇಲ್ಲ. ಚಳುವಳಿ ಸತ್ತಿಲ್ಲ. ಸಾಯುವುದು ಇಲ್ಲ. ಡಾ. ದಾಬೋಲ್ಕರ್ ಅವರ ಬಲಿದಾನ ವ್ಯರ್ಥವಾಗಲು ಬಿಡುವುದಿಲ್ಲ ಎಂದು ಶ್ರ ಧ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡವರು ಘೋಷಿಸಿದರು. **ಸಭೆಯಲ್ಲಿ ಮಹಾರಾಷ್ಟ್ರ ಸರ್ಕಾರ-ಕ್ಕೆ ಈ ಕೆಳಗಿನ ಹಕ್ಕೊತ್ತಾಯ ಮಾಡಲಾಯಿತು.**

* ತಕ್ಷಣವೇ ತನಿಖೆ ನಡೆಸಿ ಅವರ ಕೊಲೆಗಡುಕರನ್ನು ಬಂಧಿಸಬೇಕು. ಅವರ ಕೊಲೆಯ ಹಿಂದಿರುವ ಕರಾಳ ಶಕ್ತಿಗಳನ್ನು ಬಯಲಿಗೆ ತರಬೇಕು!
* ಡಾ. ದಾಬೋಲ್ಕರ್ ಅವರಿಗೆ ಶ್ರದ್ಧಾಂಜಲಿಯಾಗಿ ಅವರು ಸಿದ್ಧ ಪಡಿಸಿದ ಮತ್ತು ವಿಧಾನ ಸಭೆಯ ಮುಂದಿರುವ 'ಮೂಢನಂಬಿಕೆಗಳ ವಿರುದ್ಧ ಮಸೂದೆಯನ್ನು ಚರ್ಚೆಗೆ ಎತ್ತಿಕೊಂಡು ಕಾನೂನು ಮಾಡಬೇಕು!
* ಕರ್ನಾಟಕದಲ್ಲೂ ಡಾ.ದಾಬೋಲ್ಕರ್ ರೂಪಿಸಿದ ಮಾದರಿಯ ಕಾನೂನು ಜಾರಿಗೆ ತರಬೇಕು.
* ಮೂಢನಂಬಿಕೆಗಳಿಗೆ ಕುಮ್ಮಕ್ಕು ಕೊಡುವ ಕರಾಳ ಶಕ್ತಿಗಳನ್ನು ಬಯಲಿಗೆಳೆದು, ಅವರ ಕರಾಮತ್ತುಗಳಿಗೆ ಪ್ರತಿರೋಧ ಒಡ್ಡುತ್ತೇವೆ.

ಎಂದು ಸಹ ಈ ಸಂದರ್ಭದಲ್ಲಿ ಪ್ರತಿಜ್ಞೆ ಮಾಡಲಾಯಿತು.

ಸಭೆಯನ್ನುದ್ದೇಶಿಸಿ ಖ್ಯಾತ ವಿಚಾರವಾದಿ ನರೇಂದ್ರ ನಾಯಕ್, ದಾಬೋಲ್ಕರ್‌ರವರ ಸಹವರ್ತಿ ಅಂಧಶ್ರದ್ಧೆ ವಿರೋಧಿ ಕಾರ್ಯಕರ್ತ ಪುಣೆಯ ಸುದೇಶ್ ಗೌಡೆ ರಾವ್, ಬಿಹಾರದ ಮೋತಿಹಾರಿಯ ಜನ ವಿಜ್ಞಾನ ಕಾರ್ಯಕರ್ತೆ ಶ್ರೀಮತಿ ಕೀರ್ತಿ, ಪತ್ರಕರ್ತೆ ಗೌರಿ ಲಂಕೇಶ್, ಚಿಂತಕ ನಗರಗೆರೆ ರಮೇಶ್, ಸಮುದಾಯ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಸಹ ಕಾರ್ಯದರ್ಶಿ ವಿಮಲಾ. ಕೆ.ಎಸ್, ಮುಂತಾದವರು ಮಾತನಾಡಿ ಹತ್ಯೆಯನ್ನು ಖಂಡಿಸಿದರು. ದೇಶದ ಸಂವಿಧಾನದ ವೈಜ್ಞಾನಿಕ ಆಶಯಗಳಿಗೆ ವ್ಯತಿರಿಕ್ತವಾಗಿ ಅಂಧಶ್ರದ್ಧೆಯನ್ನು ಬಿತ್ತುತ್ತಿರುವ ಶಕ್ತಿಗಳ ವಿರುದ್ಧ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಪ್ರಗತಿಪರರೆಲ್ಲರೂ ಒಟ್ಟಾಗುವ ಅಗತ್ಯವನ್ನು ಒತ್ತಿ ಹೇಳಲಾಯಿತು. ಇಂತಹ ಘಟನೆಗಳನ್ನು ಸರ್ಕಾರಗಳು ಹಗುರವಾಗಿ ಭಾವಿಸದೇ ಕಠಿಣ ಕ್ರಮಕ್ಕೆ ಮುಂದಾಗಬೇಕು. ಮತ್ತು ಸಂವಿಧಾನ ವಿಧಿಸಿದಂತೆ ವೈಜ್ಞಾನಿಕ ವೈಚಾರಿಕ ಮನೋಭಾವ ಬೆಳೆಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕೆಂದು ಆಗ್ರಹಿಸಲಾಯಿತು. ಸಮುದಾಯದ ರಾಜ್ಯ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಸಮುದಾಯ ರಾಜ್ಯ ಸಮಿತಿ ಸದಸ್ಯ ಶ್ರೀ ಶೈಲ ಘೂಳಿ ವಂದನಾರ್ಪಣೆ ಸಲ್ಲಿಸಿದರು.

'ಇನ್ನು ಮುಂದೆ ಯಾರೂ ಹಸಿದ ಹೊಟ್ಟೆಯಲ್ಲಿ ಮಲಗೋದಿಲ್ಲ'

ನವ-ಉದಾರವಾದಿ ಪಂಡಿತರುಗಳ ಟೀಕೆಗಳ ನಡುವೆಯೇ ಯುಪಿಎ-2 ಜಾಹೀರಾತು ಆರಂಭ


ಆಗಸ್ಟ್ 26ರಂದು ಲೋಕಸಭೆ ಒಂದು ದಿನದ ಚರ್ಚೆಯ ನಂತರ ಆಹಾರ ಭದ್ರತಾ ಮಸೂದೆಯನ್ನು ಅಂಗೀಕರಿಸಿತು. ಈಗಾಗಲೇ ಈ ಪತ್ರಿಕೆಯಲ್ಲಿ ವಿಶ್ಲೇಷಿಸಿರುವಂತೆ ಭಾರತದಲ್ಲಿನ ಬಡತನದ ಹಿನ್ನೆಲೆಯಲ್ಲಿ ಇದೊಂದು ಅಸಮರ್ಪಕವಾದರೂ ಅಗತ್ಯವಾದ ಕ್ರಮ. ಪ್ರಭುತ್ವ ತನ್ನ ಜವಾಬ್ದಾರಿಗಳಿಂದ, ಅದರಲ್ಲೂ ಆರ್ಥಿಕ ರಂಗದಲ್ಲಿನ ಜವಾಬ್ದಾರಿಗಳಿಂದ ಹಿಂದೆ ಸರಿಯಬೇಕೆಂಬ ನವ-ಉದಾರವಾದಿ ಧೋರಣೆಗಳಿಗೆ ಬದ್ಧವಾದ ಒಂದು ಸರಕಾರ ಕೊನೆಗೂ ತಾನು ವಚನವಿತ್ತ ನಾಲ್ಕು ವರ್ಷಗಳ ನಂತರವಾದರೂ ಇಂತಹ ಒಂದು ಕಾನೂನು ತಂದಿರುವುದು, ತನ್ನ ಪ್ರಜೆಗಳ ಕನಿಷ್ಟ ಪೌಷ್ಟಿಕತೆಯ ಅಗತ್ಯಗಳನ್ನು ಪೂರೈಸುವುದು ಪ್ರಭುತ್ವದ ಜವಾಬ್ದಾರಿ ಎಂಬುದನ್ನು ಒಪ್ಪಿಕೊಂಡಂತಾಗಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೇಳಿರುವಂತೆ ಈ ದೃಷ್ಟಿಯಿಂದ ಈ ಮಸೂದೆಯ ಅಂಗೀಕಾರ ಸ್ವಾಗತಾರ್ಹ ಕಟ್ಟಾ ನವ-ಉದಾರವಾದಿಗಳು ಈ ಕಾನೂನನ್ನು ವಿರೋಧಿಸುತ್ತಿರುವುದನ್ನು, ಕನಿಷ್ಟ ಇದು ಇಂತಹ ಕಾನೂನು ತರಲು ಸಕಾಲವಾಗಿರಲಿಲ್ಲ ಎಂದಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಕೆಲವರಂತೂ ರೂಪಾಯಿ ವಿಪರೀತ ಪತನ ಕಾಣಲು ಇದು ತಕ್ಷಣದ ಕಾರಣ ಎಂದೂ ಟೀಕಿಸಿದ್ದಾರೆ. ಯುಪಿಎ-2 ಸರಕಾರದ ಪ್ರಧಾನಿಗಳಾಗಲೀ, ಹಣಕಾಸು ಮಂತ್ರಿಗಳಾಗಲೀ ಈ ಟೀಕೆಗೆ ಉತ್ತರ ಕೊಡಲು ಪ್ರಯತ್ನಿಸದಿರುವುದನ್ನೂ ಗಮನಿಸಬೇಕು.

ಯುಪಿಎ ಸರಕಾರ 5ಕೆ.ಜಿ.ಯ ಬದಲು 7ಕೆ.ಜಿ. ಧಾನ್ಯಗಳನ್ನು 2ರೂ.ಗೆ ಮೀರದ ದರಗಳಲ್ಲಿ ಕೊಡಬೇಕು ಎಂಬ ಎಡಪಕ್ಷಗಳ ತಿದ್ದುಪಡಿಯನ್ನು ಸ್ವೀಕರಿಸಲಿಲ್ಲ. ಇದರಿಂದಾಗಿ ಹಲವು ಕುಟುಂಬಗಳು ಈಗ ಪಡೆಯುವುದಕ್ಕಿಂತ ಕಡಿಮೆ ಧಾನ್ಯಗಳನ್ನು ಪಡೆಯುವ ಪರಿಸ್ಥಿತಿಯೂ ಉಂಟಾಗಿದೆ. ಸಕ್ಕರೆ, ಎಣ್ಣೆ, ಬೇಳೆ ಕಾಳುಗಳೂ ಸಬ್ಸಿಡಿ ದರಗಳಲ್ಲಿ ಸಿಗುವಂತೆ ಮಾಡಬೇಕು ಎಂಬ ಬೇಡಿಕೆಯನ್ನೂ ಯುಪಿಎ-2 ಸರಕಾರ ಸ್ವೀಕರಿಸಿಲ್ಲ.

ಆದರೆ, ಗರ್ಭಿಣಿ ಮಹಿಳೆಯರ, ಹಾಲುಣಿಸುವ ತಾಯಂದಿರ ಮತ್ತು ಮಕ್ಕಳ ಅಗತ್ಯಗಳನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸುವ ತಿದ್ದುಪಡಿಗಳನ್ನು ಸರಕಾರ ಅಂಗೀಕರಿಸಿರುವುದು ಸ್ವಾಗತಾರ್ಹ ಎಂದು ಜನವಾದಿ ಮಹಿಳಾ ಸಂಘಟನೆ ಹೇಳಿದೆ. ಅದೇ ರೀತಿ, ಐಸಿಡಿಎಸ್, ಮಧ್ಯಾಹ್ನದ ಊಟ ಮುಂತಾದವುಗಳಲ್ಲಿ 'ಊಟ' ಎಂದರೆ ಬಿಸಿ, ಬೇಯಿಸಿದ ಆಹಾರ ಎಂಬ ನಿರೂಪಣೆಯ ಬದಲು 'ಪ್ಯಾಕೇಜ್ ಆಹಾರ' ಎಂಬುದನ್ನೂ ಸೇರಿಸಿರುವುದನ್ನು ಕೈಬಿಡುವ ತಿದ್ದುಪಡಿಯನ್ನೂ ಸ್ವೀಕರಿಸಲಾಗಿದೆ.

"ಈಗಿರುವ ಸ್ಕೀಮುಗಳಲ್ಲಿ ಬಹಳಷ್ಟು ದೋಷಗಳಿವೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಈ ಕಾನೂನಿನ ಜಾರಿಯಲ್ಲಿ ಪ್ರಾಮಾಣಿಕತೆ ಮತ್ತು ಜವಾಬುದಾರಿಕೆಯನ್ನು ತೋರದಿದ್ದರೆ ಅದು ಜನತೆಗೆ ಒಂದು ಗಂಭೀರ ಅನ್ಯಾಯವಾಗುತ್ತದೆ" ಎಂದು ಚರ್ಚೆಯ ಸಂದರ್ಭದಲ್ಲಿ ಯುಪಿಎ ಅಧ್ಯಕ್ಷರೇ ಹೇಳಬೇಕಾಗಿ ಬಂದಿರುವುದು ಗಮನಾರ್ಹ.

ಯುಪಿಎ-2 ಸರಕಾರದ ಆಳ್ವಿಕೆಯ ಉಳಿದ ಅವಧಿ ಕೇವಲ 8 ತಿಂಗಳಿರುವಾಗ ಈ ಕಾನೂನನ್ನು ತರುವ ಪ್ರಯತ್ನ ಪ್ರಾಮಾಣಿಕತೆಯನ್ನು ಸೂಚಿಸುತ್ತದೋ ಗೊತ್ತಿಲ್ಲ. ಸಾರ್ವತ್ರಿಕ ಚುನಾವಣೆಗಳ ಮೇಲೆ ಕಣ್ಣಿಟ್ಟು ಇದನ್ನು ತರಲಾಗಿದೆ ಎಂಬುದರಲ್ಲಿಯೂ ಸಂದೇಹವಿಲ್ಲ. 'ಇನ್ನು ಮುಂದೇ ಯಾರೂ ಹಸಿದ ಹೊಟ್ಟೆಯಲ್ಲಿ ಮಲಗೋದಿಲ್ಲ' ಎಂಬ 'ಭಾರತ ನಿರ್ಮಾಣ' ಜಾಹೀರಾತುಗಳು ಆಗಲೇ ಪ್ರಕಟವಾಗಿವೆ. ಆದರೆ ರೇಗಾ ಕಾನೂನಿನ ರೀತಿಯಲ್ಲಿ ಇದರ ಚುನಾವಣಾ ಲಾಭ ಪಡೆಯುವುದು ಅಷ್ಟೇನೂ ಸುಲಭವಲ್ಲ ಎಂದು ಕೆಲವು ಕಾಂಗ್ರೆಸ್ ಮುಖಂಡರೇ ಹೇಳುತ್ತಿದ್ದಾರಂತೆ. ಯುಪಿಎ ಅಧ್ಯಕ್ಷರು ತಮ್ಮ ಸರಕಾರ ಒಂದು 'ಸಬಲೀಕರಣದ ಕ್ರಾಂತಿಯನ್ನೇ' ತಂದಿದೆ ಎಂದು ಹೇಳಿಕೊಂಡರೂ, ಇಂತಹ ಅಥವ ಇದಕ್ಕಿಂತ ಉತ್ತಮವಾದ ಯೋಜನೆಗಳು ಈಗಾಗಲೇ 15 ರಾಜ್ಯಗಳಲ್ಲಿ ಇವೆ ಎಂಬುದು ಕಾಂಗ್ರೆಸ್ ಪ್ರಚಾರಕರಿಗೆ ಈ ಬಗ್ಗೆ ಸಂಪೂರ್ಣ ಕೀರ್ತಿಯನ್ನು ಬಾಚಿಕೊಳ್ಳಲು ಇರುವ ದೊಡ್ಡ ಆತಂಕ ಎನ್ನಲಾಗಿದೆ.



ವೇದರಾಜ ಎನ್.ಕೆ.

ಅರಣ್ಯ ಹಕ್ಕು ಕಾನೂನಿನ ಜಾರಿಗೆ ಹಿಂದೇಟು


ಈ ಕಾನೂನು ಯುಪಿಎ ಸರಕಾರ ತಾನು 'ಆಮ್ ಆದ್ಮಿ'-ಪರ ಎಂದು ಪ್ರದರ್ಶಿಸಲು ಬಳಸುವ ಕ್ರಮಗಳಲ್ಲಿ ಒಂದು. ನಿಜ, ಇಂತಹ ಕೆಲವು ಕಾನೂನುಗಳಂತೆ ಇದು ಕೂಡ ಯುಪಿಎ-2 ಸರಕಾರ ಎಡಪಕ್ಷಗಳ ಒತ್ತಡದಿಂದ ತಂದವುಗಳಲ್ಲಿ ಒಂದು, ಅದೇ ರೀತಿ ಯುಪಿಎ-2 ಸರಕಾರ ತಾನೇ ಅದನ್ನು ಬುಡಮೇಲು ಮಾಡುತ್ತಿರುವ ಕ್ರಮಗಳಲ್ಲಿ ಕೂಡ ಒಂದು.

ಅರಣ್ಯ ಭೂಮಿ ಕುರಿತಂತೆ ಬುಡಕಟ್ಟು ಜನಗಳ, ಅರಣ್ಯವಾಸಿಗಳ ಹಕ್ಕುಗಳಿಗೆ ಮಾನ್ಯತೆ ನೀಡಿದರೆ ದೊಡ್ಡ ವ್ಯವಹಾರಸ್ಥರ ಲೂಟಿಗಳನ್ನು ತಡೆಯಬಹುದು. ಈ ಕಾರಣಕ್ಕಾಗಿಯೇ ಎಡಪಕ್ಷಗಳು ಈ ಕಾನೂನು ತರಲು ಒತ್ತಡ ಹಾಕಿದ್ದವು. ಆದರೆ ಯುಪಿಎ-2 ಸರಕಾರ ಅದೇ ಕಾರಣಕ್ಕಾಗಿ ಗಣಿಗಾರಿಕೆ ಮುಂತಾದ ಹೆಸರಿನಲ್ಲಿ ಈಗ ಈ ಕಾನೂನನ್ನು ಜಾರಿಗೆ ತರಲು ಹಿಂದೇಟು ಹಾಕುತ್ತಿದೆ, ದೇಶೀ-ವಿದೇಶಿ ಕಾರ್ಪೊರೇಟ್‌ಗಳ ಹಿತದೃಷ್ಟಿಯಿಂದ ಅದನ್ನು ಬುಡಮೇಲು ಮಾಡಲೂ ಅದು ಹೇಸುತ್ತಿಲ್ಲ ಎಂದು ಕಾಣಬರುತ್ತಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೋ ಸದಸ್ಯರಾದ ಬೃಂದಾ ಕಾರಟ್ ಪ್ರಕಾರ ವಿವಿಧ ರಾಜ್ಯಸರಕಾರಗಳಿಗೆ ಅರಣ್ಯ ಭೂಮಿಯ ಪಟ್ಟಾಕ್ಕಾಗಿ 32 ಲಕ್ಷ ಅರ್ಜಿಗಳ ಸಲ್ಲಿಕೆಯಾಗಿದೆ. ಅವುಗಳಲ್ಲಿ 15.8ಲಕ್ಷ, ಅಂದರೆ ಸುಮಾರು ಅರ್ಧದಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಗಮನಿಸಬೇಕಾದ ಸಂಗತಿಯೆಂದರೆ, ತ್ರಿಪುರಾದಂತಹ ಸಣ್ಣ ರಾಜ್ಯದಲ್ಲಿಯೇ 1.17 ಲಕ್ಷ ಮಂದಿಗೆ ಅರಣ್ಯ ಭೂಮಿಯ ಪಟ್ಟಾ ನೀಡಲಾಗಿದೆ. ಅಲ್ಲಿ ಒಂದೇ ಒಂದು ಅರ್ಜಿಯನ್ನೂ ತಿರಸ್ಕರಿಸಲಾಗಿಲ್ಲ.

ಬುಡಕಟ್ಟು ಜನಗಳಲ್ಲದೆ, ಇನ್ನೂ ಹಲವು ಬಡವಿಭಾಗಗಳ ಜನ ಅರಣ್ಯಗಳಲ್ಲಿ ಬಹುಕಾಲದಿಂದ ತಮ್ಮ ಜೀವನಾಧಾರ ಕಂಡುಕೊಂಡಿದ್ದಾರೆ. ಈ ಕಾನೂನಿನ ಪ್ರಕಾರ ಹಕ್ಕನ್ನು ಪಡೆಯಲು ಅವರು 75 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಅಲ್ಲಿ ವಾಸವಿರುವ ದಾಖಲೆಗಳನ್ನು ಸಲ್ಲಿಸಬೇಕು. ಆದರೆ ಇವರಿಗೆ ಆಗಿನ ಬ್ರಿಟಿಶ್ ಸರಕಾರ ಅಂತಹ ಯಾವ ಪಟ್ಟಾವನ್ನೂ ಕೊಟ್ಟಿರಲಿಲ್ಲ. ಆದ್ದರಿಂದ ಇವರ ಬಳಿ ತೋರಿಸಲು ಯಾವ ದಾಖಲೆ-ದಸ್ತಾವೇಜುಗಳೂ ಇಲ್ಲ. ಈ ಬಗ್ಗೆ ಈ ಕಾನೂನಿನಲ್ಲಿ ಸೂಕ್ತ ತಿದ್ದುಪಡಿ ತರಬೇಕೆಂಬ ಒತ್ತಾಯಕ್ಕೆ ಯುಪಿಎ ಸರಕಾರ ಲಕ್ಷ್ಯ ಕೊಡುತ್ತಿಲ್ಲ. ಕಾರಣ ಸ್ಪಷ್ಟ. ಈ

ಪುಟ 15 ಕ್ಕೆ



'ಸಾರ್ವಜನಿಕ ಕಣ್ಮರೆ ವ್ಯವಸ್ಥೆ'ಯಲ್ಲಿ ಆಹಾರ ಮಸೂದೆ ಕೆಲಸ ಮಾಡಬಲ್ಲುದೇ?
-ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯಲ್ಲಿ ಉನ್ನಿಯವರ ವ್ಯಂಗ್ಯ

"ಯಾಕೆ ಮತ್ತೆ-ಮತ್ತೆ ಅತ್ಯಾಚಾರಗಳು ನಡೆಯುತ್ತಿವೆ?"

ಇದು ಮುಂಬಯಿಯಲ್ಲಿ ಒಬ್ಬ ಕರ್ತವ್ಯನಿರತ ಮಹಿಳಾ ಪತ್ರಕರ್ತರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಸುದ್ದಿ ಕೇಳಿದಾಗ ಹಲವರಲ್ಲಿ ಎದ್ದಿರುವ ಪ್ರಶ್ನೆ. ಸ್ವತಃ ದೇಶದ ಸರ್ವೋನ್ನತ ನ್ಯಾಯಾಲಯವೂ ಇದೇ ಪ್ರಶ್ನೆ ಕೇಳಿದೆ. ಹರ್ಯಾಣದಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾಗಿದ್ದ ಶಾಲಾ ಬಾಲಕಿಯೊಬ್ಬಳ ತಂದೆಯ ಅರ್ಜಿಯ ವಿಚಾರಣೆ ನಡೆಯುವ ಸಂದರ್ಭದಲ್ಲಿ, ಆನಂತರವೂ ಮುಂಬೈ ಪ್ರಕರಣದ ವರೆಗೂ ಎಡಬಿಡದೆ ಎಂಬಂತೆ ನಡೆಯುತ್ತಿರುವ ಇಂತಹ ಅತ್ಯಾಚಾರಗಳ, ಅದರಲ್ಲೂ ಸಾಮೂಹಿಕ ಅತ್ಯಾಚಾರಗಳ ಬಗ್ಗೆ ನ್ಯಾಯಾಲಯ ಆತಂಕ ವ್ಯಕ್ತಪಡಿಸುತ್ತ, "ನಮ್ಮ ವ್ಯವಸ್ಥೆಗೆ ಏನಾಗಿದೆ? ಅತ್ಯಾಚಾರದ ಪ್ರಕರಣಗಳಲ್ಲಿ 90ಶೇ. ಏಕೆ ಖುಲಾಸೆಯಾಗುತ್ತಾರೆ?" ಎಂದೂ ಅದು ಪ್ರಶ್ನಿಸಿದೆ, ಅಥವ ಪ್ರಶ್ನಿಸಿಕೊಂಡಿದೆ ಎನ್ನಬಹುದು.

ಪೋಲೀಸ್ ವ್ಯವಸ್ಥೆ ಮತ್ತು ಸರಕಾರ ಭದ್ರತೆಯ ಮೂಲರಚನೆಯನ್ನು ನಿರ್ಮಿಸುವಲ್ಲಿ ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅಪರಾಧಗಳನ್ನು ತಡೆಯಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿರುವುದು ಸ್ವಯಂವೇದ್ಯ. ಇದು ಮತ್ತು ಸ್ಥಳೀಯ ಪೋಲಿಸ್ ಠಾಣೆಗಳಲ್ಲಿ ಇಂತಹ ಹಲವಾರು ಅಪರಾಧಗಳ ಬಗ್ಗೆ ತೋರುವ ನಿರ್ಲಕ್ಷ್ಯದ ಮತ್ತು ಸಂವೇದನಾಶೂನ್ಯ ವರ್ತನೆಗಳು, ಅರ್ಧಂಬರ್ಧ ತನಿಖೆಗಳು ಮತ್ತು ಇಂತಹ ಅಪರಾಧಿಗಳು ಬಹಳಷ್ಟು ಮಂದಿ ಶಿಕ್ಷೆಗೊಳಗಾಗದೆ ತಪ್ಪಿಸಿಕೊಳ್ಳುತ್ತಿರುವುದು ಇಂತಹ ಅಪರಾಧಗಳು ಮತ್ತೆ-ಮತ್ತೆ ನಡೆಯಲು ಕಾರಣ ಎಂದು ಜನವಾದಿ ಮಹಿಳಾ ಸಂಘಟನೆ ಹೇಳಿದೆ.

ಕಳೆದ ವರ್ಷದ ಕೊನೆಯಲ್ಲಿ ದಿಲ್ಲಿಯ ಘೋರ ಸಾಮೂಹಿಕ ಅತ್ಯಾಚಾರ ಪ್ರಕರಣದ ನಂತರ ನಡೆದ ದೇಶವ್ಯಾಪಿ ಪ್ರತಿಭಟನೆಯ ಹಿನ್ನೆಲೆಯಲ್ಲಿ, ವರ್ಮಾ ಸಮಿತಿಯ ಶಿಫಾರಸುಗಳನ್ನು ಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳದೆ ಯುಪಿಎ-2 ಸರಕಾರ ಸುಗ್ರೀವಾಜ್ಞೆಯ ಮೂಲಕ ತಂದ ಕ್ರಮ ಅತ್ಯಂತ ಅಸಮರ್ಪಕ ಎಂಬ ಟೀಕೆ ವ್ಯಾಪಕವಾಗಿ ಬಂದಿತ್ತು. ಸರಕಾರ ಬದಿಗೆ ತಳ್ಳಿದ ಆ ಟೀಕೆಗಳು ಎಷ್ಟೊಂದು ಸರಿಯಾಗಿದ್ದವು ಎಂಬುದನ್ನು ಇಂತಹ ಮತ್ತೆ-ಮತ್ತೆ ಸಂಭವಿಸುತ್ತಿರುವ ದುಷ್ಕೃತ್ಯಗಳು ಮತ್ತೆ-ಮತ್ತೆ ನೆನಪಿಸುತ್ತಿವೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ನೆಗಡಿಯಾದರೆ ಮೂಗು ಕತ್ತರಿಸುವ ಡಾಕ್ಟರುಗಳು!!!

ಪ್ರಾಥಮಿಕ ಸಹಕಾರಿ ಸಂಸ್ಥೆಗಳ ಕೃಷಿಸಾಲ ನೀಡಿಕೆಯನ್ನು ನಿರ್ಬಂಧಿಸುವ 'ನಬಾರ್ಡ್' ಶಿಫಾರಸ್ಸುಗಳು

ದೇಶದ ರೈತಾಪಿ ಸಮುದಾಯದ ಬಹುದೊಡ್ಡ ವಿಭಾಗ ತನ್ನ ಕೃಷಿ ಮೇಲಿನ ಹೂಡಿಕೆಯ ಅಗತ್ಯಗಳಿಗಾಗಿ ಗ್ರಾಮೀಣ ಪ್ರದೇಶಗಳ ಶ್ರೀಮಂತರು ನೀಡುವ ದುಬಾರಿ ಬಡ್ಡಿಯ ಖಾಸಗಿ ಸಾಲವನ್ನೇ ಅವಲಂಬಿಸಬೇಕಿದೆ. ಬ್ಯಾಂಕುಗಳಂತಹ ಸಂಸ್ಥೆಗಳಿಂದ ದೊರೆಯುವ ಸಾಂಸ್ಥಿಕ ಸಾಲದ ಪ್ರಮಾಣ ತುಂಬಾ ಕಡಿಮೆಯೇ ಇದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಾಥಮಿಕ ಸಹಕಾರಿ ಸಂಸ್ಥೆಗಳಿಂದ ದೊರೆಯುವ ಸೀಮಿತ ಕೃಷಿಸಾಲ ಸೌಲಭ್ಯಗಳಿಗೂ ಕಲ್ಲು ಹಾಕುವಂತಹ ಸೂಚನೆಯನ್ನು ನಬಾರ್ಡ್ ನೀಡಿದೆ.

ಪ್ರಕಾಶ್ ಭಕ್ಷಿ ಎಂಬ ನಬಾರ್ಡ್ ಮುಖ್ಯಸ್ಥರ ನೇತೃತ್ವದ ಪರಿಣತರ ಸಮಿತಿ ಸಹಕಾರಿ ಚಳುವಳಿಯ ಮೂಲ ಸ್ತಂಭಗಳಾದ ಪ್ರಾಥಮಿಕ ಸಹಕಾರಿ ಸಂಸ್ಥೆಗಳನ್ನು ವಿರೂಪಗೊಳಿಸುವ ಶಿಫಾರಸ್ಸುಗಳನ್ನು ಮಾಡಿದೆ. ನಬಾರ್ಡ್ ಈ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ಹುನ್ನಾರದಲ್ಲಿದೆ. ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಸಾಂಸ್ಥಿಕ ಸಾಲದ ಅಂದರೆ ಬ್ಯಾಂಕುಗಳಂತಹ ಸಂಸ್ಥೆಗಳ ಸಾಲದ ವ್ಯವಸ್ಥೆಯ ಮೇಲೆ ಇದರ ಪರಿಣಾಮ ಏನಾಗುವುದೆಂಬುದನ್ನು ಅವರು ವಿಚಾರ ಮಾಡಿದಂತಿಲ್ಲ ಅಥವಾ ಉದ್ದೇಶಪೂರ್ವಕವಾಗಿಯೇ ಇದನ್ನು ಮಾಡಲಾಗುತ್ತಿದೆ.

ವರ್ಷ	ಒಟ್ಟು ಕೃಷಿ ಸಾಲ		
	ಗ್ರಾಮೀಣ	ನಗರ	ಒಟ್ಟು
		ಅವಧಿ 1	
1990	85.1	14.9	100.0
1994	83.4	16.6	100.0
		ಅವಧಿ 2	
1995	83.7	16.3	100.0
2005	69.3	30.7	100.0
		ಅವಧಿ 3	
2006	62.4	37.6	100.0
2011	66.9	33.1	100.0
		ನೇರ ಕೃಷಿ ಸಾಲ	
		ಅವಧಿ 1	
1990	88.8	11.2	100.0
1994	89.0	11.0	100.0
		ಅವಧಿ 2	
1995	88.6	11.4	100.0
2005	84.3	15.7	100.0
		ಅವಧಿ 3	
2006	80.0	20.0	100.0
2011	74.4	25.6	100.0

ದೇಶದಲ್ಲಿ ಸುಮಾರು 4.2 ಕೋಟಿ ಸದಸ್ಯರು ಇರುವ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಒಟ್ಟು ಸಂಖ್ಯೆ 93,000. ರಾಜ್ಯ ಮಟ್ಟದಲ್ಲಿ 32 ಅಪೆಕ್ಸ್ ಬ್ಯಾಂಕುಗಳಿವೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಸಂ–ಖ್ಯೆ 370. ಅಲ್ಪಾವಧಿ ಸಹಕಾರಿ ಸಾಲದ ವ್ಯವಸ್ಥೆಯ ರಚನೆ ಇದು. ಇದು ದೇಶದ ಕೃಷಿಗೆ ಸಾಂಸ್ಥಿಕ ಸಾಲದ ವ್ಯವಸ್ಥೆ ಮಾಡುತ್ತದೆ. ಕಳೆದ 2011–12 ರ ಸಾಲಿನಲ್ಲಿ ದೇಶದಲ್ಲಿ 3.09 ಕೋಟಿ ರೈತರಿಗೆ ಈ ಸಹಕಾರಿ ವ್ಯವಸ್ಥೆ ಕೃಷಿ ಸಾಲ ನೀಡಿದೆ. ಇದೇ ಸಮಯದಲ್ಲಿ ವಾಣಿಜ್ಯ ಬ್ಯಾಂಕುಗಳು 2.55 ಕೋಟಿ ರೈತರಿಗೆ ಮಾತ್ರ ಕೃಷಿ ಸಾಲ ನೀಡಿವೆ. ಗ್ರಾಮೀಣ ಬ್ಯಾಂಕುಗಳು 82 ಲಕ್ಷ ರೈತರಿಗೆ ಕೃಷಿ ಸಾಲ ನೀಡಿವೆ. ಇದೇ ಸಾಲಿನಲ್ಲಿ ಸಹಕಾರಿ ಸಂಘಗಳು 67 ಲಕ್ಷ ರೈತರು ಮತ್ತು ಕೃಷಿ ಕೂಲಿಕಾರರಿಗೆ ಕೃಷಿ ಸಾಲ ನೀಡಿದ್ದರೆ, ವಾಣಿಜ್ಯ ಬ್ಯಾಂಕುಗಳು 21 ಲಕ್ಷ ಹಾಗೂ ಗ್ರಾಮೀಣ ಬ್ಯಾಂಕುಗಳು ಕೇವಲ 9 ಲಕ್ಷ ಜನರಿಗೆ ಮಾತ್ರ ಹೊಸದಾಗಿ ಕೃಷಿ ಸಾಲವನ್ನು ನೀಡಿವೆ. ಇದು ಸಹಕಾರಿ ವ್ಯವಸ್ಥೆಯ ಸಾಮರ್ಥ್ಯದ ನಿದರ್ಶನ.



ದಿನೇ ದಿನೇ ಶ್ರೀಮಂತರಿಗೆ ಹೆಚ್ಚುತ್ತಹೋಗಿರುವ ದೊಡ್ಡಮೊತ್ತದ ಸಾಲದ ಪ್ರಮಾಣ (%)				
ಸಾಲದ ಪ್ರಮಾಣ	1990	2000	2005	2010
2 ಲಕ್ಷದವರೆಗೆ	82.6	67.6	51.9	44.3
2 ಲಕ್ಷದಿಂದ 10 ಲಕ್ಷ ವರೆಗೆ	4.3	11.7	17.9	22.6
10 ಲಕ್ಷದಿಂದ 1 ಕೋಟಿ ವರೆಗೆ	7.6	6.6	6.4	6.4
1 ಕೋಟಿಯಿಂದ 10 ಕೋಟಿವರೆಗೆ	4.2	6.7	8.0	6.3
10 ಕೋ.ಯಿಂದ 25 ಕೋಟಿವರೆಗೆ		1.7	3.3	2.7
25 ಕೋಟಿ ನಂತರ	1.3	5.7	2.6	17.7
ಒಟ್ಟು ಮುಂಗಡ	100.0	100.0	100.0	100.0

ಭಕ್ಷಿ ಸಮಿತಿಯ ವಿಶ್ಲೇಷಣೆಯ ಪ್ರಕಾರ ಈ ಅಲ್ಪಾವಧಿ ಸಹಕಾರಿ ರಚನೆಯಿಂದ ಒಟ್ಟು ಕೃಷಿ ಸಾಲದ ಬರೀ ಶೇಕಡಾ 17 ರಷ್ಟು ಮಾತ್ರ ವಿತರಣೆಯಾಗುತ್ತಿದೆ. ಕೆಲವು ಸೀಮಿತ ಪ್ರದೇಶಗಳಲ್ಲಿ ಇದು ಶೇ. 50 ರಷ್ಟು ಇರುವುದೂ ಇದೆ. ಪ್ರಾಥಮಿಕ ಸಹಕಾರಿ ಸಂಘಗಳು ನೀಡುತ್ತಿರುವ ಸಾಲದಲ್ಲಿ ಶೇ.40 ರಷ್ಟು ಮತ್ತು ಕೇಂದ್ರ ಸಹಕಾರಿ ಬ್ಯಾಂಕುಗಳು ನೀಡುತ್ತಿರುವ ಸಾಲದಲ್ಲಿ ಅ ರ್ಧಕ್ಕಿಂತ ಹೆಚ್ಚು ಕೃಷಿಯೇತರ ಉದ್ದೇಶಗಳಿಗೆ ಹೋಗುತ್ತಿದೆ. ಆದ್ದರಿಂದ, ಸಮಿತಿಯ ಪ್ರಕಾರ ಪ್ರಾಥಮಿಕ ಸಹಕಾರಿ ಸಂಘಗಳು ಮತ್ತು ಕೇಂದ್ರ ಸಹಕಾರಿ ಭ್ಯಾಂಕುಗಳು ಯಾವ ಉದ್ದೇಶದಿಂದ ಸ್ಥಾಪಿಸಲ್ಪಟ್ಟವೊ ಆ ಉದ್ದೇಶಗಳನ್ನು ಸಾಧಿಸುತ್ತಿಲ್ಲ. ಸಮಿತಿ ಈ ಸಂಸ್ಥೆಗಳು ಕನಿಷ್ಠ ಶೇ. 70 ರಷ್ಟು ಸಾಲವನ್ನು ಕೃಷಿಗೆ ಮೀಸಲಿರಿಸಬೇಕೆಂದು ಶಿಫಾರಸ್ಸು ಮಾಡಿದೆ. ಇಂತಹ ಶಿಫಾರಸ್ಸು ಸರಿಯಾದದ್ದೇ. ಆದರೆ ಇದನ್ನು ಸಾಧಿಸಲು ಅವರ ಯೋಜನೆಗಳೇನು?

ಪ್ರಾಥಮಿಕ ಸಹಕಾರಿ ಸಂಘಗಳ ಠೇವಣಿಗಳು ವಿಮೆಗೆ ಒಳಪಡದೆ ಇರುವುದರಿಂದ ಇವು ಎಟಿಎಂಗಳಲ್ಲಿ ಬಳಸಬಹುದಾದ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ನೀಡಲಾರವು. ಆದ್ದ–ರಿಂದ ಕೇಂದ್ರ ಸಹಕಾರಿ ಬ್ಯಾಂಕುಗಳು ಈ ಕಾರ್ಡ್‌ಗಳನ್ನು ನೀಡಲಿ. ಅದಕ್ಕೆ ಪ್ರಾಥಮಿಕ ಸಹಕಾರಿ ಸಂಘಗಳು ಕೇಂದ್ರ ಸಹಕಾರಿ ಬ್ಯಾಂಕುಗಳ ವ್ಯವಹಾರ ಪ್ರತಿನಿಧಿಗಳಾಗಲಿ ಎಂದು ಸಮಿತಿ ಶಿಫಾರಸ್ಸು ಮಾಡಿದೆ. ಈ ಶಿಫಾರಸ್ಸು ಪ್ರಾಥಮಿಕ ಸಹಕಾರಿ ಸಂಘಗಳ ಹಕ್ಕುಗಳಿಗೆ ಚ್ಯುತಿ ತರುತ್ತದೆ. ಅವುಗಳ ಸ್ವಭಾವವನ್ನೇ ಬದಲಾಯಿಸುತ್ತದೆ.

ಭಕ್ಷಿ ಸಮಿತಿಯು ಮುಂದುವರಿದು ರಾಜ್ಯ ಸಹಕಾರಿ ಬ್ಯಾಂಕುಗಳ ಠೇವಣಿಗಳು ಕೇಂದ್ರ ಸಹಕಾರಿ ಬ್ಯಾಂಕುಗಳು ತಮ್ಮ ಎಸ್‌ಎಲ್‌ಆರ್ ಮತ್ತು ಸಿಆರ್‌ಆರ್‌ಗಳಿಗಾಗಿ ಮಾಡಿದ ಠೇವಣಿಗಳನ್ನು ಹೊಂದಿವೆ. ಆದರೆ ರಾಜ್ಯ ಸಹಕಾರಿ ಬ್ಯಾಂಕುಗಳು ಇದೇ ಕೇಂದ್ರ ಸಹಕಾರಿ ಬ್ಯಾಂಕುಗಳಿಗೆ ದೊಡ್ಡ ಪ್ರಮಾಣದಲ್ಲಿ ಸಾಲ ನೀಡುತ್ತವೆ. ಈ ಸಾಲಗಳಲ್ಲಿ ನಿಷ್ಕ್ರಿಯ ಸಾಲಗಳೇ ಹೆಚ್ಚು. ಆದ್ದರಿಂದ ಕೇಂದ್ರ ಸಹಕಾರಿ ಬ್ಯಾಂಕುಗಳ ಠೇವಣಿಗಳು ಅಪಾಯದಲ್ಲಿವೆ ಎಂದಿದೆ.

ಹೀಗೆ ಅಲ್ಪಾವಧಿ ಸಹಕಾರಿ ಸಾಲ ಸಂಸ್ಥೆಗಳ ಸಂರಚನೆಯಲ್ಲಿನ ಹಲವು ನ್ಯೂನ್ಯತೆಗಳನ್ನು ಸಮಿತಿ ಎತ್ತಿ ತೋರಿಸಿದೆ. ಆದರೆ ಇಂತಹ ನ್ಯೂನ್ಯತೆಗಳನ್ನು ಸರಿಪಡಿಸುವಾಗ ಪ್ರಜಾಪ್ರಭುತ್ವದ ಆಶಯ ಮತ್ತು ಆ ಆಶಯಗಳನ್ನು ಸಾಧಿಸಲು ಮಾಡಬೇಕಾದ ಸಂರಚನಾ ಸಂಬಂಧಗಳನ್ನು ವಿವೇಚಿಸಿ ರೂಪಿಸಬೇಕಾಗುತ್ತದೆ. ಬರೀ ಮಾರುಕಟ್ಟೆ ಆಶಯಗಳನ್ನು ಅಥವಾ ಸೀಮಿತ ಹಣಕಾಸಿನ ಲಾಭದ ಉದ್ದೇಶಗಳನ್ನು ಮಾತ್ರ ಹೊಂದಿದ್ದರೆ ಅದು ಜನವಿರೋಧಿಯಾಗುವ ಸಾಧ್ಯತೆ ಇರುತ್ತದೆ.


ಭಕ್ಷಿ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ನಬಾರ್ಡ್ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆ ಹಲವು ಅವಘಡಗಳನ್ನು ಸೃಷ್ಟಿಸಿದೆ. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಇನ್ನು ಮುಂದೆ ಠೇವಣಿಗಳನ್ನು ಸ್ವೀಕರಿಸುವಂತಿಲ್ಲ. ಹಾಗೆಯೇ ಅವು ಸಾಲ ನೀಡಿಕೆ ವಹಿವಾಟಿನಿಂದ ಉಂಟಾಗುವ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಪುಸ್ತಕಗಳಿಗೆ ವರ್ಗಾಯಿಸಬೇಕು– ಇತ್ಯಾದಿ.

ಇಂತಹ ಸುತ್ತೋಲೆಯಿಂದ ಸಹಕಾರಿ ಆಶಯಗಳಿಗೆ ಧಕ್ಕೆ ಉಂಟಾಗುವುದರಿಂದ ಈ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಬೇಕೆಂದು ಅಖಿಲ ಭಾರತ ಪ್ರಾಂತ ರೈತ ಸಂಘ ಒತ್ತಾಯಿಸಿದೆ. ಅಲ್ಲದೆ ಗುಜರಾತ್, ಕೇರಳ ಮತ್ತು ಇತರ ಹಲವು ರಾಜ್ಯ ಸರ್ಕಾರಗಳೂ ಈಗಾಗಲೇ ಈ ಸುತ್ತೋಲೆಯ ವಿರುದ್ಧ ಧ್ವನಿ ಎತ್ತಿರುವುದರಿಂದ ಕರ್ನಾಟಕ ರಾಜ್ಯ ಸರ್ಕಾರವೂ ಈ ಸುತ್ತೋಲೆಯನ್ನು ಹಿಂಪಡೆಯುವಂತೆ ಒತ್ತಾಯಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘವು ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಉದಾರೀಕರಣ ನೀತಿಗಳು ಪ್ರತಿಪಾದಿಸುವ ರಚನಾತ್ಮಕ ಬದಲಾವಣೆಗಳು ಎಂತಹ ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳು ಹುಟ್ಟಿಹಾಕಿರುವ ವಿಚಾರಧಾರೆಗಳಲ್ಲಿ ಜನಪರವಾದ ಚಿಂತನೆ ಮೂಡಿ ಬರಲು ಸಾಧ್ಯವಿಲ್ಲ. ಇರುವ ಸಂಸ್ಥೆಗಳನ್ನು ಹೇಗೆ ಬದಲಾಯಿಸಬೇಕು ಮತ್ತು ಜನಪರತೆಯನ್ನು ಹೇಗೆ ತರಬೇಕೆಂಬುದು ಇಂತಹ ಸಮಿತಿಗಳಿಗೆ ಅರ್ಥವಾಗುವುದಿಲ್ಲ. ಯಾಕೆಂದರೆ ಅವು ಆಳುವ ವರ್ಗದ ಹಿತಾಸಕ್ತಿಗಳನ್ನು ಕಾಯುವುದಿಲ್ಲ. ದೇಶದ ಗ್ರಾಮೀಣ ಮತ್ತು ಕೃಷಿಯ ಅಭಿವೃದ್ಧಿಗಾಗಿ ಜನ್ಮ ತಳೆದು ಕೆಲಸ ಮಾಡಬೇಕಾಗಿರುವ ನಬಾರ್ಡ್‌ನ ಸಮಿತಿಯೇ ಹೀಗೆ ಶಿಫಾರಸ್ಸುಗಳನ್ನು ಮಾಡಿ ಅನುಷ್ಠಾನ ಮಾಡಲು ಹೊರಟಿರುವಾಗ ರೈತರಿಗೆ ತೀವ್ರ ಹೋರಾಟದ ವಿನಹ ಬೇರೆ ದಾರಿ ಇದೆ–ಯೆ?

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಾಂ. ಎಸ್. ಸೂರ್ಯನಾರಾಯಣರಾವ್ 89ನೇ ಜನ್ಮ ದಿನಾಚರಣೆ ಸ್ಮಾರಕ ದತ್ತಿ ಉಪನ್ಯಾಸ



ಕಾ. ಸೂರ್ಯನಾರಾಯಣರಾವ್‌ರವರ 89 ನೇ ಜನ್ಮದಿನದ ಅಂಗವಾಗಿ 23.08.2013 ಸಂಜೆ ಬೆಂಗಳೂರಿನ ಎಡಿಎ ರಂಗ ಮಂದಿರದಲ್ಲಿ, "**ದಿನದ ಕೆಲಸದ ಅವಧಿ ವಾರಕ್ಕೆ 35 ಗಂಟೆ ದಿನಕ್ಕೆ ನಾಲ್ಕು ಪಾಳಿ ಕೆಲಸ**"ದ ವಿಷಯದ ಮೇಲೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಕೆ.ಆರ್.ಇ.ಸಿ. ಸುರತ್ಕಲ್‌ನ ಪ್ರಾಧ್ಯಾಪಕರಾದ ಪ್ರೊ॥ ರಾಜೇಂದ್ರ ಉಡುಪ ರವರು ಸ್ಮಾರಕ ದತ್ತಿ ಉಪನ್ಯಾಸವನ್ನು ನೀಡಿದರು. ಸಭೆಯ ಅಧ್ಯಕ್ಷತೆಯನ್ನು ವಿಜೆಕೆ ನಾಯರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾಂ। ನಿತ್ಯಾನಂದ ಸ್ವಾಮಿ, ಕಾಂ। ಪ್ರಸನ್ನ ಕುಮಾರ್, ಕಾಂ। ಎಮ್.ಎಸ್. ಮೀನಾಕ್ಷೀ ಸುಂದರಂ, ಕೆ.ಎನ್. ಉಮೇಶ್, ಕಾಂ।, ಕೆ. ಪ್ರಕಾಶ್ ಎನ್. ಪ್ರತಾಪ್ ಸಿಂಹ ಭಾಗವಹಿಸಿದ್ದರು.

ಜೆಡಿಎಸ್....

ಪುಟ 8 ರಿಂದ

ಹೊಂದಿರುವ ಪಕ್ಷವನ್ನು ಬೆಳೆಸುವುದು ಇರಲಿ, ಅದನ್ನು ಸಹಿಸಿಕೊಂಡು ಹೋಗಲೂ ಆರೆಸ್ಸೆಸ್ ಒಪ್ಪದು. ಜೆಡಿಎಸ್ ಜತೆಗಿನ ಈ ಎರಡನೇ ಮೈತ್ರಿಯಿಂದ ಜೆಡಿಎಸ್ ಒಂದು ಜಾತ್ಯಾತೀತ ಪಕ್ಷ ಅಲ್ಲ ಎಂದು ಬಿಂಬಿಸುವಲ್ಲಿ ಆರೆಸ್ಸೆಸ್ ಯಶಸ್ವಿಯಾಗಿದೆ. ಉಪ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಗೆಲ್ಲಿಸುವ ಉದ್ದೇಶ ಆರೆಸ್ಸೆಸ್‌ಗೆ ಇರಲೇ ಇಲ್ಲ. ಇದನ್ನು ಅರ್ಥಮಾಡಿಕೊಳ್ಳಲು ವಿಫಲವಾದ ಕುಮಾರಸ್ವಾಮಿ ಹಳ್ಳಕ್ಕೆ ಬಿದ್ದಂತಾಗಿದೆ. ಬೆನ್ನಿಗೆ ಚೂರಿ ಹಾಕುವುದರಲ್ಲಿ ಆರೆಸ್ಸೆಸ್ ಪಳಗಿದ ಕೈ. ಗಾಂಧಿಯನ್ನು ಕೊಂದ ಮಂದಿ ಅದು! ಹೋಗಿ ಹೋಗಿ ಅವರ ಬೆಂಬಲವನ್ನು ನಂಬಿ ಕುಮಾರಸ್ವಾಮಿ ಮೋಸ ಹೋಗಿದ್ದಾರೆ.

ಜೆಡಿಎಸ್ ಈಗ ಅಡ್ಡ ರಸ್ತೆಗೆ ಒಂದು ನಿಂತಂತಾಗಿದೆ. ಅದರ ಮುಂದಿನ ದಾರಿಯನ್ನು ಅದು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಅಧಿಕಾರಕ್ಕಾಗಿ ಬಂದವರು ಜೆಡಿಎಸ್ ಅನ್ನು ತೊರೆದುಹೋಗಬಹುದು. ತತ್ವನಿಷ್ಠೆ ಉಳ್ಳವರು ಕೆಲವರೇ ಉಳಿದರೂ ಅವರ ಮೂಲಕ ಕೆಳಮಟ್ಟ ದಿಂದ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಧೋರಣೆಗಳ ಆಧಾರದ ಪರ್ಯಾಯವನ್ನು ಕಟ್ಟಲು ಜೆಡಿಎಸ್ ಮುಂದಾಗಬೇಕು.

ಸಿರಿಯಾ.......


ಪುಟ 16 ರಿಂದ

ನಾದರೂ ಹೊಸ 'ಮರುಳು ಮಾಡುವ ತಂತ್ರ'ವಾದರೂ ಇರಬೇಕಲ್ಲ!

ಲಕ್ಷ ಸಾವು, 60 ಲಕ್ಷ ನೋವು

ಸುಮಾರು ಎರಡು ವರೆ ವರ್ಷಗಳಿಂದ ನಡೆಯುತ್ತಿರುವ 'ಪೂರ್ಣ ಪ್ರಮಾಣದ ಯುದ್ಧ'ದಿಂದಾಗಿ ನಾಗರಿಕರಿಗೆ ಭಾರೀ ಸಾವು-ನೋವುಗಳಾಗಿವೆ. ಸತ್ತವರ ಸಂ-ಖ್ಯೆ 80 ಸಾವಿರದಿಂದ ಒಂದು ಲಕ್ಷದ ವರೆಗೆ ಮತ್ತು ಇವರಲ್ಲಿ ಸುಮಾರು ಅರ್ಧದಷ್ಟು ನಾಗರಿಕರು. ಎರಡು ಸಾವಿರದಷ್ಟು (ತಲಾ ಒಂದು ಸಾವಿರ) ಪ್ರದರ್ಶನಕಾರರು ಮತ್ತು ಅಧಿಕಾರಿಗಳು ಸತ್ತಿದ್ದಾರೆ. 28 ಸಾವಿರ ಜನ ಕಾಣೆಯಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಎರಡೂ ಕಡೆಯವರಿಂದ 'ಮಾನವ ಶೀಲ್ಡ್ (ಗುರಾಣಿ)'ಗಳಾಗಿ ಬಳಸಲ್ಪಡುತ್ತಿದ್ದಾರೆ ಅಥವಾ 'ಯುದ್ಧ ಕೈದಿ'ಗಳಾಗಿ ಬಂಧಿತರಾಗಿದ್ದು ತೀವ್ರ ಚಿತ್ರಹಿಂಸೆಗೆ ಗು-ರಿಯಾಗಿದ್ದಾರೆ ಎನ್ನಲಾಗಿದೆ.

ಸುಮಾರು 40 ಲಕ್ಷ ಜನ ತಮ್ಮ ದೇಶದಲ್ಲೇ ನಿರಾಶ್ರಿತರಾಗಿದ್ದಾರೆ. 18ಲಕ್ಷ ಜನ ನೆರೆ-ಯ ದೇಶಗಳಿಗೆ ವಲಸೆ ಹೋಗಿ ನಿರಾಶ್ರಿತರ ಶಿಬಿರಗಳಲ್ಲಿ ವಾಸಿಸುತ್ತಿದ್ದಾರೆ. ಇದು ಜೂನ್ ವರೆಗಿನ ಸಾವು-ನೋವುಗಳ ಅಂದಾಜು. ಇದಕ್ಕೆ ಸಿರಿಯಾ ಸರ್ಕಾರದಷ್ಟೇ (ಬಹುಶಃ ಅದಕ್ಕಿಂತಲೂ ಹೆಚ್ಚು) ಅಮೆರಿಕ-ನಾಟೋ ದುಷ್ಟಕೂಟ ಮತ್ತು ಅದರ ಪ್ರಾಯೋಜಿತ ವಿರೋಧಿ ಕೂಟ ಹೊಣೆ ಹೊರಬೇಕು. ಯಾ-ಕೆಂದರೆ ಜಿನೀವಾ ಮಾತುಕತೆಗಳು ಸೇರಿದಂತೆ ಹಲವು ಮಾತುಕತೆಗಳಿಗೆ ಸಿರಿಯಾ ಸರ್ಕಾರದ ಮತ್ತು ಅಂತರ್ರಾಷ್ಟ್ರೀಯ ಪ್ರಸ್ತಾವಗಳನ್ನು ಅದು ಸತತವಾಗಿ ನಿರಾಕರಿಸುತ್ತಾ ಬಂದಿದೆ.



ಯುದ್ಧದಿಂದ ಸಿರಿಯನ್ನರ ಗೋಳು ಕಡಿಮೆಯಾಗಬಹುದೆ ?

ಇರಾಕ್ ಮತ್ತು ಲಿಬ್ಯಾದಲ್ಲಿ ಹೇಳಿದಂತೆ ಈಗಲೂ ಅಮೆರಿಕದ ಅಧ್ಯಕ್ಷ ಜನರ ಗೋಳು ತಕ್ಷಣ ನಿಲ್ಲಿಸಲು ಮಿಂಚಿನ ವೇಗದಲ್ಲಿ ಕೆಲವೇ ದಿನಗಳಲ್ಲಿ ಅತ್ಯಂತ ಕಡಿಮೆ ಸಾವು-ನೋವುಗಳೊಂದಿಗೆ ಅತ್ಯಂತ ದಕ್ಷತೆಯಿಂದ ಯುದ್ಧ ಮಾಡಿ ದುಷ್ಟ ಸರ್ವಾಧಿಕಾರಿಯನ್ನು ಕೆಳಗಿಳಿಸುತ್ತೇನೆ ಎಂದು ಘೋಷಿಸುತ್ತಿದ್ದಾರೆ. ಇರಾಕ್ ಮತ್ತು ಲಿಬ್ಯಾದ ಅನುಭವ ಎಲ್ಲರ ಮುಂದೆ ಇದೆ. ವಿಶ್ವಸಂಸ್ಥೆಯ ವರದಿಗೆ ಕಾಯದೆ ಯುದ್ಧ ಹೂಡಿದರೆ ಸಿರಿಯಾ ಸರ್ಕಾರ ನಿಜವಾಗಿ ನಾಗರಿಕರ ವಿರುದ್ಧ ರಾಸಾಯನಿಕ ಅಸ್ತ್ರ ಬಳಸಿತ್ತೇ ಎಂದು ಯಾವತ್ತೂ ಬಯಲಾಗುವುದಿಲ್ಲ. ಅದಕ್ಕೆ ತಕ್ಕ ಶಿಕ್ಷೆಯೂ ಆಗುವುದಿಲ್ಲ.

ಸಿರಿಯಾ ಸರ್ಕಾರ ಒಬಾಮ ಹೇಳುವಷ್ಟು ದುಷ್ಟವಾಗಿದ್ದರೆ, ಅಮೆರಿಕನ್ ದಾಳಿಗೆ ಪ್ರತಿಯಾಗಿ ಅದು ರಾಸಾಯನಿಕ ಅಸ್ತ್ರಗಳನ್ನು ಬಳಸಬಹುದು. ಅದಕ್ಕೆ 'ಪ್ರತೀಕಾರ'ವಾಗಿ ಅಮೆರಿಕ ರಾಸಾಯನಿಕ ಅಸ್ತ್ರಗಳನ್ನೂ ಬಳಸಬಹುದು. ರಶ್ಯ ಸಿರಿಯಾದ ಮಿಲಿಟರಿ ಬೆಂಬಲಕ್ಕೆ ನಿಂತರೆ ಅಣ್ವಸ್ತ್ರಗಳನ್ನೂ ಬಳಸಬಹುದು. ಸಿರಿಯಾದ ನಾಗರಿಕರ ಗೋಳು ಈ ಯುದ್ಧದಿಂದ ಇನ್ನಷ್ಟು ದೀರ್ಘ ಮತ್ತು ಭೀಕರವಾಗುವ ಸಂಭವವೇ ಹೆಚ್ಚು.

'ಎಲ್ಲರನ್ನೂ ಎಲ್ಲಾ ಕಾಲ' ಅಥವಾ ಕನಿಷ್ಟ ಮೂರನೇ ಬಾರಿ 'ಮರುಳು' ಮಾಡಲು ಆದೀತೆ ?

ಅರಣ್ಯ ಹಕ್ಕು....

ಪುಟ 13 ರಿಂದ

ಬುಡಕಟ್ಟು ಪ್ರದೇಶಗಳಲ್ಲಿ ಇರುವ ನೈಸರ್ಗಿಕ ಮತ್ತು ಖನಿಜ ಸಂಪನ್ಮೂಲಗಳ ಲೂಟಿ ನಡೆಸಲು ಕಾರ್ಪೊರೇಟ್‌ಗಳಿಗೆ ನೆರವಾಗುವ ಬಗ್ಗೆಯೇ ಅದಕ್ಕೆ ಹೆಚ್ಚಿನ ಆಸಕ್ತಿಯಿರುವಂತೆ ಕಾಣುತ್ತದೆ ಎನ್ನುತ್ತಾರೆ ಬೃಂದಾ ಕಾರಟ್.

ಈ ಅಧಿವೇಶನದಲ್ಲಿ ಯುಪಿಎ-2 ಸರಕಾರ ಮಂಡಿಸಬೇಕೆಂದಿರುವ 'ಭೂಸ್ವಾಧೀನ ಮಸೂದೆ'ಯೂ ಕಲ್ಲಿದ್ದಲು ಗಣಿಗಾರಿಕೆ ಕಾನೂನಿನ ಅಡಿಯಲ್ಲಿ ಮಾಡುವ ಭೂಸ್ವಾಧೀನದ ಪ್ರಶ್ನೆಯನ್ನು ಒಳಗೊಂಡಿಲ್ಲ. ಇದರಿಂದಾಗಿ ಕಲ್ಲಿದ್ದಲು ಗಣಿಗಾರಿಕೆಗೆಂದು ಭೂಸ್ವಾಧೀನ ಮಾಡಿಕೊಂಡಲ್ಲಿ ಅಲ್ಲಿರುವವರಿಗೆ ಪರಿಹಾರ, ಪುನರ್ವಸತಿ ಮತ್ತು ಇತರ ಸೌಲಭ್ಯಗಳ ಅಂಶಗಳು ಅನ್ವಯವಾಗುವುದಿಲ್ಲ. ಆದ್ದರಿಂದ ಸಿಪಿಐ(ಎಂ) ಈ ಮಸೂದೆಯಲ್ಲಿ ಈ ಕುರಿತು ತಿದ್ದುಪಡಿಯನ್ನು ಸೂಚಿಸಲಿದೆಯೆಂದು ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್ ಹೇಳಿದ್ದಾರೆ.

JANASHAKTHI KANNADA VARA PATRIKE. SEP 08, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every
Licensed to Post without prepayment License No. WPP

ಸಿರಿಯಾ ಮೇಲೆ ಯುದ್ಧದ ಕಾರ್ಮೋಡಗಳು


ಸಿರಿಯಾದ ಮೇಲೆ ಯುದ್ಧದ ಕಾರ್ಮೋಡಗಳು ಕವಿದಿವೆ. ಸಿರಿಯಾದ ಮೇಲೆ ಯುದ್ಧ ಹೂಡಲು ಎಲ್ಲಾ ಸಿದ್ಧತೆಗಳು ಮುಗಿದಿದೆ. ಸಿರಿಯಾ ಅಮೆರಿಕನ್-ನಾಟೋ ಪಡೆಗಳು ಕೊನೆಯ ಆಜ್ಞೆಗೆ ಕಾಯುತ್ತಿದ್ದಾರೆ. 'ಕೆಲವರನ್ನು ಕೆಲಕಾಲ ಮರುಳು ಮಾಡಬಹುದು, ಎಲ್ಲರನ್ನೂ ಕೆಲಕಾಲ ಮರುಳು ಮಾಡಬಹುದು, ಆದರೆ ಎಲ್ಲರನ್ನೂ ಎಲ್ಲಾ ಕಾಲ ಮರುಳು ಮಾಡಲಾಗದು' ಎಂಬ ನಾಣ್ಣುಡಿಯೊಂದಿದೆ. ಅದನ್ನು ಸುಳ್ಳು ಮಾಡಲು ಹೊರಟಿದೆ ಅಮೆರಿಕ ಮತ್ತು ನಾಟೋ ದುಷ್ಟಕೂಟ. ಎಲ್ಲರನ್ನೂ ಎಲ್ಲಾ ಕಾಲ ಮರುಳು ಮಾಡಲು ಹೊರಟಿದೆ. ಇರಾಕ್, ಲಿಬ್ಯಾಗಳಲ್ಲಿ ಎಲ್ಲರನ್ನೂ ಮರುಳು ಮಾಡಿದ ಇವರು ಈಗ ಅದನ್ನೇ ಸಿರಿಯಾದಲ್ಲೂ ಮಾಡಹೊರಟಿದ್ದಾರೆ. ಈ 'ಎಲ್ಲರನ್ನೂ ಮರುಳು ಮಾಡುವುದು' ಎಲ್ಲಾ ಕಾಲಕ್ಕೂ ಮುಂದುವರೆಯುವಂತೆ ಈಗಾಗಲೇ ಅವರ ಮಾಧ್ಯಮಗಳು ಪ್ರಚಾರ ಆರಂಭಿಸಿವೆ.

'ಮಾನವೀಯ ದಾಳಿ'ಯ ಫಾರ್ಮುಲಾ

ಈ ದೇಶದ ಆಳುವವರು ದುಷ್ಟರು. ಅವರು ತಮ್ಮ ದೇಶಬಾಂಧವರ ನರಮೇಧ ಮಾಡುತ್ತಿದ್ದಾರೆ. ಅವರ ಆಳ್ವಿಕೆ ಮುಂದುವರೆಯುವುದು ಅಮೆರಿಕದ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ 'ಶಾಂತಿ, ಮತ್ತು ಭದ್ರತೆ'ಗೆ ಅಪಾಯಕಾರಿ. ವಿಶ್ವಸಂಸ್ಥೆಯ ನಿಯಮಗಳ ಪ್ರಕಾರ ಶಾಂತಿಯುತ ಮಧ್ಯಪ್ರವೇಶ ಅದರ ಬಹಳ 'ವಿಳಂಬದಿಂದಾಗಿ ಕಾರ್ಯಸಾಧ್ಯ ಅಲ್ಲ'. ಆದ್ದರಿಂದ ಭಾರೀ ಮಿಲಿಟರಿ ದಾಳಿಯೊಂದಿಗೆ ಮಧ್ಯಪ್ರವೇಶ ಅಗತ್ಯ. ಇಂತಹ ದಾಳಿಯಲ್ಲಿ ಆಗುವ ಸಾವು ನೋವುಗಳು ಮುಂದೆ ಸ್ಥಾಪಿಸಲಾಗುವ 'ಪ್ರಜಾಪ್ರಭುತ್ವ, ಶಾಂತಿ ಮತ್ತು ಸುವ್ಯವಸ್ಥೆ'ಯ ದೃಷ್ಟಿಯಿಂದ ಇಂತಹ 'ಮಾನವೀಯ ದಾಳಿ' ಅನಿವಾರ್ಯ. ಇದು ಅವರ ಯುದ್ಧದ ಪರ ವಾದದ 'ಫಾರ್ಮುಲಾ'.

ಆದರೆ ಇರಾಕ್ ಮತ್ತು ಲಿಬ್ಯಾದಲ್ಲಿ ಯುದ್ಧದ ನಂತರ ಏನು ಆಗಿದೆ ಎಂದು ಎಲ್ಲರಿಗೂ ಗೊತ್ತು. ಪ್ರಜಾಪ್ರಭುತ್ವದ ಬದಲು ಅರಾಜಕತೆ ತಾಂಡವವಾಡುತ್ತಿದೆ. ಮೊದಲು ಸ್ವಲ್ಪವಾದರೂ ಇದ್ದ 'ಶಾಂತಿ ಮತ್ತು ಸುವ್ಯವಸ್ಥೆ' ಪೂರ್ತಿ ನಾಶವಾಗಿದೆ. ಯುದ್ಧಕ್ಕೆ ಅವರು ಕೊಟ್ಟ ಕಾರಣ(ನೆಪ ಎನ್ನುವುದು ಹೆಚ್ಚು ಸರಿ)ಗಳು ಹಸಿ ಸುಳ್ಳು ಎಂದು ಈಗ ಎಲ್ಲರಿಗೂ ಗೊತ್ತಾಗಿದೆ. ಇರಾಕ್ ಯುದ್ಧದಲ್ಲಿ ಸದ್ದಾಂ 'ಸಾಮೂಹಿಕ ವಿನಾಶದ ಅಸ್ತ್ರಗಳು' ಪೇರಿಸಿಟ್ಟಿದ್ದಾರೆ ಎಂದು ಹೇಳಲಾಯಿತು. ಲಿಬ್ಯಾದಲ್ಲಿ ಇಡೀ ಜನತೆಯೇ 'ಅರಬ್ ವಸಂತದ' ಭಾಗವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಗೆ ಗದ್ದಾಫಿ ವಿರುದ್ಧ ದಂಗೆ ಎದ್ದಿದೆ ಎನ್ನಲಾಯಿತು. ಇರಾಕ್, ಲಿಬ್ಯಾ ಅಥವಾ ಈಗ ಸಿರಿಯಾದ ಮೇಲೆ ಎಲ್ಲಾ ಯುದ್ಧಗಳಿಗೂ ಕಾರಣ ಒಂದೇ - ತೈಲ. ಪಶ್ಚಿಮ ಏಶ್ಯಾದ ಮತ್ತು ಉತ್ತರ ಆಫ್ರಿಕಾದ ಶ್ರೀಮಂತ ತೈಲ ನಿಕ್ಷೇಪಗಳನ್ನು ತಮ್ಮ ನೇರ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಸ್ವತಂತ್ರ ಸರ್ಕಾರಗಳನ್ನು ಕಿತ್ತು ಹಾಕಿ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸುವುದು.

ಪ್ರಾಕ್ಸಿ ಅಂತರ್ರಾಷ್ಟ್ರೀಯ ಯುದ್ಧ !



ಸಿರಿಯಾದಲ್ಲಿಯೂ 'ಅರಬ್ ವಸಂತದ' ಭಾಗವಾಗಿ ಪ್ರಜಾಪ್ರಭುತ್ವಕ್ಕೆ ಚಳುವಳಿ ನಡೆದದ್ದು ನಿಜ. ಅದನ್ನು ದಮನ ಮಾಡಲಾಯಿತು ಎಂಬುದು ನಿಜ. ಪ್ರಜಾಪ್ರಭುತ್ವಕ್ಕೆ ಚಳುವಳಿ ನಡೆಸಿದ ಪ್ರಜಾಪ್ರಭುತ್ವಕ್ಕೆ ಚಳುವಳಿಗಾರ ವಿರೋಧಿ ಪಕ್ಷ/ಗುಂಪುಗಳ ಜತೆ ಚರ್ಚೆ ಮಾಡಿ ಹೊಸ ಸಂವಿಧಾನದಡಿ ಚುನಾವಣೆ ತಯಾರಿಸಲು ಸರ್ಕಾರ ಒಪ್ಪಿಕೊಂಡಿತ್ತು ಎಂಬುದೂ ಅಷ್ಟೇ ನಿಜ. ಅಧ್ಯಕ್ಷ ತಕ್ಷಣ ರಾಜೀನಾಮೆ ಕೊಡಬೇಕು ಎಂಬ 'ಒನ್-ಪಾಯಿಂಟ್' ಕಾರ್ಯಕ್ರಮಕ್ಕೆ ಕೆಲವು ಪಕ್ಷ/ಗುಂಪುಗಳು ಪಟ್ಟು ಹಿಡಿದದ್ದರಿಂದ ಅದು ಮುಂದಕ್ಕೆ ಹೋಗಲಿಲ್ಲ.

ಆ ಹೊತ್ತಿಗಾಗಲೇ ವಿದೇಶಗಳಲ್ಲಿರುವ (ಅಮೆರಿಕ ಪ್ರಾಯೋಜಿತ) ಸಿರಿಯಾ ವಿರೋಧ ಪಕ್ಷಗಳ ಕೂಟ ಆಂತರಿಕ ಯುದ್ಧದ ಮೂಲಕ ಸರ್ಕಾರ ಉರುಳಿಸಲು ಕರೆ ಕೊಟ್ಟಿತ್ತು. ಈ ಕೂಟದ ಗುಂಪುಗಳಿಗೆ ಸಿರಿಯಾದ ಒಳಗೆ ಯಾವುದೇ ಜನಬೆಂಬಲ ಇರಲಿಲ್ಲ. ಮಾತ್ರವಲ್ಲ ಈ ಗುಂಪುಗಳು ಪ್ರಜಾಪ್ರಭುತ್ವಕ್ಕೆ ಚಳುವಳಿಯಲ್ಲಿ ಯಾವುದೇ ರೀತಿಯಲ್ಲಿ ಭಾಗವಹಿಸಿರಲಿಲ್ಲ. ಈ ಕೂಟಕ್ಕೆ ಒಂದು ದೇಶದ ಮಿಲಿಟರಿ ಬಳಿ ಇರಬಹುದಾದ ಭಾರೀ ಶಸ್ತ್ರಾಸ್ತ್ರಗಳನ್ನು ಟರ್ಕಿಯ ಮೂಲಕ ಗಡಿಯಾಚೆಯಿಂದ ಸಾಗಿಸಲಾಯಿತು. ಇವುಗಳಲ್ಲಿ ಭಾರೀ ಪ್ರಮಾಣದ ಮದ್ದುಗುಂಡುಗಳು, ಸ್ಫೋಟಕಗಳು, ಕ್ಷಿಪಣಿಗಳು, ರಾಸಾಯನಿಕ ಅಸ್ತ್ರಗಳು ಸೇರಿದ್ದವು. ಸಿಐಎ ಈ ಸಾಗಾಣಿಕೆಗಳನ್ನು ಯುರೋಪಿಯನ್ ಕಂಪನಿಗಳ ಮೂಲಕ ಮಾಡಿತು ಎಂದು ವರದಿಯಾಗಿದೆ. ವಿರೋಧಿ ಕೂಟಕ್ಕೆ ಟರ್ಕಿಯಲ್ಲಿ ಸಿರಿಯಾ ಗಡಿಯಲ್ಲಿ ತರಬೇತಿ-ನೆಲೆಗಳನ್ನು ಒದಗಿಸಲಾಗಿತ್ತು. ಟರ್ಕಿ-ಸಿರಿಯಾ ಗಡಿಯಲ್ಲಿ ಈ ಚಟುವಟಿಕೆಗಳನ್ನು ವಿರೋಧಿಸಿ ಸಾಕಷ್ಟು ಪ್ರತಿಭಟನೆಗಳೂ ನಡೆದವು. ಹೀಗೆ ಈಗಾಗಲೇ ಸಿರಿಯಾ ಯುದ್ಧ ಬರಿಯ ಆಂತರಿಕ ಯುದ್ಧವಲ್ಲ. ಪ್ರಾಕ್ಸಿ ಅಂತರ್ರಾಷ್ಟ್ರೀಯ ಯುದ್ಧ.

ರಾಸಾಯನಿಕ ಅಸ್ತ್ರ ಬಳಕೆಯ ನೆಪ

ಇಂತಹ ಶಸ್ತ್ರಾಸ್ತ್ರಗಳು ವಿರೋಧಿ ಕೂಟದ ಬಳಿ ಇರುವುದರಿಂದಲೇ ಸಿರಿಯಾದ ಆಂತರಿಕ ಯುದ್ಧ ಅಂತರ್ರಾಷ್ಟ್ರೀಯ ಯುದ್ಧದ ಭೀಕರತೆ ಪಡೆದಿತ್ತು. ವಿರೋಧಿ ಕೂಟ ಭಾರಿ ಸಾವು-ನೋವುಗಳನ್ನು ಉಂಟು ಮಾಡುವ ಭಯೋತ್ಪಾದಕ ಕೃತ್ಯಗಳನ್ನು ಮಾಡಿ ಅದನ್ನು ಸರ್ಕಾರದ ಪಡೆಗಳ ದುಷ್ಕೃತ್ಯಗಳು ಎಂದು ಆಪಾದಿಸುವ ಹಲವು ಪ್ರಕರಣಗಳು ಬೆಳಕಿಗೆ ಬಂದಿದ್ದವು. ರಾಸಾಯನಿಕ

ಅಸ್ತ್ರಗಳ ಬಳಕೆಯ ಮೊದಲ ಪ್ರ
ತನಿಖೆ ಮಾಡಿದ ವಿಶ್ವಸಂಸ್ಥೆ ಮಾನವ
ಸಂಘಟನೆಯ ವಕ್ತಾರೆ ಇದರಲ್ಲಿ ವಿ
ಕೂಟದ ಕೈವಾಡವಿಲ್ಲ ಎಂದು ತಳ್ಳಿ
ಸಾಧ್ಯವಿಲ್ಲ ಎಂದು ಹೇಳಿಕೆ ನೀಡಿದ್ದ

ಈಗಲೂ ರಾಸಾಯನಿಕ
ಬಳಕೆಯ ಬಗ್ಗೆ ವಿಶ್ವಸಂಸ್ಥೆ ತನಿಖಾ
ತನಿಖೆ ನಡೆಯುತ್ತಿದೆ. ತನಿಖಾ ಪಡೆ
ಕಳಿಸದಂತೆ ವಿಶ್ವಸಂಸ್ಥೆ ಮೇಲೆ ಅ
ಒಬಾಮಾ ಒತ್ತಡ ತಂದಿದ್ದರು
ಹೇಳಲಾಗಿದೆ. ತನಿಖಾ ಪಡೆಯ ವ
ಕಾಯದೆ, ಸಿರಿಯಾ 'ಕೆಂಪು ಗೆರೆ'
ದೆ ಎಂದು ಅಮೆರಿಕ ಮತ್ತು ನಾ
ದುಷ್ಟಕೂಟ ಆಪಾದಿಸಿದೆ. ಮಿ
ದಾಳಿ ಅನಿವಾರ್ಯ ಎನ್ನುತ್ತಿದೆ.
ಕ್ಕೆ ವಿಶ್ವಸಂಸ್ಥೆಯ ಭದ್ರತಾ ಸಮಿ
ಮುಂದೆ ಪ್ರಸ್ತಾವ ಸಹ ಮಂಡಿಸಿದೆ.
ಸಮಿತಿಯಲ್ಲಿ ರಶ್ಯ (ಮತ್ತು
ಚೀನಾ ಸಹ) ವಿಟೊ ಬಳಸಿ
ತಡೆಯಬಹುದು ಎಂಬ ನಿರೀಕ್ಷೆ ಇದೆ.
ಲೀಗ್ ಮತ್ತು ಈಜಿಪ್ಟ್ ಸೇರಿದಂತೆ
ಅರಬ್ ದೇಶಗಳು ಸಿರಿಯಾದ
ಮಿಲಿಟರಿ ದಾಳಿಯನ್ನು ವಿರೋ
ಅಗಸ್ಟ್ 31ರಂದು 'ಸಿರಿಯಾ ಮೇಲೆ
ಬೇಡ' ರಂಗ ಅಮೆರಿಕದಾದ್ಯಂತ
ಪ್ರದರ್ಶನಗಳಿಗೆ ಕರೆ ಕೊಟ್ಟಿದೆ. ಅಮೆ
ಒಳಗೂ ಪಾರ್ಲಿಮೆಂಟು ಸ
ಸೇರಿದಂತೆ ಸಿರಿಯಾ ಮೇಲೆ ಯುದ್ಧಕ್ಕೆ
ವಿರೋಧ ವ್ಯಕ್ತವಾಗಿದೆ. ಈ ಹಿನ್ನೆ
ಹೊಸ 'ಅಂತರಾಷ್ಟ್ರೀಯ ಉಲ್ಲಂಘ
ನೆಪಕ್ಕೆ ಶೋಧ ನಡೆದಿದೆ.

'ರಾಸಾಯನಿಕ ಅಸ್ತ್ರಗಳ ಬಳಕೆ ನಿ
ಒಪ್ಪಂದ'ದ ಉಲ್ಲಂಘನೆಯ ನೆಪದ
ವಿಶ್ವಸಂಸ್ಥೆ ತನಿಖಾ ಪಡೆಯ ವರದಿ
ಭದ್ರತಾ ಸಮಿತಿಯ ನಿರ್ಣಯ ಎ
ಕಾಯದೆ ನೇರ 'ಮಿಲಿಟರಿ ಹಸ್ತ
ಅಂತರಾಷ್ಟ್ರೀಯ ಬೆಂಬಲ' ಪಡೆ
ಅಧ್ಯಕ್ಷ ಒಬಾಮಾ ನಿರ್ಧರಿಸಿದ
ಚೋದ್ಯದ ಸಂಗತಿಯೆಂದರೆ
ಮತ್ತು ಸಿರಿಯಾ ಎರಡೂ ಈ ಒ
ಸಹಿ ಹಾಕಿಲ್ಲ. ಮಾತ್ರವಲ್ಲ, ಈ
ಅದರ ಉಲ್ಲಂಘನೆಗೆ ಶಿಕ್ಷೆಯಾಗಿ '
ಹಸ್ತಕ್ಷೇಪ'ವನ್ನು ಅನುಮೋದಿಸುವು
!! ಆದರೆ ಇರಾಕ್ ಯುದ್ಧ ವಿ
ಅಂತಹ ಯುದ್ಧ ತಾನು
ಮಾಡುವುದಿಲ್ಲ ಎಂದು
ಚುನಾವಣೆ ಗೆದ್ದ ಒಬಾಮಗೆ
ಯುದ್ಧ ಮಾಡಲು ನೆಪ ಮಾತ್ರ,
ನೆಪವೂ ಆಗಬಹುದು. ಎಲ್ಲರಿಗೂ
ಕಾಲಕ್ಕೂ ಮರುಳು ಮಾಡು

ಪು

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th ... BANGALORE-560086 Editor : **NITHYANANDASWAMI**